ಯಾದಗಿರಿ ಜಿಲ್ಲೆಯ ಶಿಶು ಭಾಷಾರೂಪಗಳು

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ನಾಗರಾಜ

ಮಾರ್ಗದರ್ಶಕರು

ಡಾ. ಸಾಂಬಮೂರ್ತಿ

ಸಹಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ 583 276

2013

ಯಾದಗಿರಿ ಜಿಲ್ಲೆಯ ಶಿಶು ಭಾಷಾರೂಪಗಳು

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ ಸಂಪ್ರಬಂಧ)

ಸಂಶೋಧನಾ ವಿದ್ಯಾರ್ಥಿ

ನಾಗರಾಜ

ಮಾರ್ಗದರ್ಶಕರು

ಡಾ. ಸಾಂಬಮೂರ್ತಿ

ಸಹಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೩

ದೃಢೀಕರಣ ಪತ್ರ

ಶ್ರೀ ನಾಗರಾಜ ಅವರು **ಯಾದಗಿರಿ ಜಿಲ್ಲೆಯ ಶಿಶು ಭಾಷಾರೂಪಗಳು** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಭಾಗಶಃ ಆಗಲಿ ಪೂರ್ಣವಾಗಿಯಾಗಲಿ ಬೇರಾವುದೇ ಡಿಪ್ಲೊಮ ಅಥವಾ ಪದವಿಗಾಗಿ ಒಪ್ಪಿಸಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 30.7.2013
ಸ್ಥಳ : ವಿದ್ಯಾರಣ್ಯ

(ಡಾ. ಸಾಂಬಮೂರ್ತಿ)
ಸಹಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಯಾದಗಿರಿ ಜಿಲ್ಲೆಯ ಶಿಶು ಭಾಷಾರೂಪಗಳು ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಸಲ್ಲಿಸಲು **ಡಾ. ಸಾಂಬಮೂರ್ತಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ. ಈ ಸಂಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಇಲ್ಲವೆ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 30-07-2013
ಸ್ಥಳ : ವಿದ್ಯಾರಣ್ಯ

(ನಾಗರಾಜ)
ಸಂಶೋಧನ ವಿದ್ಯಾರ್ಥಿ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ, ವೈಧಾನಿಕತೆ ಮತ್ತು ಅಧ್ಯಯನದ ಸಮೀಕ್ಷೆ

ಪ್ರಸ್ತಾವನೆ

ಭಾಷೆಯೆಂಬ ಜ್ಯೋತಿ ಸಂಸಾರದುದ್ದಕ್ಕೂ ಬೆಳಗದೆ ಹೋಗಿದ್ದರೆ ಇಡೀ ಭುವನತ್ರಯವೆಲ್ಲವು ಕತ್ತಲೆಯಿಂದ ತುಂಬಿ ಹೋಗುತ್ತಿತ್ತು ಎಂದು ಸಂಸ್ಕೃತದ ಲಾಕ್ಷಣಿಕ ದಂಡಿ ಹೇಳಿದ್ದಾನೆ. ಇದನ್ನು ಅರಿತುಕೊಂಡು ಮಾನವನು ಭಾಷೆಯೆಂಬ ಮಾಧ್ಯಮದಿಂದ ತನ್ನ ಭಾವನೆಗಳನ್ನು ಇನ್ನೊಬ್ಬರ ಜೊತೆಯಲ್ಲಿ ಹಂಚಿಕೊಳ್ಳಲು ವಾಹಕವಾಗಿ ರೂಪಿಸಿಕೊಂಡಿದ್ದಾನೆ. ಪ್ರತಿಯೊಬ್ಬರ ಭಾಷೆಯು ತೊದಲ ನುಡಿಯಿಂದ ಕಾಲದಿಂದ ಕಾಲಕ್ಕೂ ಬದಲಾಗುತ್ತಾ ಹೋಗುತ್ತದೆ.

ಪ್ರತಿಯೊಬ್ಬ ಮಾನವನು ತನ್ನ ಬಾಲ್ಯಾವಸ್ಥೆಯಲ್ಲಿ ಶ್ರಮ ಸಾಧ್ಯವಾದ ಪ್ರಯತ್ನದಿಂದ ಭಾಷೆಯನ್ನು ಕಲಿಯುತ್ತಾನೆ. ಒಬ್ಬ ವ್ಯಕ್ತಿ ತನ್ನ ಜೀವಿತದಲ್ಲಿ ಮಾಡುವ ಮಹತ್ಕಾರ್ಯಗಳಲ್ಲಿ ಒಂದೆಂದರೆ ತನ್ನ ಬಾಲ್ಯದಲ್ಲಿ ಭಾಷೆಯನ್ನು ಕಲಿಯುವುದು ಎನ್ನುತ್ತಾನೆ. ಭಾಷಾ ವಿಜ್ಞಾನಿಯೊಬ್ಬನು ಮನುಷ್ಯನಿಗೆ ಭಾಷೆ ಒಮ್ಮಿಂದೊಮ್ಮೆಲೆ ಬರುವುದಿಲ್ಲ. ಅದು ಆತನ ಬಹುದಿನದ ಸಾಧನೆ ಪ್ರಯತ್ನಗಳಿಂದ ಬರುತ್ತದೆ ಎನ್ನುತ್ತಾನೆ. ಅಂತೆಯೇ ಭಾಷೆ ಮನುಷ್ಯನ ಪ್ರಯತ್ನದ ಫಲವಾಗಿದೆ.

ಮನುಷ್ಯ ಹುಟ್ಟಿದಂದಿನಿಂದ ಪ್ರತಿ ಕ್ಷಣವು ಕೂಡಾ ತನ್ನ ಅಭಿಪ್ರಾಯಗಳು ಆಲೋಚನೆಗಳು ನೋವು ನಲಿವುಗಳನ್ನೆಲ್ಲಾ ಇತರರಿಗೆ ಅಭಿವ್ಯಕ್ತಿಸಲು ಪ್ರಯತ್ನಿಸುತ್ತಲೇ ಇರುತ್ತಾನೆ. ಇದಕ್ಕಾಗಿ ಬಗೆ ಬಗೆಯ ಸನ್ನೆ ಸಂಕೇತಗಳನ್ನು ಬಳಸುವುದು, ಕಣ್ಣು ಮಿಟುಕಿಸುವುದು, ತಲೆ ಅಲ್ಲಾಡಿಸುವುದು, ಅಳುವುದು, ಚಪ್ಪಾಳೆ, ತಟ್ಟುವುದು ಮುಂತಾದವುಗಳ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳುತ್ತಾನೆ. ಆದರೆ ಇವುಗಳಲ್ಲಿ ಯಾವುವೂ ಭಾಷೆಯಷ್ಟು ಪರಿಣಾಮಕಾರಿಯಲ್ಲ. ಹಾಗಾಗಿ

ನಮ್ಮ ಆಲೋಚನೆಗಳನ್ನು ವ್ಯವಸ್ಥಿತವಾಗಿ ಪರಿಣಾಮಕಾರಿಯಾಗಿ ವ್ಯಕ್ತಗೊಳಿಸುವ ಸಾಮರ್ಥ್ಯವೇ ಭಾಷೆಯಾಗಿದೆ.

ಅಲ್ಲಮಪ್ರಭುಗಳು ಮಾತೆಂಬುದು ಜ್ಯೋರ್ತಿಲಿಂಗ ಎನ್ನುವುದರ ಮೂಲಕ ಭಾಷೆಯ ಮಹತ್ವವನ್ನು ಸಾರಿದ್ದಾರೆ. ನಾವು ನಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ಪೂರೈಸಿಕೊಳ್ಳಬೇಕಾದರೆ ಮಾತು, ಭಾಷೆಯನ್ನೇ ಅವಲಂಬಿಸಬೇಕಾಗುತ್ತದೆ. ಭಾಷೆ ಮಾನವನ ಬದುಕಿಗೆ ಬೆಳಕು ನೀಡು ವಂಥದ್ದಾಗಿದೆ.

ಅಧ್ಯಯನದ ಉದ್ದೇಶ

ಹೈದರಾಬಾದ ಕರ್ನಾಟಕ ಪ್ರದೇಶದ ಇತಿಹಾಸವು ವಿಶಿಷ್ಟತೆಯಿಂದ ಕೂಡಿದೆ. ಈ ಪ್ರದೇಶವನ್ನು ಅನೇಕ ರಾಜಮನೆತನಗಳು ಆಳಿವೆ. ಕ್ರಿ.ಶ. ೧೩೪೭ರಲ್ಲಿ ಕಲಬುರ್ಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬಹುಮನಿ ಸಾಮ್ರಾಜ್ಯವು ಆಳ್ವಿಕೆಯನ್ನು ಆರಂಭಿಸಿತ್ತು. ನಂತರ ಆದಿಲಶಾಹಿಗಳು ಆಳಿದರು. ಅವರ ಬಳಿಕ ೧೯೪೮ರ ತನಕ ಹೈದರಾಬಾದ ಸಂಸ್ಥಾನದ ಕುತುಬ್‌ಶಾಹಿಗಳ ಆಳ್ವಿಕೆ ಯಿತ್ತು. ಹೀಗೆ ಸುಮಾರು ಆರು ನೂರಕ್ಕೂ ಹೆಚ್ಚು ವರ್ಷಗಳ ಕಾಲ ಮುಸ್ಲಿಂ ದೊರೆಗಳು ಈ ಪ್ರದೇಶವನ್ನು ಆಳಿದರು. ಈ ಆಳ್ವಿಕೆಯು ಸಹಜವಾಗಿ ಮುಸ್ಲಿಂ ಸಮಾಜವನ್ನು ಇಸ್ಲಾಮಿಕ್ ಸಂಸ್ಕೃತಿಯನ್ನು ಉರ್ದು ಭಾಷೆಯನ್ನು ಹುಟ್ಟು ಹಾಕಿತ್ತು. ಈ ಪ್ರದೇಶದಲ್ಲಿ ಸ್ಥಳೀಯ ಭಾಷೆಯಾದ ಕನ್ನಡದ ಜೊತೆ ನೆರರಾಜ್ಯಗಳ ಭಾಷೆಯಾದ ತೆಲುಗು, ಮರಾಠಿ, ಸಾಹಿತ್ಯ ಬೆಳೆದಿದೆ. ಮುಸ್ಲಿ ಸಮಾಜ ಇಸ್ಲಾಮಿಕ ಸಂಸ್ಕೃತಿ ಮತ್ತು ಉರ್ದು, ಮರಾಠಿ, ತೆಲಗು ಭಾಷೆಗಳು ಇಲ್ಲಿನ ಸಮಾಜ ಸಾಹಿತ್ಯ ಸಂಸ್ಕೃತಿಗಳ ಮೇಲೆ ಗಾಢಪ್ರಭಾವ ಬೀರಿದೆ. ಹಾಗಾಗಿ ಕನ್ನಡ ಮರಾಠಿ, ಉರ್ದು, ತೆಲುಗು ಭಾಷೆಗಳು ಪರಸ್ಪರ ಬೆರೆಯುತ್ತವೆ.

ಹಲವು ಧರ್ಮಗಳು, ಸಾವಿರಾರು ಜಾತಿ, ಉಪಜಾತಿಗಳು, ನೂರಾರು ಭಾಷೆಗಳು ಒಟ್ಟೊಟ್ಟಿಗೆ ಒಂದೇ ಸಮಾಜದಲ್ಲಿ ಕಾಣುವ ವಿಶಿಷ್ಟ ಸಂದರ್ಭ ಭಾರತದಲ್ಲಿ ಇದೆ. ಇಂತಹ ಬಹುಧರ್ಮೀಯ ಬಹುಸಂಸ್ಕೃತಿಯ, ಬಹುಭಾಷಿಕ ಪರಿಸರ ಒಂದೇ ಪ್ರದೇಶದಲ್ಲಿರುವುದು ವಿಶೇಷವೇ ಸರಿ. ಇಂತಹ ಸ್ಥಿತಿ ಹೊಂದಿರುವ ಯಾದಗಿರಿ ಪರಿಸರವೂ ಹಲವು ಭಾಷಿಕ ವೈಶಿಷ್ಟ್ಯಗಳಿಂದ ಕೂಡಿದೆ. ನಿಜವಾಗಿಯೂ ಇದು ಭಾಷಾಧ್ಯಯನಕಾರರಿಗೆ ಗಣಿಯಾಗಿದೆ. ಈ ಪ್ರದೇಶ ಕುರಿತು ಅದರಲ್ಲೂ ಈ ಪರಿಸರದ ಭಾಷೆಯ ಕುರಿತು ಅಧ್ಯಯನಗಳು ನಡೆದಿಲ್ಲವೆನ್ನುವಷ್ಟು ಕಡಿಮೆ. ಇನ್ನೊಂದು ಭಿನ್ನ ಭಾಷಿಕ ಪರಿಸರದಲ್ಲಿ ಇದ್ದು ನನ್ನ ಪರಿಸರದ ಭಾಷೆಯನ್ನು ಕುರಿತು ಆಲೋಚಿಸುವಾಗ ಬೇರಡೆಗಿಂತ ಭಿನ್ನವಾದ ಭಾಷಿಕ ವೈಶಿಷ್ಟ್ಯಗಳು ಅರಿವಿಗೆ ಬಂದಿವೆ. ಇಂತಹ ಭಾಷಿಕ ರೂಪಗಳ ಕುರಿತು ಅಧ್ಯಯನ ಮಾಡುವ ಸಲುವಾಗಿ ಅಲ್ಲಿನ ಮಕ್ಕಳ ಭಾಷಾರೂಪಗಳ ವೈಶಿಷ್ಟ್ಯಗಳನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ.

ಮಕ್ಕಳ ಭಾಷೆಯ ಕುರಿತು ಆದ ಅಧ್ಯಯನಗಳು ಭಾಷಿಕ ವರ್ತನೆಯನ್ನು ಅರಿತುಕೊಳ್ಳುವಲ್ಲಿ ತುಂಬಾ ಸಹಾಯಕಾರಿಯಾಗಿವೆ. ಇಲ್ಲಿಯವರೆಗೆ ಮಕ್ಕಳ ಭಾಷೆಯ ಕುರಿತು ನಡೆದ ಅಧ್ಯಯನಗಳು ಮಕ್ಕಳ ಭಾಷಾ ಕಲಿಕೆಯ ಸ್ವರೂಪ ಮತ್ತು ಬೆಳವಣಿಗೆ ಕುರಿತು ಆದವುಗಳು. ಆದರೆ ಮಕ್ಕಳಲ್ಲಿ ಕಾಣುವ ಕೆಲವು ವಿಶಿಷ್ಟ ಭಾಷಾರೂಪಗಳು ನಿಜವಾಗಿ ಕನ್ನಡ ಭಾಷಾ ಜಗತ್ತಿಗೆ ಅನಾವರಣ ಗೊಳ್ಳಬೇಕಿದೆ.

ಯಾದಗಿರಿ ಜಿಲ್ಲೆಯ ಶಿಶು ಭಾಷಾ ರೂಪಗಳನ್ನು ಅಧ್ಯಯನ ಮಾಡಿದಾಗ ಹಲವು ಭಾಷಾ ಪ್ರಭಾವದಲ್ಲಿರುವ ಯಾದಗಿರಿಯಂತಹ ಪರಿಸರದ ಶಿಶುಭಾಷಾ ರೂಪಗಳನ್ನು ಅಧ್ಯಯನ ಮಾಡುವುದು ಈ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ಈ ಅಧ್ಯಯನವು ಕೇವಲ ಯಾದಗಿರಿ ಜಿಲ್ಲೆಗೆ ಸೀಮಿತವಾಗಿದೆ. ಆದ್ದರಿಂದ ಯಾದಗಿರಿ ಜಿಲ್ಲೆಯಲ್ಲಿ ಕಂಡುಬರುವ ಶಿಶುಭಾಷಾ ರೂಪಗಳನ್ನು ಮಾತ್ರ ಸಂಗ್ರಹಿಸಲಾಗಿದೆ.

ಅಧ್ಯಯನದ ವೈಧಾನಿಕತೆ

ಮೂಲ ಆಕರಸಾಮಗ್ರಿ : ಮೂಲ ಆಕರ ಸಾಮಗ್ರಿಗಳಲ್ಲಿ ಕ್ಷೇತ್ರಕಾರ್ಯ ಅತ್ಯಂತ ಪ್ರಮುಖ ವಾದದ್ದು, ಅಧ್ಯಯನದ ಕ್ರಮಕ್ಕೆ ತಕ್ಕಂತೆ ಅಗತ್ಯವಾದಂತಹ ವಿಧಾನ ಇದಾಗಿದೆ. ಯಾವುದೇ ಪ್ರಕಾರದ ಸಂಶೋಧನೆ ಆಗಿರಲಿ ಅಲ್ಲಿನ ಇತಿಹಾಸ, ಭಾಷೆ, ಸಾಹಿತ್ಯ ಸಂಸ್ಕೃತಿ ಹೀಗೆ ಹಲವು ಬಗೆಯಲ್ಲಿ ಸಂಶೋಧನೆ ಮಾಡುವಾಗ ಕ್ಷೇತ್ರಕಾರ್ಯ ಪ್ರಮುಖವಾದದ್ದು. ಕ್ಷೇತ್ರಕಾರ್ಯದ ಮಾಹಿತಿಯನ್ನು ಮೂಲ ಆಕರ ಸಾಮಗ್ರಿಯಾಗಿ ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಯಾದಗಿರಿ ಜಿಲ್ಲೆಯ ಶಿಶುಭಾಷಾರೂಪಗಳು ಎಂಬ ಶೀರ್ಷಿಕೆಯನ್ನು ಹೊಂದಿರುವ ಈ ಅಧ್ಯಯನ ದಲ್ಲಿ ಎರಡು ಹಂತದಲ್ಲಿ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ.

ಮೊದಲನೆಯ ಹಂತದಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಕ್ಷೇತ್ರವನ್ನು ಕೆಲವು ಭಾಗಗಳಾಗಿ ವಿಂಗಡಿಸಿಕೊಂಡು ಶಿಶುಭಾಷಾ ರೂಪಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ದತ್ತಾಂಶಗಳನ್ನು ಇಟ್ಟುಕೊಂಡು ಸ್ವರೂಪಕ್ಕನುಸಾರವಾಗಿ ಹಲವು ಮಾದರಿಗಳನ್ನು ವಿಂಗಡಣೆ ಮಾಡಲಾಗಿದೆ. ಈ ವಿಂಗಡಣೆಯನ್ನು ಜಾತಿ ಆಧಾರಿತವಾಗಿ, ರಚನೆಯಾಧಾರಿತವಾಗಿ ವಿಂಗಡಿಸಲಾಗಿದೆ. ಯಾದಗಿರಿ ಜಿಲ್ಲೆಯು ದ್ವಿಭಾಷಿಕ, ಪರಿಸರ ಹೊಂದಿರುವುದರಿಂದ ಅದಕ್ಕನುಗಣವಾಗಿ ಭಾಷಿಕ ವಿಂಗಡಣೆ ಅಥವಾ ವರ್ಗೀಕರಣ ಮಾಡಲಾಗಿದೆ. ಈ ಹಂತದಲ್ಲಿ ಎದುರಾದ ಕೆಲವು ಪ್ರಶ್ನೆಗಳನ್ನಿಟ್ಟು ಕೊಂಡು ಎರಡನೇ ಹಂತದಲ್ಲಿ ಕ್ಷೇತ್ರಕಾರ್ಯ ಮಾಡಲಾಗಿದೆ. ಮೊದಲ ಹಂತದಲ್ಲಿ ಮಾಹಿತಿ

ಸಂಗ್ರಹಿಸುವಲ್ಲಿ ಬಿಟ್ಟುಹೋದ ಅಂಶಗಳನ್ನು ಎರಡನೆಯ ಹಂತದಲ್ಲಿ ಸಂಗ್ರಹಿಸಲಾಗಿದೆ. ಸಂಗ್ರಹಿಸಲಾದ ಶಿಶುಭಾಷಾ ರೂಪಗಳು ಮಕ್ಕಳು ಮತ್ತು ಪಾಲಕರು ಇಬ್ಬರು ವಾಕ್ಯದಲ್ಲಿ ಬಳಸುವಾಗ ರಚನೆಗಳನ್ನು ಸೂಕ್ಮವಾಗಿ ಅವಲೋಕಿಸುವುದರೊಂದಿಗೆ ಅವುಗಳನ್ನು ದಾಖಲಿಸ ಲಾಗಿದೆ. ಈ ಹಂತದ ಕ್ಷೇತ್ರಕಾರ್ಯವು ಪ್ರಮುಖವಾಗಿರುವುದರಿಂದ ಇಲ್ಲಿ ಅತೀ ಸೂಕ್ಷ್ಮವಾಗಿ ಕಾರ್ಯಕೈಗೊಳ್ಳಲಾಗಿದೆ. ಮಗುವಿನ ಚೇಷ್ಟೆ ಚಟುವಟಿಕೆಗಳನ್ನು ಪಾಲಕರು ವ್ಯವಹರಿಸುವ ರೀತಿ ಪರಿಚಯವಿಲ್ಲದವರೊಂದಿಗೆ ವ್ಯವಹರಿಸುವ ರೀತಿ ಮತ್ತು ಇತರ ಮಕ್ಕಳೊಂದಿಗೆ ಬೆರೆಯುವಿಕೆ ಅಥವಾ ಚಲನವಲನಗಳನ್ನು ಕೂಡಾ ಅವಲೋಕಿಸಲಾಗಿದೆ. ಒಟ್ಟಾರೆಯಾಗಿ ಸಂಗ್ರಹಿಸಲಾದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗುವುದು.

ಯಾವುದೇ ಸಂಶೋಧನಾತ್ಮಕ ಅಧ್ಯಯನ ಕೈಗೊಳ್ಳಬೇಕಾದರೆ ಅದಕ್ಕೊಂದು ಶಿಸ್ತಿನ ಅಗತ್ಯತೆ ಇರುತ್ತದೆ. ಮಾನವ ವಿಕಾಸವಾಗುತ್ತ ಹೋದಂತೆ ಅನೇಕ ಚೌಕಟ್ಟುಗಳನ್ನು ರೂಪಿಸಿಕೊಂಡಿದ್ದಾನೆ ಮತ್ತು ಅಂತಹ ಚೌಕಟ್ಟುಗಳನ್ನು ಶಿಸ್ತುಬದ್ಧವಾಗಿ ಅರಿಯಲು ಅನೇಕ ನಿಯಮಗಳನ್ನು ಕಟ್ಟಿಕೊಂಡಿದ್ದಾನೆ. ಇಂತಹ ಕಟ್ಟಳೆಗಳು ಪ್ರತಿಯೊಬ್ಬ ಅಧ್ಯಯನಕಾರನಿಗೂ ಅವನು ಆಯ್ದುಕೊಂಡ ವಿಷಯದಲ್ಲಿ ಗುರುತಿಸಿಕೊಂಡು ಸಮಸ್ಯೆಗಳನ್ನು ಸಮರ್ಥವಾಗಿ ಉತ್ತರ ಕಂಡುಕೊಳ್ಳುವಲ್ಲಿ ಸಹಾಯಕವಾಗುತ್ತವೆ.

ಪ್ರಸ್ತುತ ಈ ಅಧ್ಯಯನವು ಭಾಷಾವಿಜ್ಞಾನ ಅಧ್ಯಯನ ಮಾದರಿಗಳಲ್ಲಿ ಒಂದಾದ ವಿವರಣಾತ್ಮಕ ಮಾದರಿಯನ್ನು ಇಟ್ಟುಕೊಂಡು ಮಕ್ಕಳ ಭಾಷೆಯನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಯನದ ಸ್ವರೂಪ

ಅಧ್ಯಾಯ ಒಂದರಲ್ಲಿ ಈ ಅಧ್ಯಯನಕ್ಕೆ ಇರುವ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಸ್ವರೂಪ ಮತ್ತು ಅಧ್ಯಯನ ಸಮೀಕ್ಷೆ ವಿವರಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಮಗು ಹುಟ್ಟಿದಾಗಿನಿಂದ ಹಂತಹಂತವಾಗಿ ಭಾಷಿಕ ರೂಪಗಳನ್ನು ಕಲಿತುಕೊಳ್ಳುವ ಮತ್ತು ಬಳಸುವ ಕ್ರಮಗಳನ್ನು ಪರಿಚಯಿಸಲಾಗಿದೆ.

ಅಧ್ಯಾಯ ಮೂರು ಈ ಅಧ್ಯಾಯದಲ್ಲಿ ಶಿಶುಭಾಷಾ ರೂಪಗಳನ್ನು ರಚನೆಗನುಗುಣವಾಗಿ ವರ್ಗೀಕರಿಸಲಾಗಿದೆ ಮತ್ತು ಅವುಗಳಲ್ಲಾದ ಭಾಷಿಕ ಪರಿವರ್ತನೆಗಳನ್ನು ವಿವರಿಸಲಾಗಿದೆ. ಶಿಶುಭಾಷಾ ರೂಪಗಳಲ್ಲಿ ಸಂಕ್ಷಿಪ್ತ ಭಾಷಿಕ ಬದಲಾವಣೆ, ರಾಚನಿಕ ವ್ಯತ್ಯಾಸಗಳನ್ನು ವಿವರಣಾತ್ಮಕ ಮಾದರಿಯಲ್ಲಿ ವಿವರಿಸಲಾಗಿದೆ.

ಅಧ್ಯಾಯ ನಾಲ್ಕು ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಅನುಕೂಲವಾಗುವಂತೆ ಗುರುತಿಸಿ ಕೊಂಡಿರುವ ವ್ಯಾಪ್ತಿಯ ಭಾಷಿಕರ ಸಾಮಾಜಿಕ ಅಂತಸ್ಥಿನ ಆಧಾರದ ಮೇಲೆ ಭಾಷಿಕ ರೂಪ ಗಳಲ್ಲಿ ಸಾಮಾಜಿಕ ವ್ಯತ್ಯಾಸಗಳನ್ನು ಗುರುತಿಸಲಾಗಿದೆ.

ಅಧ್ಯಾಯ ಐದು ಈ ಅಧ್ಯಾಯವು ಸಂಪ್ರಬಂಧದ ಸಮಾರೋಪ ಭಾಗವಾಗಿರುವುದರಿಂದ ಅಧ್ಯಯನದ ಪ್ರಾರಂಭದಲ್ಲಿ ಗುರುತಿಸಿಕೊಂಡಿರುವ ಉದ್ದೇಶಕ್ಕೆ ಅನುಗುಣವಾಗಿ ಮತ್ತು ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ವಿವರಿಸಲಾಗಿದೆ.

ಅಧ್ಯಯನದ ಸಮೀಕ್ಷೆ

ಭಾಷೆ ನಿಂತ ನೀರಲ್ಲ, ಅದು ಸದಾ ಹರಿಯುವ ಒಂದು ಜೀವನದಿ. ಪರಿವರ್ತನೆಯೇ ಅದರ ಪ್ರಮುಖ ಲಕ್ಷಣ. ಕಾಲ, ದೇಶಗನುಗುಣವಾಗಿ ಸ್ಥಿತ್ಯಂತರ ಹೊಂದುತ್ತಾ ಹೋಗುವುದು ಜೀವಂತ ಭಾಷೆಯ ಪ್ರಮುಖ ಲಕ್ಷಣ. ಯಾವಾಗಲೂ ಅದು ಬೆಳವಣಿಗೆಯನ್ನು ಹೊಂದುತ್ತಲೇ ಇರುತ್ತದೆ. ಹೀಗಾಗಿ ಭಾಷೆಯಲ್ಲಿ ಕಾಲದಿಂದ ಕಾಲಕ್ಕೆ ಅನೇಕ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಮಾನವನ ಈ ಭಾಷಾಪರಿವರ್ತನೆಗೆ ಸಮಾಜ ಸಂಸ್ಕೃತಿ ವಿಜ್ಞಾನ, ಸಂಶೋಧನೆ ಮಾಡಲಾದವುಗಳೇ ಕಾರಣವಾಗಿವೆ.

ಮಕ್ಕಳ ಭಾಷೆಯ ಬಗ್ಗೆ ಅಧ್ಯಯನಗಳು ಪ್ರಾರಂಭವಾಗಿದ್ದು ೨೦ನೆಯ ಶತಮಾನದಲ್ಲಿ, ಇವುಗಳು ಮಗುವಿನ ಭಾಷಾ ಕಲಿಕೆಯ ಸ್ವರೂಪವನ್ನು ತಿಳಿಸುವ ಅಧ್ಯಯನಗಳಾಗಿದ್ದವು. ಅಮೇರಿಕಾದ ಮನೋವಿಜ್ಞಾನಿ ರೋಜರ್ ಬ್ರೌನ್ ೧೯೭೦ರಲ್ಲಿ ಕೇವಲ ಮೂರು ವಾಕ್ಯಗಳನ್ನು ಆಯ್ದು ಅಧ್ಯಯನ ನಡೆಸಿದ್ದಾರೆ. ೧೯೨೦ರಲ್ಲಿ ಬ್ರಿಟನ್ನಿನ ಮನೋ ಭಾಷಾಶಾಸ್ತ್ರಜ್ಞ ಗೋರ್ಡನ್ ವೇಲ್ಸ್ ಮುಂತಾದವರನ್ನು ಉಲ್ಲೇಖಿಸಬಹುದು.

ಡಾ. ಆರ್. ರಾಮಕೃಷ್ಣ ಅವರು ರಚಿಸಿರುವ ಭಾಷಾವಿಜ್ಞಾನ ವಿಹಾರ (೧೯೯೯) ಎಂಬ ಪುಸ್ತಕ ದಲ್ಲಿ ಬಾಲಭಾಷೆ ಎಂಬ ಲೇಖನದಲ್ಲಿ ಮಗುವಿನ ಭಾಷಾ ಬೆಳವಣಿಗೆ ಮತ್ತು ಇದುವರೆಗಿನ ನಡೆದಿರುವ ಅಧ್ಯಯನಗಳ ಬಗ್ಗೆ ಚರ್ಚಿಸಿದ್ದಾರೆ.

ಡಾ. ಸಂಗಮೇಶ ಸವದತ್ತಿ ಮಠ ಬರೆದಿರುವ ಭಾಷಾಲೋಕ (೧೯೯೯) ಎಂಬ ಪುಸ್ತಕದಲ್ಲಿ ಮಕ್ಕಳ ಭಾಷೆ ಎಂಬ ಲೇಖನದಲ್ಲಿ ಮಗುವಿನ ಭಾಷೆಯ ಕಲಿಕೆಯ ಹಂತಗಳು ಮತ್ತು ಅದರ ಬೆಳವಣಿಗೆಯನ್ನು ಕುರಿತು ವಿವರಿಸಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ಭಾಷಾ ವಿಶ್ವಕೋಶದಲ್ಲಿ ಡಾ. ಕೆ.ವಿ.ನಾರಾಯಣ (೨೦೦೦) ಅವರು ಮಕ್ಕಳ ಭಾಷೆಯ ಕಲಿಕೆಯ ಮಾಹಿತಿ, ಸಂಗ್ರಹಕಾರ್ಯ ವಿಧಾನ ಎಡರುತೊಡರುಗಳ ಬಗ್ಗೆ ವಿವರಿಸಿದ್ದಾರೆ. ಭಾಷೆಯ ಸುತ್ತಮುತ್ತ (೨೦೦೧) ಎಂಬ ಪುಸ್ತಕದಲ್ಲಿ ಮಗುವಿನ ಭಾಷೆಯ ಅಧ್ಯಯನ ಮತ್ತು ಮಕ್ಕಳಲ್ಲಿ ಭಾಷಾ ಕಲಿಕೆಯ ಆರಂಭ ಎಂಬ ಲೇಖನಗಳನ್ನು ಬರೆದಿದ್ದಾರೆ.

ಡಾ. ಬಸವರಾಜ ಕೋಡಗುಂಟಿ ಅವರು ಬರೆದಿರುವ ಮಕ್ಕಳ ಭಾಷೆ (೨೦೦೩) ಮತ್ತು ಮಕ್ಕಳ ಭಾಷಾವಿಜ್ಞಾನ ಮತ್ತು ಇತರ ಲೇಖನಗಳು (೨೦೦೭) ಎಂಬ ಪುಸ್ತಕದಲ್ಲಿ ಮಕ್ಕಳ ಭಾಷಾ ವಿಜ್ಞಾನ, ಮಗು ಮತ್ತು ಭಾಷೆ ಮಕ್ಕಳ ಭಾಷೆ ಒಂದು ಟಿಪ್ಪಣಿ, ಎನ್ನುವ ಲೇಖನದಲ್ಲಿ ಮಗುವಿನ ಭಾಷೆಯ ಬೆಳವಣಿಗೆ ಮತ್ತು ಭಾಷೆಯ ಕಲಿಕೆಯ ಹಂತಗಳನ್ನು ವಿವರಿಸಲಾಗಿದೆ.

ಡಾ. ಕೆ. ಕೆಂಪೆಗೌಡರು ಬರೆದಿರುವ ವ್ಯಕ್ತಿ ಭಾಷಾವಿಜ್ಞಾನ ಎಂಬ ಲೇಖನ ಮಕ್ಕಳ ಭಾಷೆ ಬಗೆಗಿನ ವಿವರಣೆ ಒಳಗೊಂಡಿದೆ.

ಡಾ. ಸಾಂಬಮೂರ್ತಿ ಅವರು ರಚಿಸಿರುವ 'ನುಡಿನಡೆ' (೨೦೧೨) ಪುಸ್ತಕದಲ್ಲಿನ ಬಾಲ ಭಾಷೆ ವಿಶಿಷ್ಟ ಪದಕೋಶ ಎಂಬ ಲೇಖನದಲ್ಲಿ ವಿವಿಧ ಪ್ರದೇಶದ ತಾಯಂದಿರಿಂದ ಸಂಗ್ರಹಿಸಿದ ರೂಪಗಳು ತಾಯಿ ಮತ್ತು ಮಗುವಿನ ನಡುವೆ ನಡೆಯುವ ಸಂಭಾಷಣೆಯಲ್ಲಿ ಬಳಕೆಗೊಳ್ಳುವ ವಿಶಿಷ್ಟ ಪದರೂಪಗಳನ್ನು ವಿವರಿಸಿದ್ದಾರೆ. ಮಗುವಿನ ಭಾಷಾಕಲಿಕೆ ಹಾಗೂ ಬೆಳವಣಿಗೆಯ ಕುರಿತು ಚರ್ಚಿಸಿದ್ದಾರೆ.

ಕನ್ನಡದ ಮಟ್ಟಿಗೆ ಡಾ. ಎಲ್. ದೇವಕಿಯವರು (೧೯೯೧) ಡಾ. ಎ.ಕೆ. ಶ್ರೀವತ್ಸವ ಅವರ ಮಾರ್ಗದರ್ಶನದಲ್ಲಿ "ಡೆವಲಪ್‌ಮೆಂಟ್ ಆಫ್ ಮಾರ್ಪೊಲಜಿಕಲ್ ರೂಲ್ಸ್ ಇನ್ ಚಿಲ್ಡ್ರೆನ್" ಎಂಬ ವಿಷಯದ ಬಗ್ಗೆ ಅಧ್ಯಯನ ಮಾಡಿದ್ದಾರೆ. ಅವರು ಈ ಮಹಾಪ್ರಬಂಧವನ್ನು ಭಾರತೀಯ ಭಾಷಾ ಸಂಸ್ಥಾನ ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ಸಲ್ಲಿಸಿದ್ದಾರೆ. ಇದಕ್ಕೆ ಬೇಕಾದ ದತ್ತಾಂಶದ ವಿಶ್ಲೇಷಣೆ ಮಾಡುವಾಗ ಮಕ್ಕಳ ವಯಸ್ಸು, ಲಿಂಗ, ಸಮಾಜೋ ಆರ್ಥಿಕ, ವರ್ಗಗಳನ್ನು ಗಣನೆಗೆ ತೆಗೆದುಕೊಂಡಿದ್ದಾರೆ. ಮೂರರಿಂದ ಏಳು ವರ್ಷಗಳ ಮಕ್ಕಳ ವಯೋಮಿತಿಯನ್ನು ಹೊಂದಿರುವ ತಮಿಳು ಮತ್ತು ಕನ್ನಡ ಮಾತೃಭಾಷೆಯುಳ್ಳ ಕನ್ನಡ ಮಕ್ಕಳನ್ನು ಆಯ್ಕೆಮಾಡಿ ಕೊಂಡು ಅಧ್ಯಯನ ಮಾಡಿದ್ದಾರೆ.

ಎಂ.ವಿ. ಗಿರಿಜಮ್ಮ ಅವರು ಡಾ. ಸಿ.ಎಸ್. ರಾಮಚಂದ್ರ ಅವರ ಮಾರ್ಗದರ್ಶನದಲ್ಲಿ "ಮಕ್ಕಳಲ್ಲಿ ಕನ್ನಡ ಭಾಷಾ ಕಲಿಕೆ" ಎಂಬ ವಿಷಯದ ಬಗ್ಗೆ ಅಧ್ಯಯನ ಮಾಡಿದ್ದಾರೆ. ಈ ಮಹಾಪ್ರಬಂಧವನ್ನು ಭಾಷಾವಿಜ್ಞಾನ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾಲಯಕ್ಕೆ ೨೦೦೬ರಲ್ಲಿ ಸಾದರಪಡಿಸಿದ್ದಾರೆ. ಒಂಭತ್ತು ತಿಂಗಳಿನಿಂದ ನಾಲ್ಕುವರೆ ವರ್ಷದ ಮಕ್ಕಳ ಧ್ವನಿ, ಪದ, ಪದಪುಂಜ ಹಾಗೂ ವಾಕ್ಯಗಳ ಕಲಿಕೆ ಮತ್ತು ಬೆಳವಣಿಗೆಯನ್ನು ವಿವರಣಾತ್ಮಕವಾಗಿ ಅಧ್ಯಯನ ಮಾಡಿದ್ದಾರೆ.

ಎನ್.ಕೆ. ಮಂಜುಳ ಅವರು (೨೦೦೦) ಡಾ. ಕೆ.ವಿ.ನಾರಾಯಣ ಅವರ ಮಾರ್ಗದರ್ಶನದಲ್ಲಿ "ಮಕ್ಕಳಲ್ಲಿ ವಾಕ್ಯ ರಚನಾ ನಿಯಮಗಳ ಬೆಳವಣಿಗೆ" ಎಂಬ ಶೀರ್ಷಿಕೆಯಡಿಯಲ್ಲಿ ಹೊಂದಿರುವ

ಈ ಮಹಾಪ್ರಬಂಧವನ್ನು ಕನ್ನಡ ಭಾಷಾಧ್ಯಾಯನ ವಿಭಾಗ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ್ದಾರೆ. ಯಾವುದೇ ಭಾಷೆಯ ದೇಶಿಯ ಮೂಲಿಗರು ಆ ಭಾಷೆಗೆ ಸಂಬಂಧಪಟ್ಟಂತೆ ವ್ಯಾಕರಣ ಬದ್ಧವಾಗಿ ಮಾತನಾಡುತ್ತಾರೆ. ಆ ಮಾತುಗಳ ರಚನೆ ಮತ್ತು ನಿಮಯಗಳ ಬಗ್ಗೆ ಕೇಳಿದರೆ ವಿವರಿಸಲು ಸಾಧ್ಯವಾಗದಿದ್ದರೂ ಅವರಲ್ಲಿ ಸಹಜವಾದ ಸುಪ್ತವಾಗಿರುವ ಆ ಭಾಷೆಯ ಸಾಮರ್ಥ್ಯವಿರುತ್ತದೆ. ಮಕ್ಕಳು ಕೇವಲ ಒಂದು ಮತ್ತು ಎರಡು ಪದಗಳನ್ನು ಉಚ್ಚರಿಸಿದರೂ ಅವು ಇಡಿಯಾದ ವಾಕ್ಯವನ್ನು ಪ್ರತಿನಿಧಿಸುತ್ತವೆ. ವಾಕ್ಯದ ಅಂತಸ್ಥರೂಪ ಮಗುವಿಗೆ ತಿಳಿದಿರುತ್ತದೆ. ಆ ಅಂತಸ್ಥ ತಿಳುವಳಿಕೆಯನ್ನು ಮಕ್ಕಳು ವಯೋಮಾನಕ್ಕೆ ಅನುಸಾರವಾಗಿ ಹೇಗೆ ಅಭಿವ್ಯಕ್ತಿಗೊಳಿಸುತ್ತಾರೆ ಎಂಬುದನ್ನು ಈ ಅಧ್ಯಯನದಲ್ಲಿ ಅಧ್ಯಯನಕಾರರು ವಾಕ್ಯರಚನೆಯ ನಿಯಮಗಳ ಮೂಲಕ ಮಂಡಿಸಿದ್ದಾರೆ.

ಮಕ್ಕಳಲ್ಲಿ ವಾಕ್ಯದ ರಚನೆಯ ನಿಯಮಗಳು ಯಾವಾಗ ಮತ್ತು ಯಾವ ಕ್ರಮದಲ್ಲಿ ಘಟಿಸುತ್ತದೆ. ಸರ್ವನಾಮ, ನಾಮಪದ, ಕ್ರಿಯಾಪದ, ವಿಶೇಷಣಗಳು ಬರುವ ಅನುಕ್ರಮಣಿಕೆಗಳನ್ನು ಮತ್ತು ನಾಮಪದ, ಕ್ರಿಯಾಪದ, ಗುಚ್ಛಗಳು ಹಾಗೂ ನಕರಾತ್ಮಕ ಪ್ರಶ್ನಾರ್ಥಕ ವಾಕ್ಯಗಳಲ್ಲಿ ಅಭಿವ್ಯಕ್ತಿಗೊಳ್ಳುವ ವಯೋಮಾನ ಯಾವುದು ಅವುಗಳಲ್ಲಿ ಅನುಕ್ರಮವಿದೆಯೇ ಎಂಬುದನ್ನು ಕಂಡುಕೊಳ್ಳುವುದು ಅಧ್ಯಯನಕ್ಕೆ ಗುರುತಿಸಿಕೊಂಡ ಸಮಸ್ಯೆ ಮತ್ತು ಇದಕ್ಕೆ ಪರಿಹಾರ ಕಾಣುವುದು ಈ ಅಧ್ಯಯನದ ಉದ್ದೇಶಗಳಲ್ಲೊಂದಾಗಿದೆ.

ಈ ವಿಷಯವು ಮನೋಭಾಷಾ ವಿಜ್ಞಾನದ ಕ್ರಮಕ್ಕೆ ಸೇರಿದ ಘಟಕವಾಗಿದೆ. ಭಾಷಾಗಳಿಕೆಯ ಆಯಾಮಗಳು ಮೇಲ್ನೋಟಕ್ಕೆ ಸಹಜವೆನಿಸಿದರೂ ಆಂತರಿಕವಾಗಿ ತುಂಬಾ ಕುತೂಹಲಕಾರಿಯಾಗಿರುತ್ತದೆ. ಈ ಅಧ್ಯಯನದ ದತ್ತಾಂಶಕ್ಕಾಗಿ ಪ್ರಬಂಧಕಾರರು ಹೊಸಪೇಟೆ, ಕಮಲಾಪುರ, ಬಳ್ಳಾರಿ ಜಿಲ್ಲೆಯ ಕೆಲವು ಗ್ರಾಮಗಳನ್ನು ನಿಗದಿಪಡಿಸಿಕೊಂಡಿದ್ದಾರೆ. ಈ ಅಧ್ಯಯನಕ್ಕೆ ೧೮ರಿಂದ ೨೭ ತಿಂಗಳ ವಯೋಮಾನದ ಮಕ್ಕಳನ್ನು ಆಯ್ಕೆಮಾಡಿಕೊಂಡಿರುವುದಾಗಿ ಅಧ್ಯಯನ ವಿಧಾನದಲ್ಲಿ ಉಲ್ಲೇಖಿಸಿದ್ದಾರೆ. ಮಕ್ಕಳಲ್ಲಿ ಭಾಷಾ ಕೌಶಲ್ಯಗಳನ್ನು ಬೆಳೆಸುವುದಕ್ಕೆ ಮತ್ತು ಭಾಷಾ ಸಾಮರ್ಥ್ಯವನ್ನು ಪಡೆಯಲು ಮಕ್ಕಳಲ್ಲಿರುವಂತಹ ತೊಂದರೆಗಳನ್ನು ತಿಳಿಯಲು ಸಹಾಯಕವಾಗುತ್ತದೆ, ಮತ್ತು ಶಿಕ್ಷಣ, ವೈದ್ಯಕೀಯ ಹಾಗೂ ಭಾಷಾ ಕ್ಷೇತ್ರದ ಅಧ್ಯಯನ ಪ್ರಗತಿಗೆ ಸಹಾಯಕವಾಗಬಲ್ಲದೆಂದು ಸಂಶೋಧಕರ ಅಭಿಪ್ರಾಯವಾಗಿದೆ.

ಅಧ್ಯಾಯ ಎರಡು

ಶಿಶು ಭಾಷಾರೂಪಗಳ ಪರಿಚಯ

ಜನನದಿಂದ ಹಿಡಿದು ಐದು ವರ್ಷಗಳವರೆಗೆ ಇರುವ ಮಗುವಿಗೆ ಶಿಶು ಎಂದು ಕರೆಯಲಾಗುತ್ತದೆ. ಈ ಕಾಲದ ಅವಧಿಯಲ್ಲಿಯೇ ಮಗುವಿಗಾಗಿ ಅನೇಕ ಚಟುವಟಿಕೆಗಳು ನಿರ್ಮಾಣಗೊಂಡಿರುತ್ತವೆ. ಅವುಗಳಲ್ಲಿ ಮಗುವಿಗೆ ಭಾಷೆಯನ್ನು ಕರಗತ ಮಾಡಿಸುವ ಪ್ರಕ್ರಿಯೆಯು ಒಂದಾಗಿದೆ. ಮಗು ಆಂಗಿಕ ಚಲನಗಳಿಂದಾಗಲಿ, ಅಳುವಿನ ಮೂಲಕವಾಗಲಿ ಹೊರಡಿಸುವ ಅಸ್ಪಷ್ಟ ಧ್ವನಿಗಳನ್ನು ಭಾಲಭಾಷೆಯೆಂದು ಕರೆಯಲಾಗುತ್ತದೆ. ಬಾಲಭಾಷೆಯನ್ನುವುದು ಒಂದು ರೀತಿಯ (ಫಿಡ್ಜನ್) ಮಿಶ್ರಭಾಷಾ ಇದ್ದಂತೆ ಎಂದು ಜೇಕಬ್‌ಸನ್ (ಉಲ್ಲೇಖ:ರಾಮಕೃಷ್ಣ, ೧೯೯೯) ಹೇಳುತ್ತಾರೆ. ಚಿಕ್ಕ ಮಕ್ಕಳೊಡನೆ ಮಾತನಾಡಲು ಬಳಸುವ ಭಾಷೆಯ ಒಂದು ವಿಶಿಷ್ಟ ರೂಪವೇ ಬಾಲಭಾಷೆಯೆಂದು ಪರ್ಗುಸನ್(ಉಲೇಖ: ರಾಮಕೃಷ್ಣ, ೧೯೯೯) ವಿವರಿಸುತ್ತಾರೆ.

ಮಕ್ಕಳಿಗೊಂದು ಭಾಷೆಯಿದೆ. (ಬಾಲಭಾಷೆ) ಕಲ್ಪನೆಯ ವಿಚಿತ್ರವಾದದ್ದು, ಮಗು ತನಗೆ ಒಂದು ಹೊಸ ಭಾಷೆಯನ್ನು ರೂಪಿಸಿಕೊಳ್ಳಲಾರದು. ಅಥವಾ ಮಗುವಿಗಾಗಿ ಅವರ ಪಾಲಕರು ಒಂದು ಹೊಸ ಭಾಷೆಯನ್ನು ಕಟ್ಟಲಾರರು. ಆದರೆ ಒಂದು ಭಾಷಿಕ ಸಮುದಾಯ ತನ್ನ ಭಾಷಿಕ ಅಂಶಗಳಿಂದ ಕೆಲವು ಆಯ್ದ ಪದಗಳನ್ನು ಕೆಲವು ಮಾರ್ಪಾಟಿನೊಂದಿಗೆ ಮಕ್ಕಳಿಗಾಗಿ ರೂಪಿಸಬಲ್ಲದು. ಹೆಚ್ಚೆಂದರೆ ಕೆಲವು ಹೊಸ ರೂಪಗಳನ್ನು ಸೃಷ್ಟಿಸಬಲ್ಲದು. ಇವುಗಳು ಕೂಡ ಆ ಪರಿಸರದ ಭಾಷೆಯ ನಿಯಮಕ್ಕನುಗುಣವಾಗಿಯೇ ಸೃಷ್ಟಿಗೊಂಡಿರುತ್ತದೆ. ಅಂದರೆ ಒಂದು ಭಾಷೆಯಲ್ಲಿನ ಶಿಶುಭಾಷೆಯ ರೂಪಗಳೆಂದು ಕರೆದುಕೊಳ್ಳವ ಪದಗಳು ಆ ಭಾಷೆಯ ಪದಕಟ್ಟುವ ಅಥವಾ ಪದಗಳ ರಚನೆಯಲ್ಲಾಗುವ ಮಾರ್ಪಾಟುಗಳ ನಿಯಮಕ್ಕನುಗುಣವಾಗಿಯೇ ರೂಪ ಗೊಂಡಿರುತ್ತವೆ. ಈ ರೂಪಗಳು ಆ ಮೂಲ ಭಾಷೆಯ ಸರಳೀಕೃತ ರೂಪಗಳಾಗಿರುತ್ತವೆ.

ಅಥವಾ ಭಾಷಿಕ ಪರಿಸರದಲ್ಲಿ ಉತ್ಪತ್ತಿಯಾಗುವ ಧ್ವನಿಗಳ (ಪ್ರಾಣಿ, ವಸ್ತು, ವಾಹನಗಳು ಇತ್ಯಾದಿ) ಅನುಕರಣವಾಗಿರುತ್ತವೆ.

ಈ ಎಲ್ಲಾ ಪ್ರಕ್ರಿಯೆಗಳ ಹಿಂದೆ ಆ ಹುಟ್ಟಿದ ಮಗುವಿಗೆ ನಿಧಾನವಾಗಿ ಅದು ಬಾಳಬೇಕಿರುವ ಪರಿಸರದ ಪರಿಚಯ ಮಾಡಿಕೊಡುವುದಾಗಿರುತ್ತದೆ. ಮತ್ತು ಮಕ್ಕಳಿಗೆ ಭಾಷೆ ಕಲಿಸುವ ಉದ್ದೇಶ ಹೊಂದಿರುತ್ತದೆ. ಹೀಗೆ ಇದನ್ನು ಒಂದು ಭಾಷೆ ಎಂದು ಗುರುತಿಸುವ ಬದಲು ಒಂದು ನಿರ್ದಿಷ್ಟ ವರ್ಗಕ್ಕಾಗಿ ನಿರ್ದಿಷ್ಟ ಕಾಲಾವಧಿಗಾಗಿ ಬಳಸಲ್ಪಡುವ ಒಂದು ಭಾಷಿಕ ರೂಪವೆನ್ನುವದೇ ಸೂಕ್ತ. ಈ ನಿಟ್ಟಿನಲ್ಲಿ ಹೆಚ್ಚಿನ ಚರ್ಚೆಗಳು ಈ ವಾದವನ್ನು ಬಲ ನೀಡಬಲ್ಲವು. ಮಕ್ಕಳಿಗಾಗಿ ರೂಪಗೊಳ್ಳುವ ಈ ಭಾಷಿಕ ರೂಪಗಳು ಮಕ್ಕಳಲ್ಲಿ ಕ್ರಮೇಣ ಭಾಷಿಕ ಪ್ರಜ್ಞೆಯನ್ನು ಬೆಳಸಬಲ್ಲವುಗಳಾಗಿರುತ್ತವೆ. ಈ ರೂಪಗಳು ಮಕ್ಕಳ ಒಂದು ನಿರ್ದಿಷ್ಟ ವಯಸ್ಸಿನವರೆಗೆ ಮಾತ್ರ ಬಳಕೆಯಲ್ಲಿರುತ್ತವೆ. ಈ ರೂಪಗಳು ತಾಯಿ ಮತ್ತು ಮಗುವಿನ ನಡುವೆ ಒಂದು ಅನ್ಯೋನ್ಯ ಸಂಬಂಧವನ್ನು ಬೆಳೆಸುತ್ತದೆ. ಇಲ್ಲಿ ತಾಯಿಯ ಕೆಲಸ ಮಗುವಿಗೆ ಜಾಗೃತಿ ಮೂಡಿಸುವುದಾಗಿರುತ್ತದೆ. ಮಗುವೂ ಕೂಡ ಹಂತಹಂತವಾಗಿ ಸ್ವಪ್ರಯತ್ನ ಪೂರ್ವಕ ಭಾಷೆಯನ್ನು ರೂಪಿಸಿಕೊಳ್ಳುವ ಪ್ರತಿಕ್ರಿಯೆ ತೋರಿಸುತ್ತದೆ. ಶಿಶು ಭಾಷಾ ರೂಪಗಳನ್ನು ಪರಿಚಯ ಮಾಡಿಕೊಳ್ಳುವ ಮುಂಚೆ ಮಗುವಿನ ಭಾಷಾ ಕಲಿಕೆಯ ಹಂತಗಳನ್ನು ಗುರುತಿಸುವ ಅಗತ್ಯತೆಯಿದೆ. ಇದು ಮಗು ಭಾಷಿಕ ಅಂಶಗಳ ಕಲಿಕೆಯಲ್ಲಿ ಸಾಧಿಸುವ ಪ್ರಗತಿಯನ್ನು ಗುರುತಿಸುವುದಾಗಿರುತ್ತದೆ.

ಒಂದು ಭಾಷೆಯನ್ನು ಮಗು ಹೇಗೆ ಕಲಿತುಕೊಳ್ಳುತ್ತದೆ. ಯಾವ ವಯಸ್ಸಿನ ಹಂತದಲ್ಲಿ ಪದಗಳನ್ನು ಉಚ್ಚರಿಸುತ್ತದೆ. ಯಾವ ವಯಸ್ಸಿನಲ್ಲಿ ಎಷ್ಟೆಷ್ಟು ಪದಗಳನ್ನು ಉಚ್ಚರಿಸಬಲ್ಲದು. ಈ ಎಲ್ಲಾ ವಿಚಾರಗಳ ಬಗ್ಗೆ ಪಾಶ್ಚಾತ್ಯ ದೇಶಗಳಲ್ಲಿ ಮನೋವೈಜ್ಞಾನಿಕ ಅಧ್ಯಯನಗಳು ನಡೆದಿವೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಅಧ್ಯಯನಗಳು ಕಡಿಮೆ. ಕನ್ನಡದಲ್ಲಿ ಮಕ್ಕಳು ಹಂತಹಂತವಾಗಿ ಭಾಷೆಯನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಯನ್ನು ವಿವರಿಸುವ ಕೆಲಸಗಳು ನಡೆದಿವೆ.

ಈ ಅಧ್ಯಯನಗಳು ಮಕ್ಕಳ ಭಾಷಾ ಕೌಶಲ್ಯಗಳು ಹುಟ್ಟಿನಿಂದ ಹೇಗೆ ನಡೆದಿದೆ ಎನ್ನುವುದನ್ನು ವಿವರಿಸುವಂತಹಗಳಾಗಿವೆ. ಕನ್ನಡ ಭಾಷಾ ಕಲಿಕೆಯ ಹಂತ ಗುರುತಿಸುವಾಗ ಕನ್ನಡ ವಿದ್ವಾಂಸರು ಒಂದೇ ರೀತಿಯ ವಿಭಾಗ ಕ್ರಮವನ್ನು ಸೂಚಿಸುತ್ತಾರೆ. ಕನ್ನಡದಲ್ಲಿ ಮಕ್ಕಳ ಭಾಷೆಯ ಬೆಳವಣಿಗೆಗೆ ಸಂಬಂಧಿಸಿದ ಮೂರು ಹಂತಗಳನ್ನು ವಿವರಿಸಲಾಗಿದೆ. ಅವುಗಳೆಂದರೆ ಆರ್.ರಾಮಕೃಷ್ಣ (೧೯೯೯) ೧) ಪ್ರಾರಂಭದ ಅಸ್ಪಷ್ಟ ಸದ್ದುಗಳು ೨) ಪದ, ೩) ವಾಕ್ಯ ಎಂದು ವಿಭಾಗಿಸಿದ್ದಾರೆ. ಕೆ.ವಿ.ನಾರಾಯಣರು ೧) ಮಾತಿನ ಉತ್ಪತ್ತಿ ೨) ಮಾತಿನ ಗ್ರಹಿಕೆ, ೩) ಮಾತಿನ ಪರಸ್ಪರ ಸಂವಹನ ಕ್ರಿಯೆಯನ್ನು ಗುರುತಿಸುತ್ತಾರೆ. ಸಂಗಮೇಶ ಸವದತ್ತಿಮಠರು (೧೯೯೯) ವಯಸ್ಸಿನ ಆಧಾರದ ಮೇಲೆ ಐದು ಹಂತಗಳನ್ನು ಗುರುತಿಸುತ್ತಾರೆ. ಈ ಮೇಲಿನ ಎಲ್ಲಾ ವಿದ್ವಾಂಸರ

ಪ್ರಕಾರ ಮೊದಲಿನ ಹಂತದಲ್ಲಿ ಮಗುವಿನ ಅಳುವೇ ಪ್ರಧಾನವಾಗಿರುತ್ತದೆ. ಅಂದರೆ ಈ ಹಂತದಲ್ಲಿ ಮಗುವಿಗೆ ಭಾಷಿಕ ಧ್ವನಿಗಳನ್ನು ಗುರುತಿಸುವ ಶಕ್ತಿ ಇರಲಾರದು. ಮಗು ಕೆಮ್ಮುವಾಗ, ಸೀನುವಾಗ ಹೊರಡುವ ಧ್ವನಿಗಳು ಈ ಹಂತದ ಬೆಳವಣಿಗೆಯಾಗಿರುತ್ತದೆ. ಈ ಶಬ್ದಗಳಿಗೂ ಭಾಷೆಗೂ ಖಚಿತವಾದ ಸಂಬಂಧವಿಲ್ಲ. ಆಗರೂ ಅವು ಮಾತಿನ ಕೆಲವು ಲಕ್ಷಣಗಳನ್ನು ಹೊಂದಿರುತ್ತವೆ. (ಉಮಾಪತಿ (ಸಂ) ಕೆ.ವಿ.ನಾರಾಯಣ ೨೦೧೦). ಮಗು ನಾಲ್ಕರಿಂದ ಎಂಟು ತಿಂಗಳ ಅವಧಿಯಲ್ಲಿ ತನ್ನ ಮಗುವಿನೊಂದಿಗೆ ಅಥವಾ ಅಳುವಿನೊಂದಿಗೆ 'ಗೂ' ರೂಪವನ್ನು ಹೊರಡಿಸುತ್ತದೆಂದು ಉಮಾಪತಿಯವರ (ಅದೇ ೨೩೧) ಅಭಿಪ್ರಾಯವಾಗಿದೆ. ಸಂಗಮೇಶ ಸವದತ್ತಿ ಮಠರು (೧೯೯೯) ಆ ರೂಪಗಳು 'ಗು', 'ಗೂ' ಆಗಿರುತ್ತದೆನ್ನುತ್ತಾರೆ.

ಆರ್. ರಾಮಕೃಷ್ಣರವರು (೧೯೯೯) ಮಗುವಿಗೆ ಹಸಿವಾದಾಗ 'ಉ', 'ಆ' ಎಂದು ನೋವು ಉಂಟಾದಾಗ 'ಆ', 'ಈ' ಎಂದು ಕೂಗುವುದೆಂದು 'ಬಿನ್'ರ ಹೇಳಿಕೆಯನ್ನು ಉಲ್ಲೇಖಿಸುತ್ತಾರೆ. ಈ ಬೆಳವಣಿಗೆ ಮುಂದುವರೆದು ಮಗು ಏಕಾಕ್ಷರ ರೂಪಗಳನ್ನು ವಿವರಿಸುವ ಶಕ್ತಿಪಡೆದುಕೊಳ್ಳುತ್ತದೆ. ಸವದತ್ತಿಮಠ (೧೯೯೯) ಅಭಿಪ್ರಾಯವಾಗಿದೆ. ಆ ಧ್ವನಿಗಳು ತುಟಿಗೆ ಸಂಬಂಧಿಸಿದ (ಪ,ಬ,ಮ) ಧ್ವನಿಗಳಾಗಿರುತ್ತವೆನ್ನುತಾರೆ. ಇದು ಬಹುಶಃ ಬು (ನೀರು) ಅಂತಹ ರೂಪಗಳ ನುಡಿಯುವ ಹಂತವಾಗಿರಬೇಕು. ಏಕೆಂದರೆ ಮಗು ನಾಲ್ಕನೇ, ಐದನೇ ವಾರದಲ್ಲಿ ಸ್ವರ ರೂಪದ ಧ್ವನಿ ಹೊರಡಿಸುವ ಶಕ್ತಿ ಹೊಂದಿರುತ್ತದೆ. ಮತ್ತು ತುಟಿಗೆ ಸಂಬಂಧಿಸಿದ ಧ್ವನಿಗಳನ್ನು ಉಚ್ಚರಿಸುತ್ತದೆಂದು ವಿದ್ವಾಂಸರು ವಿವರಿಸುತ್ತಾರೆ.

ಒಂಬತ್ತನೆ ತಿಂಗಳಿನಿಂದ ಮಗು ಯಾವುದಾದರೂ ಪದ ಅಥವಾ ವಾಕ್ಯವನ್ನು ಹಲವು ಬಾರಿ ಕೇಳಿದಾಗ ಅದರ ಉಚ್ಚಾರಣೆಯಲ್ಲಿಯ ಏರಿಳಿತಗಳನ್ನು ತುಂಬಾ ಸ್ಪಷ್ಟವಾಗಿ ಅನುಸರಿಸುತ್ತದೆಂಬುದು ಉಮಾಪತಿ (ಅದೇ ೨೩೩) ಯವರ ಅಭಿಪ್ರಾಯವಾಗಿದೆ. ಸವದತ್ತಿಮಠ (೧೯೯೯) ಈ ವಾದವನ್ನು ಎತ್ತಿಹಿಡಿಯುವಂತೆ ಮಕ್ಕಳು ದ್ವಯಕ್ಷರ ಉಚ್ಚಾರಣೆ ರೂಪಿಸಿ ಕೊಂಡಿರುತ್ತಾರೆಂದು ಹೇಳುತ್ತಾರೆ. ಆ ರೂಪಗಳು ಒಂದು ಧ್ವನಿಯ ಪುನರುಚ್ಚಾರದ ರೂಪ ವಾಗಿರುತ್ತವೆ. (ಕಾಕಾ, ಗಾಗಾ ಗೂಗು, ಚಾಚಾ ಇತ್ಯಾದಿ) ಈ ಅವಧಿಯಲ್ಲಿ ಮಗು ಹೊರಡಿಸುವ ಧ್ವನಿರೂಪಗಳನ್ನು ಅರ್ಥರಹಿತವಾದವು ಗಳೆನ್ನಬಹುದು. ಏಕೆಂದರೆ ಆ ಮಗು ಹೇಳ ಬಯಸುವ ಅನಿಸಿಕೆ ನಮಗೆ ತಿಳಿಯಲಾರದು. ಆದರೂ ಅದಕ್ಕೊಂದು ಅರ್ಥ ಕಲ್ಪಿಸಿ ಕೊಳ್ಳುತ್ತೇವೆ.

ಈ ಹಂತದಲ್ಲಿ ಮಗು ಭಾಷಿಕ ರೂಪಗಳನ್ನು ಗ್ರಹಿಸುವ ಮಟ್ಟಿಗೆ ಬೆಳೆದಿದ್ದರೂ ಅದು ಅದಕ್ಕಿರುವ ಅರ್ಥ ಏನು ಎಂದು ಗ್ರಹಿಸಲಾರದು. 'ಬೌಬೌ' ಎನ್ನುವಾಗ ಮಗುವಿಗೆ ಅದು 'ಬೌಬೌ' ಧ್ವನಿಯಾಗಿ ಗ್ರಹಿತವಾಗುತ್ತದಯೇ ಹೊರತು "ನಾಯಿಯ ಬೊಗಳುವಿಕೆಯಲ್ಲ" ಮಗು

ಮಾತಿನ ಅರ್ಥ ಗ್ರಹಿಸುವ ಮಟ್ಟಕ್ಕೆ ಬೆಳೆಯುವ ಕಾಲಕ್ಕೆ ಅದು ಮೊದಲ ಹಂತ ದಾಟಿ ಎರಡನೇ ಹಂತಕ್ಕೆ ಕಾಲಿಟ್ಟಿರುತ್ತದೆ.

ಎರಡನೆಯ ಹಂತವು ಮಗುವಿಗೆ ನಿಜವಾಗಿ ಭಾಷೆ ರೂಪಿಸಿಕೊಳ್ಳುವ ಹಂತವಾಗಿದೆ. ಈ ಹಂತದಲ್ಲಿ ಮಕ್ಕಳು ತಾಯಿಂದ ಅಥವಾ ಮನೆಯ ಮಂದಿಯ ಧ್ವನಿಗಳನ್ನು ಗುರುತಿಸುವ ಹಂತಕ್ಕೆ ಬೆಳೆದಿರುತ್ತದೆ. ಈ ವೇಳೆಗಾಗಲೇ ಮಗು ಒಂದು ವರ್ಷದಾಗಿರುತ್ತದೆ. ಈ ವೇಳೆಗಾಗಲೇ ಮಗುವಿನ ಶಬ್ದಕೋಶದಲ್ಲಿ ಮಕ್ಕಳ ಭಾಷೆಯ ಅನೇಕ ಪದಗಳು ಸೇರುತ್ತವೆ. ಅವ್ವ, ಪಪ್ಪ, ಮಮ್ಮು, ಬುವ್ವ, ಇಸ್ಸಿ, ಅಮ್ಮಾ, ಇತ್ಯಾದಿ ಈ ಶಬ್ದಗಳು ಮಕ್ಕಳ ಭಾಷೆಯ ಹೆಚ್ಚಿನ ಬಳಕೆಯ ಪದಗಳಾಗಿರುತ್ತವೆ. ಈ ಹಂತದಲ್ಲಿ ಮಕ್ಕಳ ವಿಶೇಷವೆಂದರೆ ಮಗು ಕೇವಲ ಒಂದೇ ಧ್ವನಿಯನ್ನು (ಆ, ಈ) ಕೆಲವೊಮ್ಮೆ ಒಂದಕ್ಕಿಂತ ಹೆಚ್ಚಿನ ಧ್ವನಿ ಜೋಡಣೆಯನ್ನು (ಬೂ, ಅಚ್ಚಿ, ಅಂಬಾ) ಉಚ್ಚರಿಸುತ್ತದೆ. ಅದು ಕೆಲವೊಮ್ಮೆ ಭಾಷೆಯ ಧ್ವನಿಯಂತಿರದೆ ಇತರ ಧ್ವನಿಗಳಂತೆಯೂ ಇರಬಹುದು. ಅದೇನೆ ಇದ್ದರೂ ಅದು ಧ್ವನಿ ಮಾತ್ರವಾಗಿರದೆ ಸಂದರ್ಭಕ್ಕನುಗುಣವಾಗಿ ಧ್ವನಿ, ಪದ, ವಾಕ್ಯವು ಆಗಿರುತ್ತದೆ. ಮಗು 'ಬೂ' ಎಂದು ಉಚ್ಚರಿಸಿತ್ತೆಂದರೆ ಅದು 'ನೀರು ಬೇಕು' ಎಂದಾಗಿರಬಹುದು. ಅಲ್ಲ ನೀರ ಇದೆಯಾ ಎಂದಾಗಬಹುದು. ಇಲ್ಲಾ ನೀರು ಕೆಳಗಡೆ ಚೆಲ್ಲಿರುವದನ್ನು ತೋರಿಸುತ್ತಿರ ಬಹುದು. ಇದು ಮಗುವಿನ ಸ್ಥಿತಿ ಮತ್ತು ಸಂದರ್ಭನುಸಾರ ಅರ್ಥವನ್ನು ಪಡೆದುಕೊಳ್ಳುತ್ತದೆ. ಇದನ್ನು ಉಮಾಪತಿ (ಆದೇ ೨೩೫) ಧ್ವನಿಯ ಏರಿಳಿತವೆನ್ನುತ್ತಾರೆ.

ಒಂದು ವರ್ಷ ಹದಿನೈದು ತಿಂಗಳಷ್ಟರಲ್ಲಿ ಮಗು ತಾಯಿ ಮತ್ತು ಅದರ ಆತ್ಮೀಯ ಪರಿಸರದ ವ್ಯಕ್ತಿಗಳ ಹೊರಡಿಸುವ ಧ್ವನಿಗಳು ಮತ್ತು ಪದಗಳಲ್ಲಿ ಮಾಡಿಕೊಳ್ಳುವ ವರ್ಗಗಳನ್ನು ಸೂಕ್ಷ್ಮವಾಗಿ ಅವಲೋಕಿಸಿರುತ್ತದೆ. ಈಗ ಅದರ ಶಬ್ದ ಸಂಗ್ರಹವು ಹೆಚ್ಚಾಗಿರುತ್ತದೆ. ಈ ಹೊತ್ತಿಗೆ ಕೆಲವು ಸಂಯುಕ್ತ ಶಬ್ದಗಳನ್ನು ಪ್ರಯೋಗ ಮಾಡುವ ನಾಮಪದಗಳೊಂದಿಗೆ ಕೆಲವು ಕ್ರಿಯಾ ಪದಗಳನ್ನು ಉಪಯೋಗ ಮಾಡುವ ಕಲೆಯನ್ನು ರೂಪಿಸಿಕೊಳ್ಳುತ್ತದೆಂದು ರಾಮಕೃಷ್ಣ (೧೯೯೯) ರವರ ಅಭಿಪ್ರಾಯವಾಗಿದೆ. ಈ ಹಂತಕ್ಕಾಗಲೇ ಮಗು ಪ್ರಾಥಮಿಕ ಆಹಾರಗಳಾದ 'ಮೊಲೆ ಹಾಲು' ಕೆಲವು ಮೆತ್ತನೆಯ ಪದಾರ್ಥಗಳನ್ನು ಸೇವಿಸುತ್ತದೆ. ಹೀಗಾಗಿ ಅಮ್ಮ, ಅಚ್ಚಿ, ಬಾಳಿ, ಬಕರಿ, ಇಂತಹ ಶಿಶುಭಾಷೆ ರೂಪಗಳನ್ನು 'ತಾ' ಬಾ' ದಂತಹ ಏಕಾಕ್ಷರ ಕ್ರಿಯಾಪದಗಳೊಂದಿಗೆ ಬಳಸುತ್ತದೆ.

ಎರಡು ವರ್ಷ ತುಂಬಿದ ಮಗುವಿನ ಭಾಷೆಯಲ್ಲಿ ಸಾಕಷ್ಟು ಬೆಳವಣಿಗೆಗಳು ಗಮನಕ್ಕೆ ಬರುತ್ತವೆ. ಈ ಹಂತದಲ್ಲಿ ಮಕ್ಕಳಿಗೆ ಬಹುತೇಕ ಧ್ವನಿಗಳ ಉಚ್ಚಾರ ಸಾಧ್ಯವಾಗಿರುತ್ತದೆಂದು ಕೊಡಗುಂಟಿ (೨೦೦೭) ಅವರ ಅಭಿಪ್ರಾಯವಾಗಿದೆ. ಮುಂದುವರೆದು ಈ ಹಂತದ ಮಕ್ಕಳಲ್ಲಿ ರಾಗಾತ್ಮಕತೆ ಹೆಚ್ಚಾಗಿರುತ್ತದೆ. ನಾಮ ಪದಗಳ ಜೊತೆಗೂಡಿ ಕ್ರಿಯಾ ಪದಗಳನ್ನು ಎಳೆದು

ಮಾತನಾಡುವುದನ್ನು ಗುರುತಿಸಬಹುದು. "ಅಪ್ಪಾ ಬಂತ್ತು" ' ಅಮ್ಮ ಬಂತ್ತು' ಎಂದು ಹೀಗೆ ಎಳೆದು ಮಾತನಾಡುವುದನ್ನು ಕಾಣಬಹುದು. ಇದಲ್ಲದೆ ಈ ಹಂತದಲ್ಲಿ ವಾಹನ, ಪ್ರಾಣಿ, ವ್ಯಕ್ತಿಯನ್ನು ಗುರುತಿಸುವಾಗ ವಿಶೇಷಣಗಳನ್ನು ಗುರುತಿಸಿಕೊಂಡು ಗ್ರಹಿಸಿರುತ್ತದೆ. ಅದು ಪ್ರಾಣಿ, ವಾಹನಗಳ ವಿಶೇಷಣ ಹೆಚ್ಚಾಗಿ ಬಳಸುವುದನ್ನು ಕಾಣಬಹುದು. ಈ ಹಂತ ಮಗು ಭಾಷಾ ಗ್ರಹಿಕೆಯಲ್ಲಿ ಉನ್ನತಕ್ಕೇರುವ ಹಂತವಾಗಿರುತ್ತದೆ. ಎದುರಿಗೆ ಒಂದು ಪ್ರಾಣಿ ಹೋಗುತ್ತಿದೆ, ಎಂದರೆ ಅದರ ಧ್ವನಿ ಮಾಡುವ ಮೂಲಕ ಮಗು ಗುರುತಿಸುತ್ತದೆ. ಆ ಪ್ರಾಣಿ ಆಕಳು ಆಗಿದ್ದರೆ, 'ಅಂಬಾ' ಎಂದೋ ಹೈಯ' ಎಂದೇ ಉಚ್ಚರಿಸುತ್ತದೆ. ಬೆಕ್ಕಾಗಿದ್ದರೆ ಮ್ಯಾಂವು, ನಾಯಿಯಾಗಿದ್ದರೆ 'ಬೌ ಬೌ' ಹೀಗೆ ಗುರುತಿಸುತ್ತದೆ. ಮಗುವಿನ ಆತ್ಮೀಯ ಪರಿಸರದ ಜನರು ಮಗುವಿನ ಈ ರೂಪಗಳ ಗ್ರಹಿಕೆಗೆ ಪ್ರಮುಖ ಕಾರಣಕರ್ತರಾಗಿರುತ್ತಾರೆ. ಅವರು ಒಂದು ವಾಹನ ಅಥವಾ ಪ್ರಾಣಿ ಗುರುತಿಸುವಾಗ ಮಗುವಿನ ಎದುರು ಅದರ ಶಬ್ದಾನುಕರಣ ಮಾಡುವದು ಸಾಮಾನ್ಯವಾಗಿರುತ್ತಿದೆ. ಹೀಗಾಗಿ ಮಗು ಅದೇ ಅದರ ಗುರುತೆಂದು ಭಾವಿಸಿ ಅದನ್ನು ಭಾಷಿಕ ರೂಪಗಳಿಂದ ನೆನಪಿಟ್ಟುಕೊಳ್ಳಲು ಪ್ರಯತ್ನ ಪಡುತ್ತದೆ. ಉದಾ: ಪಂವ್ ಪಂವ್ ಶಬ್ದ ಮಾಡುವ ಗಾಡಿ 'ಪಿಕ್' ಡುರ್ ಡುರ್' ಶಬ್ದಮಾಡುವ ಗಾಡಿ ಡಿರ್ ಎಂದು ಗುರುತಿಸಿಕೊಳ್ಳಲಾಗುತ್ತದೆ. ಈ ಹಂತ ಮುಂದುವರೆದು ಭಾಷೆಯ ಬಳಕೆಯನ್ನು ಮಗು ರೂಪಿಸಿ ಕೊಳ್ಳವ ಹಂತವಾಗಿರುತ್ತದೆ.

ಮೂರನೇ ಹಂತದಲ್ಲಿ ಮಗು ಮಕ್ಕಳಿಗಾಗಿ ರೂಪಗೊಂಡಿರುವ ಭಾಷಾ ರೂಪಗಳನ್ನು ಮೀರುವ ಪ್ರಯತ್ನದಲ್ಲಿರುತ್ತದೆ. ಈ ಹಂತದಲ್ಲಿ ಮಗುವಿನ ಭಾಷೆಯ ಹೊರತಾದ ಧ್ವನಿಗಳ ಉಚ್ಚಾರಣೆ ಕಡಿಮೆಯಾಗಿರುತ್ತದೆ. ಶಬ್ಧಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಮೂರು ವರ್ಷ ತುಂಬಿದ ಹೊತ್ತಿಗೆ ಮಗು ಸಹಜ ಭಾಷಾ ರೂಪಗಳನ್ನು ಉಚ್ಚರಿಸಲು ಪ್ರಯತ್ನಿಸುತ್ತದೆ. ಅದರ ಉಚ್ಚಾರಣೆ ತಪ್ಪು ತಪ್ಪಾಗಿರುತ್ತದೆ. ಆದರೆ ತಾಯಿ ಅಥವಾ ಆತ್ಮೀಯ ಪರಿಸರ ಅದೇ ಪದವನ್ನು ಮಗು ಉಚ್ಚರಿಸಿದಂತೆ ತಪ್ಪಾಗಿ ಉಚ್ಚರಿಸಿದರೆ ಅದು ಒಪ್ಪದೆ ಮತ್ತೆ ತನ್ನ ತಪ್ಪು ಉಚ್ಚಾರವನ್ನೇ ಒಪ್ಪಿಸುತ್ತದೆ. ಆದರೆ ಅದಕ್ಕೆ ತಾನು ಹೇಳುತ್ತಿರುವದು ತಪ್ಪು ಉಚ್ಚಾರಣೆ ಎನ್ನುವ ಕಲ್ಪನೆ ಇರುವುದಿಲ್ಲ. ಈ ವಯಸ್ಸಿನಲ್ಲಿ (ಮೂರು ವರ್ಷ) ಮಗು ಎರಡು ಮೂರು ಶಬ್ದಗಳ ಸರಳ ವಾಕ್ಯಗಳನ್ನು ಸಹಜವಾಗಿಯೇ ಕಟ್ಟಬಲ್ಲ ಸಾಮರ್ಥ್ಯ ಪಡೆದಿರುತ್ತದೆ.

ಮಗು ನಾಲ್ಕನೆ ವರ್ಷಕ್ಕೆ ಕಾಲಿಡುವಷ್ಟರ ಹೊತ್ತಿಗೆ ಶಿಶು ಭಾಷಾ ರೂಪಗಳ ಬಳಕೆ ಕಡಿಮೆಯಗುತ್ತದೆ. ಈ ಹೊತ್ತಿಗೆ ಅವುಗಳ ಸಹಜ ಭಾಷೆಯನ್ನು ರೂಪಿಸಿಕೊಂಡಿರುತ್ತದೆ. ಮಗುವಿನ ನಿತ್ಯ ವ್ಯವಹಾರ ಸಾಕಷ್ಟು ಸಹಜವಾಗಿ ನಡೆದಿರುತ್ತದೆ. ತನ್ನ ಸುತ್ತಮುತ್ತಲಿನ ಬಳಕೆಯ ಭಾಷೆ ಯನ್ನು ಆದಷ್ಟು ಅರ್ಥಮಾಡಿಕೊಳ್ಳತ್ತದೆ. ಮತ್ತು ಸ್ಪಂದಿಸಲು ಸೂಕ್ತವಾಗಿರುತ್ತದೆ. ಕೆಲವು

ವ್ಯಾಕರಣಾಂಶಗಳನ್ನು ತಿಳಿಯಬಲ್ಲದ್ದಾಗಿರುತ್ತದೆ. ಆದರೂ ಕಠಿಣ ರಚನೆಗಳ ಬಳಕೆ ಸಾಧ್ಯತೆ ಕಡಿಮೆ. ಐದು ವರ್ಷ ನಂತರ ಕ್ರಮೇಣ ಪ್ರೌಢಭಾಷೆಯೊಂದಿಗೆ ನಿಕಟತೆಯನ್ನು ಸಾಧಿಸಿಕೊಳ್ಳ ತೊಡಗುತ್ತದೆ. ಕ್ರಮೇಣ ವಾಕ್ಯಗಳ ಭಾಷೆ ಲಯವಾಗಿ ಪ್ರೌಢ ಭಾಷೆ ರೂಪಿಸಿಕೊಳ್ಳುತ್ತದೆ.

ಮಕ್ಕಳು ಭಾಷೆಯನ್ನು ಅನುಕರಣೆಯಿಂದ ಕಲಿಯುತ್ತಾರೆ ಎಂಬುದು ಜನಸಾಮಾನ್ಯರಲ್ಲಿರುವ ಸಾಮಾನ್ಯವಾದ ತಿಳುವಳಿಕೆ. ಭಾಷೆ ಒಂದು ಅತ್ಯಂತ ಸೂಕ್ಷ್ಮ ರಚನೆಯಾಗಿರುತ್ತದೆ. ಭಾಷೆಯನ್ನು ಮಗುವಿಗೆ ರೂಪಿಸುವಲ್ಲಿ ತಾಯಿಯ ಪಾತ್ರ ಮಹತ್ವದ್ದು. ಅವಳು ಮಗುವಿನೊಂದಿಗೆ ಏರಿಳಿತದ ಮಾತುಗಳಿಂದ ಮಗುವಿಗೆ ಮಾತು ಕಲಿಸುತ್ತಾಳೆ. ಈ ಮಾತು ಕಲಿಸುವಲ್ಲಿ ತನ್ನ ಭಾಷೆಯ ರೂಪಗಳನ್ನು ಸರಳವಾಗಿ ಬದಲಿಸುದರ ಮೂಲಕ ಮಗುವಿಗೆ ಭಾಷೆ ರೂಪಿಸುತ್ತಾಳೆ.

ಶಿಶುಭಾಷಾ ರೂಪಗಳು

ತಾಯಿಯೇ ಮಗುವಿನ ಮೊದಲ ಗುರು ಮಕ್ಕಳ ಭಾಷಾ ಕಲಿಯುವಿಕೆಯಲ್ಲಿ ತಾಯಿಯ ಪಾತ್ರ ಮಹತ್ವ ದಾಗಿರುತ್ತದೆ. ಪ್ರತಿಯೊಂದಕ್ಕೂ ಮಗು ತಾಯಿಯನ್ನೇ ಅವಲಂಬಿಸಿರುತ್ತದೆ. ಮಗುವಿನ ಪಾಲನೆ ಪೋಷಣೆ ತಾಯಿಯ ಆದ್ಯ ಕರ್ತವ್ಯವಾಗಿರುತ್ತದೆ ಆದರಿಂದ ಮಗುವಿಗಾಗಿ ರೂಪಗೊಳ್ಳುವ ಹೆಚ್ಚಿನ ಸಂಗತಿಗಳಿಗೆ ತಾಯಿ ಕಾರಣೀಭೂತಳಾಗುತ್ತಾಳೆ. ಹಾಗೆಯೇ ಭಾಷಿಕ ರೂಪಗಳನ್ನು ಮಗುವಿಗಾಗಿ ಕಟ್ಟುವಲ್ಲಿ ತಾಯಿಯ ಪಾತ್ರ ಮಹತ್ವದಾಗಿರುತ್ತದೆ. ತಾಯಿ ಮಗುವಿಗೆ ಭಾಷೆ ಕಲಿಸುವಾಗ ಭಾಷಿಕ ರೂಪಗಳನ್ನು ಸರಳಗೊಳಿಸಿ ಮಾತನಾಡುತ್ತಾಳೆ. ಅದು ತಾಯಿ ಹೊಸದಾಗಿ ಸೃಷ್ಟಿಸಬಹುದು. ಇಲ್ಲ ಹಿಂದಿನ ಪರಿವರ್ತಿತ ರೂಪಗಳ ಪುನರಾವರ್ತಿಯಾಗಿರ ಬಹುದು. ತಾಯಿ ಎಲ್ಲಾ ಸಮಯದಲ್ಲೂ ಮಗುವಿಗೆ ಅರ್ಥೈಸಲು ಪರಿವರ್ತಿತ ರೂಪ ಬಳಸುತ್ತಾಳೆ ಎನ್ನುವದು ಕಷ್ಟವೇ. ಕೆಲವೊಮ್ಮೆ ಅನುಕರಣೆಯು ಆಗಿರಬಹುದು. ಒಟ್ಟಿನಲ್ಲಿ ಮಗುವಿನೊಂದಿಗೆ ಒಂದು ವಿಶಿಷ್ಟ ನಿರ್ದಿಷ್ಟ ರೂಪಗಳನ್ನು ಮಕ್ಕಳಿಗಾಗಿ ಬಳಸುವಲ್ಲಿ ತಾಯಿಯೇ ಮೊದಲು. ಮಗುವಿಗಾಗಿ ತಾಯಿಯ ಸಂಬಂಧಿಕರು ಮತ್ತು ಇತರರು ಶಿಶು ಭಾಷಾರೂಪವನ್ನು ಮುಖ್ಯವಾಗಿ ಕೆಲವು ಸಂದರ್ಭಗಳಲ್ಲಿ ಬಳಸುತ್ತಾರೆ. ಅವುಗಳನ್ನು ಕೆಳಗಿನಂತೆ ಪಟ್ಟಿಮಾಡಬಹುದು.

ಊಟ ಮಾಡಿಸುವಾಗ ಬಳಸುವ ರೂಪಗಳು

ಮಗುವಿಗೆ ಊಟ ಮಾಡಿಸುವಾಗ "ತಾಯಿ" ಉಣತೀಯಾ ಪುಟ್ಟಾ ಹೇ ಪುಟ್ಟಾ ಅಚ್ಚಿ ತಿಂತಿಯಾ ಮಮ್ಮು ಮಾಡ್ತಿಯಾ ಎನ್ನುವುದು ಸಹಜ ಇಲ್ಲಿ ಅಚ್ಚಿ ಎನ್ನುವುದು 'ರೊಟ್ಟಿ' ಎಂತಾದರೆ ಮಮ್ಮು ಊಟ ಮಾಡುವ ಕ್ರಿಯೆಯನ್ನು ಸೂಚಿಸುವಂಥದ್ದು ಇದಕ್ಕೆ ತುತ್ತು ಮೇಯವಾಗ ಹೊರಡುವ ಶಬ್ದವೇ ಮೂಲವಾಗಿರಬೇಕು. ಅಚ್ಚಿ ಶಿಶುಭಾಷೆಯಲ್ಲಿ ಮಾತ್ರ ಬಳಕೆಗೊಳ್ಳಬಲ್ಲ ರೂಪವಾಗಿದೆ. ಈ ಭಾಷೆರೂಪ ಇದಕ್ಕೆ ಸಂವಾದಿಯಾಗಿ ಕೆಲವು ಸಾಮಾಜಿಕ ವರ್ಗಗಳಲ್ಲಿ 'ಬಕರಿ'ಯಂತಲೂ ಕರೆಯುತ್ತಾರೆ. ಇದು ಮರಾಠಿಯ ಮೂಲ ರೂಪ. ಇದಲ್ಲದೆ.

ಪ್ರಾದೇಶಿಕವಾಗಿ ಅನೇಕ ಭಿನ್ನತೆಯ ಸಾಧ್ಯತೆಗಳಿವೆ. ರೊಟ್ಟಿಯನ್ನು ತಿನ್ನಿಸುವಾಗ ಅದರೊಂದಿಗೆ ಬ್ಯಾಳಿ(ಕುದಿಸಿದ) ಕೂಡಿಸಿ ತಿನ್ನಿಸುವುದು ಇದೆ. ಬ್ಯಾಳಿ ಅಚ್ಚಿ, ತವ್ವಿ ಅಚ್ಚಿ, ಅಂತಲೂ ಕರೆಯುತ್ತಾರೆ. ಬ್ಯಾಳಿ ಅಲ್ಲದೆ, ಇನ್ಯಾವುದೇ 'ಪಲ್ಲೆ' ಮಗುವಿಗೆ ರೊಟ್ಟಿಯೊಂದಿಗೆ ಕೊಡುವಾಗ ಅದನ್ನು ಹೆಚ್ಚಾಗಿ ಅಚ್ಚಿ ಬ್ಯಾಳಿ ಅಚ್ಚಿ ತವ್ವಿ ಕರೆಯುತ್ತಾರೆ. ಮಾಂಸಾಹಾರ ಮಾಡುವ ಮನೆಗಳಲ್ಲಿ 'ಚಿಯಾ' ಎನ್ನುವ ರೂಪ ಮಗುವಿಗೆ ಬಳಸುತ್ತಾರೆ. ಚಿಯಾ ತಿಂತಿಯಾ? ಚಿಯಾ ತಿನ್ನು ಎಂದು ಬಳಸುವದು ಕಂಡುಬರುತ್ತದೆ.

ಮಗುವಿನ ಆಹಾರಗಳಲ್ಲಿ ಅತಿ ಮುಖ್ಯವಾದದ್ದು, ಮೊಲೆ ಹಾಲು, ಇದನ್ನು ಮಗುವಿಗಾಗಿ ಬಳಸುವಾಗ 'ಅಮ್ಮಾ' ಎಂದು ಕರೆಯುತ್ತಾರೆ. ಈ ರೂಪ ಕೆಲವೊಂದು ಸಂದರ್ಭಗಳಲ್ಲಿ ಸಹಜ ಬಳಕೆಯ ವಲಯಕ್ಕೆ ಬರುತ್ತದೆ. ಆದರೂ ಕಚಿತ 'ಅಮ್ಮಾ' (ಮೊಲೆ ಹಾಲು) ಇದು ಮಗು ಸೇವಿಸುವ ಮೊದಲ ಆಹಾರವಾಗಿರುತ್ತದೆ. 'ಬೂ' ಎನ್ನುವ ರೂಪ ಮಗುವಿಗೆ ಕುಡಿಸುವ 'ನೀರು ಇದು ಪರ್ಯಾಯವಾಗಿ ಬಳಸುತ್ತಾರೆ. ನೀರಿಗೆ ಬೂ ರೂಪ ಬರಲು ಅನೇಕ ಐತಿಹ್ಯಗಳಿವೆ. ಒಂದು ಐತಿಹ್ಯ ಪ್ರಕಾರ ಅದು ಭೂಮಿಯಿಂದ ಬರುವುದರಿಂದ 'ಬೂ' ಎನ್ನುತ್ತಾರೆಂದಾದರೆ, ಇನ್ನು ಒಂದು ಹೇಳಿಕೆ ಪ್ರಕಾರ ನೀರು ಹರಿಯುವಾಗ ಮಾಡುವ ಬುಳ ಬುಳ ಶಬ್ದವೇ ಈ ರೂಪ ನಿರ್ಮಾಣಕ್ಕೆ ಕಾರಣವೆನ್ನುತ್ತಾರೆ. ಒಂದು ಅದರ ಮೂಲ ಹೇಳುತ್ತಿದ್ದರೆ, ಇನ್ನೊಂದು ಪ್ರಕಾರ ಹೇಳುತ್ತದೆ. ಶಬ್ದಾನುಕರಣೆ ಶಿಶು ಭಾಷೆಯ ಮೂಲ ಪ್ರಕ್ರಿಯೆ. ಹೀಗಾಗಿ ಮೇಲಿನ ಎರಡರಲ್ಲಿ ಯಾವುದು ನಿಜವೆಂದು ಹೇಳಲಾಗದು. ಅಥವಾ ಇವೆರಡು ಸುಳ್ಳಾಗಿ ಬೇರೆಯ ಕಾರಣಗಳು ಇರಬಹುದು. ಇದು ಅವುಗಳ ಚಾರಿತ್ರಿಕತೆ ಅಧ್ಯಯನ ದಿಂದ ನಿರ್ಧಾರಗೊಳ್ಳಬಲ್ಲ ಸಂಗತಿ. ಇದಕ್ಕೆ ಆ ನಿಟ್ಟಿನಲ್ಲಿ ಹೆಚ್ಚಿನ ಅಧ್ಯಯನಗಳ ಅವಶ್ಯಕತೆಯಿದೆ.

ಮಗುವಿಗೆ ಒಂದು ವಿಷಯದ ಕಲ್ಪನೆ ನೀಡುವಲ್ಲಿ ಮಗುವಿನ ಸುತ್ತಲಿನ ಭಾಷಿಕ ಪರಿಸರ, ಜನರು ಮಾಡಿಕೊಳ್ಳುವ ಮಾರ್ಪಡು ಅನೇಕ. ಅಂಥವುಗಳಲ್ಲಿ ಮಗುವಿಗೆ ರುಚಿಯ ಕಲ್ಪನೆ ನೀಡುವಲ್ಲಿ ನಡೆದಿದೆ. ಸಿಹಿಯಾದ ಪದಾರ್ಥವಾಗಿದ್ದರೆ 'ಬಲ್ಲ' ಎಂದೇ ಪರಿಚಯಿಸಿ ಕೊಡ ಲಾಗುತ್ತದೆ. 'ಖಾರ' ಪದಾರ್ಥಗಳನ್ನು 'ಹಾ' ಎನ್ನುವ ಮೂಲಕ ಮಗುವಿಗೂ ಅದರಿಂದಾಗುವ ಪರಿಣಾಮಗಳನ್ನು ತಪ್ಪಿಸುವ ಅಥವಾ ಮಗುವಿಗೆ ಅಪಾಯದ ಮುನ್ಸೂಚನೆ ಕೊಡಲಾಗುತ್ತದೆ. ಮಕ್ಕಳಿಗೆ ಪ್ರಾಥಮಿಕ ಆಹಾರವಲ್ಲದೆ, ಕೆಲವು ತಿನಿಸುಗಳು ಕೊಡಲಾಗುತ್ತದೆ. ತಿನಿಸುಗಳ ಹೆಸರು ಹ್ರಸ್ವೀಕರಣಕ್ಕೆ ಒಳಗಾಗುತ್ತಿವೆ. ಚಾಕ್ಲೇಟು-ಚಾಕಿ, ಬಿಸ್ಕೀಟ್-ಬಿಕ್ಕಿ ಇತ್ಯಾದಿ. ಇವುಗಳು ಎಲ್ಲರಲ್ಲೂ ಒಂದೇ ರೀತಿಯಲ್ಲಿ ಹ್ರಸ್ವೀಕರಣ ಕೊಳ್ಳಗಾಗುತ್ತದೆಂದು ಹೇಳಲಾಗದು. ಸಾಮಾಜಿಕ, ಪ್ರಾದೇಶಿಕವಾಗಿ ಬದಲಾಗುವ ಸಾಧ್ಯತೆಗಳಿವೆ. ಕೆಲವೊಮ್ಮೆ ಆರ್ಥಿಕ ಸ್ಥಿತಿಗಳು ಎಂಥಹ ಪದಗಳನ್ನು ಒಂದು ಸಮುದಾಯ ಹ್ರಸ್ವೀಕರಣಕ್ಕೊಳಪಡಿಸುತ್ತದೆ ಎನ್ನುವುದನ್ನು ನಿರ್ಧರಿಸುತ್ತದೆ. ಅಂದರೆ ನಮ್ಮ

ಆರ್ಥಿಕತೆಗೆ ಅನುಗುಣವಾಗಿ (ನಮಗೆ ವಸ್ತುಗಳನ್ನು ಖರೀದಿಸುವ ಶಕ್ತಿಗನುಗುಣವಾಗಿ) ಆಯ್ದು ವಸ್ತುಗಳ ಹ್ರಸ್ವೀಕರಣ ಪ್ರಕ್ರಿಯೇ ನಡೆಯುತ್ತದೆ.

ಮಲಗಿಸುವಾಗ

ತಾಯಿ ಮಗುವಿಗೆ ಮಲಗಿಸುವಾಗ ತನ್ನ ಇರುವಿಕೆಯನ್ನು ಮಗುವಿಗೆ ಖಚಿತ ಪಡಿಸಲು ಹಾಡು ಹಾಡುವದು ವಾಡಿಕೆಯಲ್ಲಿದೆ. ಮಗುವನ್ನು ತೊಡೆಯ ಮೇಲೆ ಇಲ್ಲವೇ ತೊಟ್ಟಲಿನಲ್ಲಿ ಮಲಗಿಸಿ ತಾಯಿ ಅದರ ಮೈತಟ್ಟುತ್ತ ಹಾಡು ಹೇಳುತ್ತಾಳೆ. ಆ ಹಾಡುಗಳು ಲಾಲಿ ಹಾಡುಗಳು ಇದು ಮಕ್ಕಳ ಭಾಷೆ ಪರಿಭಾಷೆಯಲ್ಲಿ 'ಜೋ ಜೋ ಎಂದು ಕರೆಯುತ್ತಾರೆ. ಇದು ಬಹುಶ ಜೋಳಿಗೆಯಲ್ಲಿ ಹಾಕಿ ಹಾಡುವ ಹಾಡಾಗಿರುವುದರಿಂದ ಜೋಗುಳ ಹಾಡು ಜೋ ಜೋ ಆಗಿರುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಇದರ ಕುರುಹಾಗಿ ಇಂದಿಗೂ ಯಾದಗಿರಿ ಪರಿಸರ ದಲ್ಲಿ 'ತೊಟ್ಟಲು' ಕಟ್ಟಿದರೂ. ಅದರೊಳಗೊಂದು 'ಜೋಳಿಗೆ' ಕಟ್ಟಿರುತ್ತಾರೆ. ಅದು ಪ್ರಾಚೀನ ಕಾಲದಲ್ಲಿ ಕಟ್ಟುತ್ತಿದ್ದ ಜೋಳಿಗೆಯ ಸಂಕೇತವಾಗಿರಬೇಕು. ಅದರ ಬಗ್ಗೆ ಕೇಳಿದಾಗ ಜನರು ಕೊಡುವ ಉತ್ತರವು ನಮ್ಮ ಹಿರಿಯರು ಕಟ್ಟುತ್ತಿದ್ದರು. ನಾವು ಕಟ್ಟಿವಿ" ಎನ್ನುತ್ತಾರೆ.

ಮಗು ಮಲಗದೆ ಹಠ ಮಾಡುವಾಗ ತಾಯಿ ಅದಕ್ಕೆ 'ಚುಪ್' ಎಂದು ಗದರಿಸುವುದರ ಮೂಲಕ ಮಲಗಿಸುವ ಪ್ರಯತ್ನ ಮಾಡುತ್ತಾಳೆ. ಈ 'ಚುಪ್ ರೂಪವು ಉರ್ದುವಿನಿಂದ ಬಂದಿದ್ದು. ಸಹಜ ಭಾಷೆಯಲ್ಲಿ ಇದರ ಬಳಕೆ ಕಡಿಮೆ ಆದರೂ ಶಿಶುಭಾಷೆಯಲ್ಲಿ ಬಳಕೆಗೊಳ್ಳುತ್ತದೆ. ಅನ್ಯ ಭಾಷೆಯ -ಪದಗಳು ಯಾದಗಿರಿ ಪರಿಸರದಲ್ಲಿ ಹಾಸುಹೊಕ್ಕಾಗಿವೆ. ಅವುಗಳು ಶಿಶು ಭಾಷಾ ರೂಪಕ್ಕೂ ಬಂದಿವೆ. ಬುಜ್ಜಿ(ಮಗು) ಪಚಿಕೊ(ಮಲಗು) ಚುಪ್ ಚಾಪ್(ಸುಮ್ಮನೆ) ಇಂತಹ ಅನೇಕ ಪದಗಳನ್ನು ಗುರುತಿಸಬಹುದಾಗಿದೆ.

ಮಗುವಿನ ಸ್ನಾನ, ಶೌಚ ಮಾಡಿಸುವಾಗ ಬಳಸುವ ರೂಪ

ಮಗುವಿಗೆ ನೀರು ಹಾಕುವದಿದೆ. ಈ ವಾಕ್ಯದಲ್ಲಿನ ನೀರು ಹಾಕುವದು ಸ್ನಾನ ಮಾಡಿಸುವ ಪದದ ಪರ್ಯಾಯವಾಗಿ ಬಳಕೆಯಲ್ಲಿದೆ. ಆದರೆ ಸ್ನಾನ ಮಾಡುವದಕ್ಕೆ ನೀರು ಹಾಕುವದಕ್ಕೆ ಹಲವಾರು ವ್ಯತ್ಯಾಸಗಳಿವೆ. ಸ್ನಾನ ಮಾಡಿಸುವ ಹಿಂದೆ ಶುಚಿಯಾಗಿಸುವ ಒಂದೇ ಉದ್ದೇಶವಿರುತ್ತದೆ. ಆದರೆ ನೀರು ಹಾಕುವುದರ ಹಿಂದೆ ಮಗುವಿಗೆ ಎಣ್ಣೆ ಹಾಕುವ ಅದರ ಅಂಗಾಂಗಗಳ ಬೆಳವಣಿಗೆಗಾಗಿ ಅದರ ದೇಹವನ್ನು ಮಸಾಜ್ ಮಾಡುವ, ಮಗು ಇಡಿ ರಾತ್ರಿ ಮಲಗಿ ಹಾಸಿಗೆಯಲ್ಲಿ ಹೊರಳಾಡಿಕೊಂಡು ದಣಿವನ್ನು ನೀಗಿಸುವದು. ಇವೆಲ್ಲ ನೀರು ಹಾಕುವದರ ಹಿನ್ನೆಲೆಗಳಾಗಿವೆ. ನೀರು ಹಾಕುವದು ತಾಯಿ ಮತ್ತು ಮಗು ಇಬ್ಬರಿಗೂ ಮಾಡುವ ಕ್ರಿಯೇ. ತಾಯಿಯ ನಂತರ ಕೆಲವು ದಿನ (೧೫-೨೦ ದಿನ)ಗಳ ವರೆಗೆ ನೀರು ಹಾಕುತ್ತಾರೆ. ಯಾವಾಗ ತಾಯಿ ಸ್ವತಹ ಸ್ನಾನ ಮಾಡಲು ಪ್ರಾರಂಭಿಸುತ್ತಾಳೋ ಆಗ ಅದು ನೀರು ಹಾಕುವ

ಪ್ರಕ್ರಿಯೆಯಿಂದ ಸ್ನಾನಕ್ಕೆ ತಿರುಗುತ್ತದೆ. ಮಗುವಿಗೆ ಸ್ನಾನ ಮಾಡಿಸುವ ಮನವರಿಕೆ ಮಾಡಿಕೊಡಲು 'ಬುಸ್ಸಿ' 'ಬುಡಿಸ್' ಈ ಶಬ್ದಗಳನ್ನು ಬಳಸಲಾಗುತ್ತದೆ. ಇದು ಕೂಡಾ ಶಬ್ದಾನುಕರಣೆಯೇ ಆಗಿದೆ. ಇದರ ಹಿನ್ನೆಲೆಯಾಗಿ ಸಿಗುವ ಊಹೆಗಳೆಂದರೆ "ತಂಬಿಗೆಯಿಂದ ನೀರು ಬೀಳುವಾಗ ಆಗುವ ಶಬ್ದ ಅದೇ ರೀತಿ ಇರುತ್ತೆ. ಹೀಗಾಗಿ ಅದು 'ಬುಡಿಸ್' ಬುಸ್ಸಿ, ಬುಸ್, ಆಗಿರುತ್ತದೆಂದು. ತಾಯಿ ನೀರು ಮಗುವಿಗೆ ಹಾಕುವಾಗ ಬಾಯಿಂದ 'ಬುಡಿಸ್' ಎಂದು ಶಬ್ದ ಹೊರಡಿಸುವದು ಕಂಡುಬರುತ್ತದೆ. ಇಂಥದ್ದೆ ಪ್ರಕ್ರಿಯೆ ತಾಯಿ ಬಟ್ಟೆ ತೊಳೆಯುವಾಗ 'ಸಿವ್' ಮಾಡತ್ತಿನಿ ಎನ್ನುವಲ್ಲಿಯು ಕಾಣಬಹುದಾಗಿದೆ. ಬಟ್ಟೆ ತೊಳೆಯುವಾಗ (ನೆಲಕ್ಕೆ ಬಡೆಯುವಾಗ) ಬಾಯಿಂದ ಹೊರಡುವ ಉಸಿರು 'ಸಿವ್ವ' ಎಂದು ಹೊರಡುತ್ತದೆ. ಇನ್ನು ಮಗುವಿನ ಶೌಚಕ್ಕೆ ಸಂಬಂಧಿಸಿದ ರೂಪಗಳ ಬಗ್ಗೆ ಹೇಳುವುದೆಮದರೆ ಕಕ್ಕ ಮಾಡು, ಇಸ್ಸಿ ಮಾಡು, ಸೂ ಮಾಡು, ಥೂ ಮಾಡು, ಇಂಥ ರೂಪಗಳನ್ನು ಗುರುತಿಸಬಹುದು. ಮಗು ಈ ಕ್ರಿಯೆ ಮಾಡುವಾಗ ಅದೂ ಹೊಲಸನ್ನು ಮುಟ್ಟದಿರಲೆಂದು 'ವಾಕ್ ಎಂದು ವಾಕರಿಕೆ ಬಂದಂತೆ ಸನ್ನೆ ಮಾಡಿ ತೋರಿಸಿ ಅದು ಹೊಲಸು ಎಂದು ಖಚಿತ ಪಡಿಸಲಾಗುತ್ತದೆ. ಮಗು ಈ ಪ್ರಕ್ರಿಯೆಯನ್ನು ಅರಿತುಕೊಳ್ಳುವಲ್ಲಿ ಯಶಸ್ವಿಯಾಗುತ್ತದೆ.

ತಾಯಿ ಮಗುವನ್ನು ಆಡಿಸುವಾಗ ಬಳಸುವ ರೂಪಗಳು

ತಾಯಿ ಮಗುವನ್ನು ಮಾತನಾಡಿಸುವದರಿಂದ ಮಗು ತನಗೆ ಮಾತು ಬಾರದಿದ್ದರೂ ಮಾಡುವ ಸನ್ನೆಗಳು ತಾಯಿಯ ಪ್ರೀತಿಯನ್ನು ಉಕ್ಕಿಸುತ್ತದೆ. ಆಗ ಹೊರಡುವ ಶಬ್ದಗಳು, ಕಂದ ಕೂಸು, ಪುಟ್ಟು, ಚಿನ್ನ, ರಾಜ ಇಂಥಹ ರೂಪಗಳು ಹೊಗಳಿಕೆಯ ಪ್ರತಿರೂಪವಾಗಿರುತ್ತವೆ. ಮಗುವನ್ನು ನೋಡಿದಾಕ್ಷಣ ಅದನ್ನು ಮುದ್ದಿಸುವ ಮನಸ್ಸಾಗುತ್ತದೆ. ಮುದ್ದಿಸುವ ಕ್ರಿಯೆ ಶಿಶು ಭಾಷೆಯ ರೂಪ ಪಡೆಯುವಾಗ, ಉಮ್ಮಾ, ಉಪ್ಪ, ಚುಮ್ಮಾ, ಚುಪ್ಪ್, ಬಲ್ಲ ಈ ರೂಪ ಪಡೆಯುತ್ತದೆ. ಉಮ್ಮಾ, ಉಪ್ಪಗಳು ಮುದ್ದಾಡುವಾಗ ಹೊರಡುವ ಧ್ವನಿಯ ಸಂಕೇತವಾದರೆ 'ಬಲ್ಲ' ಎನ್ನುವದು 'ಬೆಲ್ಲ' (ಸಿಹಿ) ಎನ್ನುವದರ ಬದಲಾದ ರೂಪ. ಇದು 'ಸಿಹಿ ಮುತ್ತು' ಎನ್ನುವುದಕ್ಕೆ ಬಳಕೆಯಾಗುತ್ತದೆ.

ಮಗುವನ್ನು ಸಂತೋಷ ಪಡಿಸಲು ಅಥವಾ ಅದರ ಅಳುವು ನಿಲ್ಲಿಸಲು ಅದಕ್ಕೆ ಕೆಲವು ಪ್ರಾಣಿಗಳನ್ನು ತೋರಿಸಲಾಗುತ್ತದೆ. ಅವುಗಳ ಹೆಸರು ಕೂಡಾ ಆ ಪ್ರಾಣಿ ಹೊರಡಿಸುವ ಶಬ್ದದ ಅನುಕರಣೆಯೆ ಆಗಿರುತ್ತವೆ. ತೀತಿ(ಕೋಳಿ), ಆಂಬಾ (ಆಕಳು), ಕೌಕೌ(ಕಾಗೆ), ಮ್ಯಾಂವು(ಬೆಕ್ಕು), ಬೌಬೌ(ನಾಯಿ), ಚಿಂವ್ ಚಿಂವ್(ಗುಬ್ಬಿ) ಇವುಗಳಲ್ಲದೆ ವಾಹನ, ವಸ್ತು ಹೊರಡಿಸುವ ಶಬ್ದಗಳು ಮಕ್ಕಳ ಭಾಷೆಯಲ್ಲಿ ಪಾಲು ಪಡೆದುಕೊಳ್ಳುತ್ತೇವೆ. ಅವು ಡಿರ್ (ಬಿಯು, ಬ್ಬರ್, ಪಂವ್ ಪಂವ್ ಪೀ ಇಂತಹ ರೂಪ ನಿಷ್ಪತ್ತಿ ಮಕ್ಕಳ ಭಾಷೆಯಲ್ಲಿವೆ. ಇವುಗಳು ಮಗುವನ್ನು ಸಂತೋಷ

ಪಡಿಸಲು ಆಡುವ ಮಾತುಗಳಲ್ಲಿರುತ್ತವೆ. ಬಿಯಾ ಹೋಗಾಮ, ಡೀರ್ ಬಂತು ಎಂದು ಮಗುವಿನ ಗಮನ ಅದರೆಡೆಗೆ ಸೆಳೆಯಲಾಗುತ್ತದೆ. ಪುಗ್ಗಾ (ಬಲೂನ್) ಅಬ್ಬಲ ಪೀಪಿ (ರಬ್ಬರ್ ಪೀಪಿ) ಗಿಲಗಿಂಜಿ (ಗಿಲಗಿಲ), ಗೊಂಬೆ (ಗೊಂಬೆ) ಐಲುಗಾಡಿ (ರೈಲುಗಾಡಿ) ಇಂತಹ ಪ್ಲಾಸ್ಟಿಕ್‌ನಿಂದ ಮಾಡಿರುವ ವಸ್ತುಗಳು ಮಗುವಿನ ಆಟದ ವಸ್ತುಗಳಾಗಿರುತ್ತವೆ.

ತಾಯಿ ಅಥವಾ ಮಗುವಿನ ಪಾಲಕರು ಮಗುವನ್ನು ಇನ್ನೊಬ್ಬ ವ್ಯಕ್ತಿಯೊಂದಿಗೆ ಆತ್ಮೀಯತೆ ಬೆಳಸುವಲ್ಲಿ ಮತ್ತು ಆ ಮಗುವಿಗೆ ಸಂಬಂಧಗಳ ಪರಿಚಯ ಮಾಡಿಕೊಡುವುದು ಇದೆ. "ಅಲ್ಲಿ ಮಾಮಗೆ ಡಿಒಡಿ" 'ಅಕ್ಕನಿಗೆ ಡಿಸ್ಂ ಮಾಡು' 'ತಾತಗೆ ಅತ್ತಿ ಹಾಕು' ಇಂತಹ ರೂಪಗಳ ಬಳಕೆ ಕಂಡುಬರುತ್ತದೆ. 'ಅತ್ತಿ' ಹತ್ತ ಕ್ರಮವಾಗಿ ಲತ್ತಿ ಮತ್ತು ಹೊಡೆತ ರೂಪಗಳಿಂದ ಬಂದವುಗಳು. ಡಿಸ್‌ಮಾಡು ಡಿಒಡ ಚಲನಚಿತ್ರಗಳ ಪ್ರಭಾವದಿಂದ ಬಂದವುಗಳಾಗಿವೆ.

ಮಕ್ಕಳನ್ನು ಹೆದರಿಸುವಾಗ ಬಳಸುವ ರೂಪಗಳು

ತಾಯಿ ಮಗುವಿಗೆ ಉಣಿಸುವಾಗ, ಆಡಿಸುವಾಗ, ಮಲಗಿಸುವಾಗ ಮಗುವಿನ ಹಟವನ್ನು ನಿಯಂತ್ರಿಸಲು ಮಗುವಿಗೆ ಕೆಲವು ವಸ್ತುಗಳ ಹೆಸರು ಹೇಳಿ ಹೆದರಿಸುತ್ತಾಳೆ. ಆಗ ಮಗು ಹಟ ಬಿಟ್ಟು ನಿಯಂತ್ರಣಕ್ಕೆ ಬರುತ್ತದೆ. ಮಗುವನ್ನು ಉಣಿಸುವಾಗ "ಉಣ್ಣು ಇಲ್ಲಂದ್ರೆ 'ಬಾವು' ಬಂದು ತಿಂತ್ತಾದ ನೋಡು ಎಂದು ಹೇಳುವುದನ್ನು ಕಾಣಬಹುದು. ಸಂಜೆ ಚಂದ್ರ ತೋರಿಸಿ ಮುಂಜಾನೆ ಸೂರ್ಯನನ್ನು ತೋರಿಸಿ, ಚಂದ್ರ ಮತ್ತು ಸೂರ್ಯ ಮುತ್ಯಾಗ ಕೋಡಾದ ಬ್ಯಾಡ ಜಲ್ದಿ ತಿನ್ನಪ್ಪ ಎನ್ನುವ ವಾಕ್ಯಗಳು ಸಿಗುತ್ತದೆ. ಮಗು ಮತ್ತೆಯೂ ಊಟ ಮಾಡದಿದ್ದಾಗ 'ಅತ್ತಿ ಬಿಳತ್ತಾವ' ಎಂದು ಹೆದರಿಸಿ ಉಣಿಸಲಾಗುತ್ತದೆ.

ಮಗುವನ್ನು ಒಂದು ವಸ್ತು ಅಥವಾ ಒಂದು ಜಾಗಕ್ಕೆ ಮುಟ್ಟದಂತೆ ಮತ್ತು ಹೋಗದಂತೆ ಮಾಡಲು ಅಲ್ಲಿ 'ಬಾವು' ಅದಾ, ಕಕ್ಕ ಅದಾ, ಎಂದು ಹೆದರಿಸಲಾಗುತ್ತದೆ. ಇಲ್ಲಿ ಬೌವ್ವ (ದೇವ್ವ) 'ಬಾವು' ಹುಳ ಅಥವಾ 'ಹಾವು' ಎನ್ನುವ ಅರ್ಥದಲ್ಲಿ ಬಳಸಲಾಗುತ್ತದೆ. 'ಕಕ್ಕ' ಎನ್ನೋದು ಹೊಲಸು ಎನ್ನುವ ಅರ್ಥದಲ್ಲಿ ಬಳಕೆಯಾಗುತ್ತದೆ. ಅಮ್ಮಿ (ಎಮ್ಮೆ) ಬಂತ್ತು, ಅಂಬಾ (ಆಕಳು ಬಂತ್ತು, ಹೀಗೆ ಮಗುವಿಗೆ ಹೇಳುವದರೊಂದಿಗೆ ತನಗೆ ಪ್ರಾಣಿಗಳಿಂದ ಅಪಾಯವಿದೆ ಎನ್ನುವ ಅರಿವು ಮೂಡಿಸಲಾಗುತ್ತದೆ. ಹೆದರಿಸುವ ರೂಪಗಳಲ್ಲಿ ಮಗುವಿನ ಚೇಷ್ಟ ಚಟುವಟಿಕೆಗಳನ್ನು ನಿಯಂತ್ರಿಸಲು ಬಳಕೆಯಾಗುತ್ತದೆ.

ಮಕ್ಕಳ ಉಡುಗೆ ತೊಡುಗೆಗೆ ಬಳಸುವ ರೂಪಗಳು

ಮಕ್ಕಳ ಆರೋಗ್ಯ ಕಾಪಾಡಲು ಕೆಲವು ಉಡುಗೆಗಳನ್ನು ಹಾಕಲಾಗುತ್ತದೆ. ಅದರಲ್ಲಿ 'ಕುಲಾಯಿ' 'ಕುಂಚಿಗೆಗಳು' ಪ್ರಮುಖವಾದವುಗಳು. ಮಗುವಿಗೆ ಗಾಳಿಯಿಂದ ಆಗುವ ಶೀತದಿಂದ ತಪ್ಪಿಸಲು ಬಟ್ಟೆಯಿಂದ ಹೊಲಿದು ಮಾಡಿದ 'ಕುಲಾಯಿ'ಯನ್ನು ಕಟ್ಟಲಾಗುತ್ತದೆ. ಇದು

ಮಗುವಿನ ತಲೆಯ ಭಾಗದಲ್ಲಿಯ ಸೂಕ್ಷ್ಮ ಭಾಗವಾದ ನಳ್ಳತ್ತಿಗೆ 'ಇರುವೆಗಳು' ಮುತ್ತದಂತೆ ತಡೆಯುತ್ತದೆ. 'ಕುಲಾಯಿ'ಯಂಥದ್ದೇ ಆದ ಕುಂಚಿಗೆ ಇದು ಮಗುವಿನ ದೇಹವನ್ನು ರಕ್ಷಣೆ ಮಾಡಲು ಉಪಯೋಗಿಸಲಾಗುತ್ತದೆ. ಇದನ್ನು ಸೀರೆಗಳಿಂದ ಜೋಡಿಸಿ ಹೊಲಿಯಲಾಗಿರುತ್ತದೆ. ಇದನ್ನು ಕೃಷಿ ಕೆಲಸಕ್ಕೂ ಉಪಯೋಗಿಸುತ್ತಾರೆ. 'ಕುಂಚಿ' 'ಕುಲಾಯಿ' ಮರಾಠಿ ಪದ. ಇದು ಗುಲ್ಬರ್ಗ, ಯಾದಗಿರಿ ಪರಿಸರದಲ್ಲಿ ಸ್ವೀಕರಣ ಪದವಾಗಿ ಬಳಕೆಯಲ್ಲಿದೆ. ಮಗುವಿಗಾಗಿ ಬಳಸುವ ಬಟ್ಟೆಗಳಲ್ಲಿ 'ಹೇಲ ಬಟ್ಟೆಯೂ' ಒಂದು. ಇದು ಮಗುವಿಗೆ 'ಸಂಡಾಸ' ಅಥವಾ ವಾಂತಿ ಮಾಡಿಕೊಂಡಾಗ ಅದನ್ನು ಸ್ವಚ್ಛಗೊಳಿಸಲು ಬಳಸುತ್ತಾರೆ.

ಮಗುವಿನ ಆರೋಗ್ಯ ಕುರಿತು ಜನರಲ್ಲಿ ಕೆಲವು ನಂಬಿಕೆಗಳು ಪ್ರಚಲಿತದಲ್ಲಿವೆ. ಮಗುವನ್ನು ಕೆಟ್ಟ ದೃಷ್ಟಿಗಳಿಂದ ರಕ್ಷಿಸುವ ಸಲುವಾಗಿ ಕೆಲವು ತಂತ್ರಗಳನ್ನು ಬಳಸಲಾಗುತ್ತದೆ. ಅವುಗಳಲ್ಲಿ 'ಹಾಲಗಡಗ' 'ಕಾಲಗಡಗ', 'ಮುರುವು', ಲಿಂಗದಕಾಯಿ ಇಂಥಹ ವಸ್ತುಗಳನ್ನು ಬಳಸಲಾಗುತ್ತದೆ. 'ಹಾಲಗಡಗ' ಇದು ಮಗು ಹಾಲು ಕುಡಿಯುವಾಗ ಜನರು ದೃಷ್ಟಿ ಆಗದಿರಲೆಂದು ಕೈಗೆ ಹಾಕುತ್ತಾರೆ. ಇದನ್ನು ಕುರಿಗಳ ಉಣ್ಣೆಯಿಂದ ಮಾಡಿರುತ್ತಾರೆ. ಕರಿಯ ವಸ್ತು ಹತ್ತಿರವಿದ್ದರೆ ದೃಷ್ಟಿ ಆಗುವುದಿಲ್ಲ ಎನ್ನುವ ನಂಬಿಕೆಯ ಈ ಪ್ರಕ್ರಿಯೆಗೆ ಕಾರಣವಾಗಿದೆ. 'ಕಾಲಗಡಗ' ಮುರುವು, ಲಿಂಗದಕಾಯಿ ಇವುಗಳು ತಾಮ್ರ, ಹಿತ್ತಾಳೆ, ಬೆಳ್ಳಿ, ಬಂಗಾರ ಹೀಗೆ ಕೆಲವು ಲೋಹಗಳು ಮಿಶ್ರಿತವಾಗಿ ಮಾಡಲಾಗಿರುತ್ತದೆ. 'ಕಾಲಗಡಗವನ್ನು' ಪಂಚ ಲೋಹದಿಂದ ಮಾಡಿದ ಕಡಗವಾಗಿರುತ್ತದೆ. ಇದನ್ನು ಕಾಲಿಗೆ ಹಾಕಲಾಗಿರುತ್ತದೆ. ಹೀಗಾಗಿ ಇದಕ್ಕೆ ಕಾಲಗಡಗ ಎನ್ನುತ್ತಾರೆ. 'ಮುರುವು' ಇದು ಬಂಗಾರದ್ದಾಗಿದ್ದು, ಕಿವಿಯಲ್ಲಿ ಹಾಕಿರುತ್ತಾರೆ. ಗಂಡು ಹೆಣ್ಣು ಭೇದವಿಲ್ಲದೆ ಇದನ್ನು ಹಾಕುತ್ತಾರೆ. ಇದು ಕೆಲವು ಸಾಮಾಜಿಕ ವರ್ಗಗಳಲ್ಲಿ ಇರುವದಿಲ್ಲ. 'ಲಿಂಗದ ಕಾಯಿ' ಇದು ಲಿಂಗವಿಡುವ ಸಂಪ್ರದಾಯವಾಗಿದೆ. ಇದು ಲಿಂಗಾಯತ ಸಮುದಾಯದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದನ್ನು ಮಗು ಹುಟ್ಟಿದ ಐದು ದಿನವಾದ ಮೇಲೆ ಕಟ್ಟಲಾಗುತ್ತದೆ. ಈ ರೂಪಗಳು ಮಗುವಿನ ಉಡುಗೆ ತೊಡುಗೆಗೆ ಸಂಬಂಧಿಸಿದಾಗಿದೆ.

ಮಗುವಿನ ಆಚರಣೆಗೆ ಸಂಬಂಧಿಸಿದ ರೂಪಗಳು

ಭಾರತವು ಆಚರಣೆಗಳ ತವರೂರು ಎನ್ನಬಹುದೇನೋ ಇಲ್ಲಿ ಪ್ರತಿಯೊಂದಕ್ಕೂ ಅನೇಕ ಆಚರಣೆಗಳಿರುತ್ತದೆ. ಹಾಗೆಯೇ ಮಗುವಿನ ಹುಟ್ಟಿನಿಂದ ಹಿಡಿದು ಬಾಲ್ಯಾವಸ್ಥೆ ದಾಟುವವರೆಗೂ ಅನೇಕ ಆಚರಣೆಗಳು ಆಚರಿಸಲಾಗುತ್ತದೆ. ಅವುಗಳಲ್ಲಿ ಮೊದಲಿಗೆ ಬರುವುದು 'ಐದೇಸಿ' ಇದು ಮಗು ಹುಟ್ಟಿದ ಐದನೆ ದಿನಕ್ಕೆ ಮಾಡುವ ಆಚರಣೆ.

ಈ ದಿನ ಮಗು ಮತ್ತು ತಾಯಿ ಇಬ್ಬರ ಮುಟಚಟ್ಟು ಕಳೆಯುವ ದಿನವಾಗಿದೆ. ಬಾಣಂತನವಾದ ದಿನದಿಂದ ಹಿಡಿದು ಐದು ದಿನದವರಗೂ ಬಾಣಂತಿಯನ್ನಾಗಲಿ ಮಗುವನ್ನಾಗಲಿ

ಯಾರೂ ಮುಟ್ಟಿ ನೋಡುವ ಹಾಗಿಲ್ಲ. ಐದನೇ ದಿನಕ್ಕೆ ಐದೇಶಿ ಪೂಜೆ ಮಾಡಿ ಅವರನ್ನು ಮಡಿವಂತರಾಗಿಸುತ್ತದೆ.

ಐದೇಶಿ ನಂತರ ಲಿಂಗಾ ತೊಳಿತಾರೆ. ಇದು ಲಿಂಗಾಯಿತ ಸಮಾಜದಲ್ಲಿದೆ. ಉಳಿದ ಕೆಲವು ಸಮಾಜಗಳಲ್ಲಿ ಅರಸಿಣ ತೊಳೆಯೋದು ಮಾಡುತ್ತಾರೆ. ಮಗುವಿಗೆ ಸಂಬಂಧಿಸಿದ ಆಚರಣೆಗಳಲ್ಲಿ ತೊಟ್ಟಲೊಳಗೆ ಹಾಕೋದು (ಹೆಸರಿಡೋದು) ಮಹತ್ವದ ಆಚರಣೆಗಳಲ್ಲೊಂದು. ಮಗುವಿಗೆ ಒಂದು ಗುರುತು ಕೊಡುವ ಆಚರಣೆ ಇದಾಗಿದೆ. ಈ ದಿನವೆ ಮಕ್ಕಳಿಗೆ ರಾತ್ರಿ 'ಸೆಟಿಗೆವ್ವ' ಬಂದು ಹಣೆ ಬರಹ ಬರೆಯುತ್ತಾಳೆಂದು ನಂಬಿಕೆ ಜನರಲ್ಲಿದೆ. ಹೀಗಾಗಿ ಹೆಸರಿಡುವ ಮೊದಲು ಸೆಟೆಗವ್ವನ ಪೂಜೆ ಮಾಡಲಾಗುತ್ತದೆ. ಆ ನಂತರ ಮಗುವನ್ನು ತೊಟ್ಟಲಿಗೆ ಹಾಕಿ ಹೆಸರಿಡುತ್ತಾರೆ.

'ಬೆಳ್ಳಿ ತೆಗ್ಸಾದು' ಈ ಆಚರಣೆಯು ಮೊದಲ ಹುಟ್ಟಿದ ಗಂಡು ಮಗುವಿಗೆ ಮೊದಲು ಹಲ್ಲು ಮೂಡಿದಾಗ ಮಾಡುವ ಆಚರಣೆಯಾಗಿದೆ. ಮೊದಲ ಹುಟ್ಟಿದ ಗಂಡು ಮಗುವಿಗೆ ಹಲ್ಲು ಮೂಡಿದಾಗ ಮಗುವಿನ ಸೋದರ ಮಾವ ಬೆಳ್ಳಿ ವಸ್ತುವಿನಿಂದ ಆ ಹಲ್ಲಿಗೆ ಮುಟ್ಟಬೇಕು. ಅಥವಾ ಉಜ್ಜಬೇಕು. ಈ ಆಚರಣೆಯನ್ನು ಬೆಳ್ಳಿ ತೆಗೆಯುದು ಎನ್ನುತ್ತಾರೆ.

ಮಗುವಿಗೆ ಬೆಳದಿರುವ ಕೂದಲನ್ನು 'ಜವಳ' ಎನ್ನುತ್ತಾರೆ. ಇದು ಒಂದು ಸಾರಿ ಕತ್ತರಿಸುವವರೆಗೂ 'ಜವಳ' ಅನಿಸಿಕೊಳ್ಳುತ್ತದೆ. ಕೆಲವು ಸಂದರ್ಭದಲ್ಲಿ ಮಕ್ಕಳಿಗೆ ಹತ್ತು ವರ್ಷ ವಾದರೂ ಕೂದಲು ಕತ್ತರಿಸುವದಿಲ್ಲ. 'ಜವಳ' ಅಂತಲೆ ಕರೆಯೊದು ವಾಡಿಕೆಯಿದೆ. ಮಗುವಿನ ಮೊದಲ ಕೂದಲು ತಮ್ಮ ಆರಾಧ್ಯ ದೈವಕ್ಕೆ ನೀಡುವ ರೂಢಿಯಲ್ಲಿದೆ. ಇದು ಮಗುವನ್ನು ಸಂಕಷ್ಟದಿಂದ ಪಾರು ಮಾಡಿದ್ದಕ್ಕಾಗಿ ದೇವರಿಗೆ ಕೂದಲು ಸಮರ್ಪಿಸಲಾಗುತ್ತದೆ. ಈ ಆಚರಣೆಯನ್ನು 'ಜವಳ' ತೆಗೆಯೋದು ಎಂದು ಕರೆಯುತ್ತಾರೆ. ಮಕ್ಕಳಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಮುಂಜಿ ಇಂತಹ ಆಚರಣೆಗಳನ್ನು ಗುರುತಿಸಬಹುದು. ಇದಲ್ಲದೆ ಹೆಣ್ಣು ಮಕ್ಕಳಿಗಾಗಿ ಹಂಚ್ಚಿಬಟ್ಟು ಹಾಕಿಸೋದು, ಕಿವಿಚುಚ್ಚೋದು ಇಂತಹ ಮೊದಲಾದ ಆಚರಣೆಗಳೂ ಯಾದಗಿರಿ ಪರಿಸರದಲ್ಲಿದೆ.

ಮಕ್ಕಳನ್ನು ಅವುಗಳ ಹುಟ್ಟಿದ ಅನುಕ್ರಮ ಗುರುತಿಸುವಲ್ಲಿ ಯಾದಗಿರಿ ಪರಿಸರವು ರೂಪಿಸಿಕೊಂಡು ರೂಪಗಳನ್ನು ಚೊಚ್ಚಲ, ಮರ್ಚಿಲ ಎಂದು ಗುರುತಿನ ನಡುವಿನ ಮಕ್ಕಳು ಒಮ್ಮೆಲೆ ಒಂದಕ್ಕಿಂತ ಹೆಚ್ಚು ಹುಟ್ಟಿದರೆ 'ಅವಳಿ-ಜವಳಿ' ಎಂದು ಕರೆಯುತ್ತಾರೆ.

ಹೀಗೆ ಯಾದಗಿರಿ ಪರಿಸರದಲ್ಲಿರುವ ಶಿಶುಭಾಷಾ ರೂಪಗಳನ್ನು ಅವುಗಳ ಬಳಕೆ ವಲಯ ನಿಷ್ಪತ್ತಿ ಇಂತಹ ಸಂಗತಿಗಳಿಂದ ಪರಿಚಯಸಬಹುದಾಗಿದೆ. ಈ ನಿಟ್ಟಿನಲ್ಲಿ ಇನ್ನು ಹೆಚ್ಚಿನ ಅಧ್ಯಯನಗಳು ಬಂದರೆ ಅವುಗಳ ಸ್ವರೂಪ ಇನ್ನಷ್ಟು ಪರಿಚಯವಾಗಬಲ್ಲದು ಎಂದು ಈ ಅಧ್ಯಯನ ಆಶಿಸುತ್ತದೆ.

ಅಧ್ಯಾಯ ಮೂರು

ಶಿಶು ಭಾಷಾರೂಪಗಳ ರಾಚನಿಕ ವಿವರಣೆ

ಸಂಸ್ಕೃತ ವ್ಯಾಕರಣದಲ್ಲಿ ಪದ ಮತ್ತು ಶಬ್ದ ಎಂಬ ಎರಡು ಬೇರೆ ಬೇರೆ ಪದಗಳನ್ನು ಹೆಚ್ಚು ಕಡಿಮೆ ಒಂದೇ ಅರ್ಥದಲ್ಲಿ ಬಳಸುವ ಕ್ರಮ ಕಂಡುಬರುತ್ತದೆ. ಈ ಬಳಕೆಯನ್ನು ಅನುಸರಿಸಿ ಕನ್ನಡ ವ್ಯಾಕರಣದಲ್ಲಿ ಪದ ಮತ್ತು ಶಬ್ದ ಎಂಬ ಎರಡು ಪದಗಳು ಬಳಕೆಗೆ ಬಂದಿವೆ. ಸಂಸ್ಕೃತದಲ್ಲಿ ಪದ ಎಂಬುದಕ್ಕೆ ಹೆಚ್ಚಿನ ಸಂದರ್ಭಗಳಲ್ಲಿ ಶಬ್ದ ಎಂಬರ್ಥ ಇರುವುದನ್ನು ನೋಡಬಹುದು. ಆದರೆ ಕೆಲವು ಸಂದರ್ಭಗಳಲ್ಲಿ ಮಾತ್ರ ವಿಶಿಷ್ಟವಾದ ಪ್ರತ್ಯಯಗಳೊಂದಿಗೆ ಬರುವ ಶಬ್ದ ಎಂಬ ಅರ್ಥವೂ ಇದೆ. ವಿಭಕ್ತಿ ಪ್ರತ್ಯಯ ಇಲ್ಲವೇ ಪ್ರತ್ಯಯಗಳನ್ನೊಳಗೊಂಡ ರಚನೆಗಳಿಗೆ ಮಾತ್ರ ಸಂಸ್ಕೃತದಲ್ಲಿ ಪದಗಳೆಂದು ಕರೆಯಲಾಗಿದೆ. ಬೇರೆ ಬೇರೆ ಪ್ರತ್ಯಯಗಳೊಂದಿಗೆ ಬಂದಿರುವ ಪದಗಳನ್ನು ಪದರೂಪಗಳೆಂದು ಕರೆಯಬಹುದಾಗಿದೆ. ಈ ಹಿನ್ನೆಲೆಯಲ್ಲಿ ಯಾದಗಿರಿ ಜಿಲ್ಲೆಯ ಶಿಶುಭಾಷಾ ರೂಪಗಳ ರಚನೆಯಲ್ಲಿ ಸಹಜ, ಸಾಧಿತ, ಸಂಕ್ಷಿಪ್ತ ರೂಪಗಳ ಸ್ವರೂಪವನ್ನು ಗಮನಿಸಿ ವಿಶ್ಲೇಷಣೆ ಮಾಡಲು ಪ್ರಯತ್ನಿಸಲಾಗಿದೆ.

ಶಿಶು ಭಾಷಾರೂಪಗಳ ರಚನೆಯನ್ನಾಧರಿಸಿ ಒಂದಕ್ಷರ, ಎರಡಕ್ಷರ ಮೂರಕ್ಷರ, ನಾಲ್ಕಕ್ಷರ ರೂಪಗಳ ರಾಚನಿಕ ವರ್ಗೀಕರಣ ಮಾಡಲಾಗಿದೆ. ಈ ರೂಪಗಳಲ್ಲಿ ಎರಡಕ್ಷರ ರೂಪಗಳು ಹೆಚ್ಚಾಗಿ ಕಂಡುಬರುತ್ತವೆ. ಒಂದು ಭಾಷೆಯ ನಿಜವಾದ ಅಂತಸತ್ವ ತಿಳಿದುಕೊಳ್ಳಬೇಕಾದರೆ ಆ ಭಾಷೆಯ ಆಂತರಿಕ ರಚನೆಯನ್ನು ಅರಿತುಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಆ ಮೂಲಕ ಭಾಷೆಯ ನಿಜರೂಪ ತಿಳಿಯಲು ಸಾಧ್ಯ. ಶಿಶು ಭಾಷಾರೂಪಗಳಲ್ಲಿನ ಧ್ವನಿ, ಧ್ವನಿಮಾ, ಆಕೃತಿಮಾತ್ಮಕ ಸ್ವರೂಪ ಅರಿತುಕೊಳ್ಳುವುದು ಅತ್ಯವಶ್ಯಕವಾಗಿದೆ.

೩.೧ ಶಿಶು ಭಾಷೆಯ ರೂಪಗಳು

ಅಚ್ಚಿ (ರೊಟ್ಟಿ)	ಅಮ್ಮಾ (ಮೊಲೆಹಾಲು)
ಅಮ್ಮಿ (ಎಮ್ಮಿ)	ಅತ್ತಿ (ಲತ್ತಿ)
ಅಂಗ (ಹೆಂಗ)	ಅಲ್ಲ (ಎಲ್ಲಿ)
ಆರು (ಯಾರು)	ಆಕು (ಯಾಕು)
ಆಡು (ಲಾಡು)	ಆಬೂ (ಗಾಯ)
ಇಸ್ಸಿ (ಹೊಲಸು)	ಇಮಾನ (ವಿಮಾನ)
ಉಮ್ಮಾ (ಊಟ)	ಊಪ್ (ತಣ್ಣಾಗಿಸು)
ಓನು (ಏನು)	ಓಟ (ಏಟು)
ಕೂಸು (ಮಗು)	ಗೂಕು (ಮಂಗ)
ಗಲ್‌ಗಲ್ (ಭಿಕ್ಷುಕ)	ಚಾಕು (ಸಾಕು)
ಚಿಯಾ (ಮಾಂಸ)	ಚುಪ್ (ಸುಮ್ಮನೆ)
ಚೈಕಲ್ (ಸೈಕಲ್)	ಚುಂಬಳ (ಸುಂಬಳ)
ಚಾಲಿ (ಶಾಲೆ)	ಚಾರು (ಸಾರು)
ಜೇಜಿ (ದೇವರು)	ಜೋಜೋ (ತೊಟ್ಟಿಲ ತೂಗು)
ಡಿರ್ (ವಾಹನ)	ತೀತಿ (ಕೋಳಿ)
ತಪ್ವಿ (ಸಪ್ಪಬ್ಯಾಳಿ)	ಪೈಸಾ (ರೊಕ್ಕ)
ಪಾಪು (ಮಗು)	ಪುಗ್ಗಾ (ಬಲೂನ)
ಪಚಕೋ (ಮಲಗು)	ಪುಸ್ಸಿ (ಬೆಕ್ಕು)
ಬೂ (ನೀರು)	ಬಾವು (ಹಾವು)
ಬುಲ್ಲಿ (ಶಿಶ್ನ)	ಬೌವ್ವ (ದೆವ್ವ)
ಬುಜ್ಜಿ (ಪಾಪು)	ಬಕರಿ (ರೊಟ್ಟಿ)
ಬಾಡ (ಬ್ಯಾಡ)	ಬಾನಿ (ಬ್ಯಾನಿ)

ಬುಸ್ಸಿ (ಸ್ನಾನ) ಬ್ಬೂ (ವಾಹನ)

ಹಾಕ (ಕಾಕ) ಹಾತ (ತಾತ)

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಬರಹ ಕನ್ನಡಕ್ಕಿಂತ ಶಿಶು ಭಾಷಾ ರೂಪಗಳು ವಿಭಿನ್ನ ರೀತಿಯಲ್ಲಿ ಕಾಣುತ್ತವೆ. ಇವು ಕೇವಲ ಮಕ್ಕಳಿಗಾಗಿ ತಂದೆ ತಾಯಂದಿರು ಬಳಸುವಂತಹ ರೂಪಗಳು ಒಂದು ಭಾಷೆಯ ಮೂಲ ರೂಪಗಳನ್ನು ನಾವು ಸಹಜ ರೂಪ ವೆಂದು ಕರೆಯುತ್ತೇವೆ. ಉದಾಹರಣೆಗೆ ಜೇಜಿ, ಬೂ, ಬಾವು, ಪಾಪು, ಅಚ್ಚಿ ಇತ್ಯಾದಿ ಇವು ಯಾವ ಪ್ರತ್ಯಯ ಹೊಂದದೇ ಇರುವಂತಹ ರೂಪಗಳಿಗೆ ಸಹಜ ರೂಪಗಳೆನ್ನಬಹುದು.

೩.೨ ಅನುಕರಣ ವಾಚಿ ರೂಪಗಳು

ಅಂಬಾ (ಆಕಳು) ಬೌಬೌ (ನಾಯಿ)

ಮ್ಯಾಂವು (ಬೆಕ್ಕು) ಬುಸು ಬುಸು (ಹಾವು)

ಚಿಂವ್ ಚಿಂವ್ (ಗುಬ್ಬಿ) ಕೌಕೌ (ಕಾಗೆ)

ಪಂವ್‌ಪಂವ್ (ವಾಹನ)

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಬರಹ ಭಾಷೆಗಿಂತ ಭಿನ್ನ ರೀತಿಯಲ್ಲಿವೆ. ಇವು ಮಕ್ಕಳ ಭಾಷೆಯಲ್ಲಿ ಸಹಜ ರೂಪಗಳಾಗಿವೆ. ತಂದೆ ತಾಯಿ ಮತ್ತು ಸುತ್ತಲಿನ ಪರಿಸರದ ವ್ಯಕ್ತಿಗಳು ಮಕ್ಕಳನ್ನು ಆಡಿಸುವಾಗ, ಉಣಿಸುವಾಗ, ಮಲಗಿಸುವಾಗ, ತೊಟ್ಟಿಲು ತೂಗುವಾಗ ಇಂತಹ ರೂಪಗಳನ್ನು ಬಳಸುವುದು ಸಹಜ.

ಅನುಕರಣವಾಚಿ ಎಂದರೆ ಯಾವುದೇ ಪ್ರಾಣಿ, ಪಕ್ಷಿ, ವಾಹನಗಳು ಹೊರಡಿಸುವ ಧ್ವನಿಗಳನ್ನು ಅನುಕರಿಸಿ ಉಚ್ಚರಿಸುವಂತಹ ರೂಪಗಳನ್ನು ನಾವು ಅನುಕರಣವಾಚಿ ರೂಪಗಳೆಂದು ಕರೆಯುತ್ತೇವೆ. ಉದಾಹರಣೆಗೆ ಬೌಬೌ, ಕೌಕೌ, ಚಿಂವು ಚಿಂವು, ಮ್ಯಾಂವು ಮ್ಯಾಂವು, ಬುಸು ಬುಸು, ಪಂವ್ ಪಂವ್, ಅಂಬಾ ಡಿಸಮ್ಮಡು, ಇತ್ಯಾದಿ ರೂಪಗಳಿಗೆ ಅನುಕರಣವಾಚಿ ರೂಪವೆಂದು ಕರೆಯುತ್ತೇವೆ.

ಡಿಸಮ್ಮಾಡು ಎನ್ನುವ ರೂಪ ಸಮೂಹ ಮಾಧ್ಯಮಗಳ ಮೂಲಕ ಬಂದ ರೂಪ. ಆಧುನಿಕ ಯುಗದಲ್ಲಿ ಮನುಷ್ಯನ ದೈನಂದಿನ ವ್ಯವಹಾರದಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಮಹತ್ವ ಪೂರ್ಣವಾದದು. ಜಾಗತೀಕ ಮಟ್ಟದಿಂದ ಹಿಡಿದು ಕಣ್ಣು ಮುಂದಿನ ಸ್ಥಳೀಯ ಘಟನೆಗಳ ಕುರಿತಾಗಿ ಪ್ರಸಾರ ಮಾಡುವಲ್ಲಿ ಇದರ ವ್ಯಾಪ್ತಿ ಹರಡಿಕೊಂಡಿದೆ. ಮಾಧ್ಯಮಗಳಲ್ಲಿ ಟಿ.ವಿ.ಯ ಪಾತ್ರ ಬಹಳ ಮುಖ್ಯವಾದದು.

ಟಿ.ವಿ.ಯಲ್ಲಿ ಒಂದು ಸನ್ನಿವೇಶದಲ್ಲಿ ಹೊಡಿದಾಡುವ ಸಂದರ್ಭದಲ್ಲಿ ಡಿಸಮ್ ಎನ್ನುವ ಶಬ್ದವನ್ನು ಕೇಳಿದ ಮೇಲೆ ಅದರ ಹಾಗೆ ಶಬ್ದಗಳು ಹೊರಡಿಸುತ್ತೇವೆ. ಇವು ಮಗುವಿನ ಭಾಷೆಯಲ್ಲಿ ಸಹಜ ರೂಪಗಳಾಗಿ ಮಾರ್ಪಡುತ್ತವೆ. ತಾಯಿ–ತಂದೆ ಮಗುವಿನ ಜೊತೆ ಮಾತನಾಡುವಾಗ "ಹೇ ಪುಟ್ಟಾ ಮಾಮಗೆ ಡಿಸಮ್ಮಾಡು" ಎಂದು ಸಹಜವಾಗಿ ಬಳಸುತ್ತಾರೆ. ಈ ರೂಪ ಜಾಗತಿಕ ಮಟ್ಟದಲ್ಲಿ ಹೆಚ್ಚು ಬಳಕೆಯಲ್ಲಿದೆ. ಅದ್ದರಿಂದ ಸಾಮಾನ್ಯ ಭಾಷೆಗಿಂತ ಭಿನ್ನವಾಗಿ ಕಂಡುಬರುತ್ತದೆ.

೩.೩. ಸಂಯುಕ್ತ ರೂಪಗಳು

ಆ ಮಾಡು (ಬಾಯಿತೆರೆ)

ಓಂ ಮಾಡು (ನಮಸ್ಕಾರ ಮಾಡು)

ಡಿ ಹೊಡಿ (ಡಿಕ್ಕಿ ಹೊಡಿ)

ಥೂ ಮಾಡು (ಉಗುಳು)

ಸೂಮಾಡು (ಉಚ್ಚೆ ಮಾಡು)

ಈ ರೂಪಗಳ ರಚನೆ ಶಿಶು ಭಾಷೆಯಲ್ಲಿ ಕಾಣುತ್ತೇವೆ. ಇವು ಬರಹ ಕನ್ನಡಕ್ಕಿಂತ ಭಿನ್ನವಾಗಿ ಸಾಮಾಜಿಕ ವರ್ಗಗಳಲ್ಲಿ ಮಕ್ಕಳಿಗಾಗಿ ಬಳಕೆಯಾಗುವಂತಹ ರೂಪಗಳು. ಆದ್ದರಿಂದ ಸಾಮಾನ್ಯ ಭಾಷೆಗಿಂತ ಭಿನ್ನವಾಗಿ ಕಂಡುಬರುತ್ತವೆ.

ಸಂಯುಕ್ತ ರೂಪವೆಂದರೆ ಯಾವುದೇ ನಾಮಪದ, ಕ್ರಿಯಾಪದ, ಸೇರಿ ಆಗುವುದಕ್ಕೆ ಸಂಯುಕ್ತ ರೂಪವೆಂದು ಕರೆಯುತ್ತೇವೆ. ಉದಾಹರಣೆಗೆ ಥೂ+ಮಾಡು= ಥೂಮಾಡು, ಆ+ಮಾಡು= ಆಮಾಡು ಓಂ+ಮಾಡು= ಓಂಮಾಡು, ಡಿ+ಒಡಿ= ಡಿಹೊಡಿ, ಸೂ+ಮಾಡು= ಸೂಮಾಡು ಇಂತಹ ರೂಪಗಳು ಕ್ರಿಯಾಧಾತುಗಳು ಮಾಡು, ಹೊಡಿ ಎಂಬ ಇತರ ರೂಪಗಳೊಡನೆ ಸೇರಿದಾಗ ಸಂಯುಕ್ತ ರೂಪಗಳಾಗುತ್ತವೆ.

೩.೪. ಸಂಕ್ಷಿಪ್ತಗೊಳಿಸಿದ ರೂಪಗಳು

ಚಾಕಿ > ಚಾಕ್ಲೇಟ್

ಬಿಕ್ಕಿ > ಬಿಸ್ಕೀಟ್

ಸಂಕೀರ್ಣರೂಪಗಳನ್ನು ಸಂಕ್ಷಿಪ್ತಗೊಳಿಸಿ ಬಳಸುವ ರೂಪಗಳಿಗೆ ಸಂಕ್ಷಿಪ್ತ ರೂಪ ಎನ್ನುವರು. ಈ ರೂಪಗಳು ಕೇವಲ ಮಕ್ಕಳಿಗಾಗಿ ತಂದೆ-ತಾಯಿಯಂದಿರು ಬಳಸುತ್ತಾರೆ. ಮಕ್ಕಳ ಜೊತೆ ಮಾತನಾಡುವಾಗ ಸಂಕೀರ್ಣ ರೂಪಗಳ ಸಂಕ್ಷಿಪ್ತಗೊಳಿಸಿ ಬಳಸುತ್ತಾರೆ. ಉದಾಹರಣೆಗೆ ಚಾಕ್ಲೇಟ್> ಚಾಕಿ, ಬಿಸ್ಕೀಟ್ > ಬಿಕ್ಕಿ ಎಂಬ ರೂಪಗಳು ಮಕ್ಕಳ ಭಾಷೆಯಲ್ಲಿ ವಿಶೇಷವಾಗಿ ಕಾಣುತ್ತೇವೆ.

ಸಹಜ ರೂಪಗಳನ್ನು ಆಂತರಿಕ ರಚನೆಯಿರದ ರೂಪಗಳೆಂದು, ಸಂಯುಕ್ತ ರೂಪಗಳನ್ನು ಆಂತರಿಕ ರಚನೆಯಿರುವ ರೂಪಗಳೆಂದು ಡಿ.ಎನ್. ಶಂಕರಭಟ್ ವಿಂಗಡಿಸುತ್ತಾರೆ.(ಕನ್ನಡ ಶಬ್ದ ರಚನೆ, ೧೯೯)

ಶಿಶು ಭಾಷಾ ರೂಪಗಳ ರಚನೆಯನ್ನು ಗಮನಿಸಿದಾಗ ಸಾಮಾನ್ಯ ಭಾಷೆಗಿಂತ ಭಿನ್ನವಾಗಿ ಕಾಣುತ್ತೇವೆ. ಈ ರೂಪಗಳ ರಚನೆಗೆ ಅನುಗುಣವಾಗಿ ಒಂದಕ್ಷರ, ಎರಡಕ್ಷರ, ಮೂರಕ್ಷರ, ನಾಲ್ಕಕ್ಷರ ಗಳಾಗಿ ವಿಭಾಗಿಸಿಕೊಳ್ಳಲಾಗಿದೆ. ಹ್ರಸ್ವಸ್ವರ, ದೀರ್ಘಸ್ವರದಿಂದ ಪ್ರಾರಂಭವಾಗುವ ಹಾಗೂ ವ್ಯಂಜನ ಹ್ರಸ್ವ ಮತ್ತು ದೀರ್ಘಸ್ವರದಿಂದ ಆರಂಭವಾಗುವ ರೂಪಗಳೆಂದು ವರ್ಗೀಕರಣ ಮಾಡಲಾಗಿದೆ.

೩.೫. ಒಂದಕ್ಷರ ಶಿಶು ಭಾಷಾ ರೂಪಗಳು

ಬೂ (ನೀರು)

೩.೬. ಎರಡಕ್ಷರ ರೂಪಗಳು

ಅಂಬಾ (ಹಸು, ಆಕಳು)	ಅಚ್ಚಿ (ರೊಟ್ಟಿ)	ಅಮ್ಮಾ (ಮೊಲೆಹಾಲು)
ಅಂದು (ಒಂದು)	ಅತ್ತಿ (ಲತ್ತಿ)	ಅಮ್ಮಿ (ಎಮ್ಮಿ)
ಅಲ್ಲಿ (ಎಲ್ಲಿ)	ಅಂಗ (ಹೆಂಗ)	ಆಕು (ಯಾಕು)
ಆರು (ಯಾರು)	ಆತು (ಆಯಿತು)	ಆಬೂ (ಗಾಯ)
ಆಡು (ಲಾಡು)	ಇಸ್ಸಿ (ಹೊಲಸು)	ಉಮ್ಮಾ (ಊಟ)
ಊಪ್ (ಊದು)	ಊಸ್ (ಊದು)	ಎಡ್ಡು/ಅಡ್ಡು (ಎರಡು)
ಐನಾ (ಚೈನಾ)	ಓನು (ಏನು)	ಓಟು (ಏಟು)
ಕೂಸು (ಮಗು)	ಗೂಕು (ಮಂಗ)	ಚಾಕು (ಸಾಕು)
ಚಾರು (ಸಾರು)	ಚುಪ್ (ಸುಮನೆ)	ಚುಚ್ಚಿ (ಸೂಜಿ)
ಚಾಲಿ (ಶಾಲೆ)	ಚಾಕಿ (ಚಾಕ್ಲೇಟು)	ಜೇಜಿ (ದೇವರು)
ಜೋಜೋ (ತೂಗುವುದು)	ಡಿರ್ ಬುರ್ (ವಾಹನ)	ತಾಟ (ಟಾಟಾ)
ತೀತಿ (ಕೋಳಿ)	ಪೈಸಾ (ರೊಕ್ಕ)	ಪಾಪು (ಮಗು)
ಪುಗ್ಗಾ (ಬಲೂನ)	ಬಾವು (ಹಾವು)	ಬೌವ್ವ (ದೆವ್ವ)
ಬುಜ್ಜಿ (ಪಾಪು)	ಬಿಯ (ಊರಿಗೆ)	ಬಾಡ (ಬ್ಯಾಡ)

ಬಾನಿ (ಬ್ಯಾನಿ)	ಬಿಕ್ಕಿ (ಬಿಸ್ಕೀಟು)	ಬೂತು (ಬೂಟು)
ಹಾಕ (ಕಾಕ)	ಹಾತ (ತಾತ)	ಹಣ್ಣಿ (ಹಣ್ಣು)
ಬುಲ್ಲಿ (ಶಿಶ್ನ)	ಚಿಯಾ (ಮಾಂಸ)	

೩.೭. ಮೂರಕ್ಷರ ರೂಪಗಳು

ಆಮಾಡು (ಬಾಯಿತೆರಿ)	ಇಮಾನ (ವಿಮಾನ)
ಉಪಾಯ (ರೂಪಾಯಿ)	ಓಂ ಮಾಡು (ನಮಸ್ಕಾರ ಮಾಡು)
ಚೈಕಲ್ (ಸೈಕಲ್)	ಚುಂಬಳ (ಸುಂಬಳ)
ಡಿಹೊಡಿ (ಡಿಕ್ಕಿಒಡಿ)	ಥೂಮಾಡು (ಊಗುಳುವದು)
ಬಕರಿ (ರೊಟ್ಟಿ)	ಸೂಮಾಡು (ಏಕಿಮಾಡು, ಒಂದಮಾಡು)

೩.೮. ನಾಲ್ಕಕ್ಷರ ರೂಪಗಳು

ಕಕ್ಕುಮಾಡು (ವಾಂತಿಮಾಡು)	ಐಲುಗಾಡಿ (ರೈಲುಗಾಡಿ)
ಗಲ್‌ಗಲ್ (ಭಿಕ್ಷುಕ)	ಡಿಸಮ್ಮಾಡು (ಹೊಡಿದಾಡು)
ಬುರುಬುರಿ (ಬಜಿ)	ಪಾಯಿಪಾಯಿ (ನಡಿದಾಡು)

೩.೯. ಐದಕ್ಷರ ರೂಪಗಳು

ಆಕಾಶಗಾಡಿ (ವಿಮಾನ)

ಅಂತರಗಾಡಿ (ವಿಮಾನ)

ರಿಂದನಕಟ್ಟಿ (ತುಲಸಿಕಟ್ಟಿ)

ಇಂತಹ ರಚನೆಯುಳ್ಳ ರೂಪಗಳು ಯಾದಗಿರಿ ಪರಿಸರದಲ್ಲಿ ಬಳಕೆಯಾಗುತ್ತವೆ. ತಂದೆ ತಾಯಿ ಮತ್ತು ಮಗುವಿನ ಸುತ್ತಮುತ್ತಲಿನ ಪರಿಸರದ ವ್ಯಕ್ತಿಗಳು ಮಗುವಿನೊಂದಿಗೆ ಮಾತ ನಾಡುವಾಗ ಈ ರೂಪಗಳನ್ನು ಬಳಸುತ್ತಾರೆ. ಇವು ಬರಹ ಕನ್ನಡದಲ್ಲಿ ಬಳಕೆಯಿಲ್ಲ. ಮಗು ಭಾಷಾ ಕಲಿಕೆಯ ಹಂತದಲ್ಲಿರುವುದರಿಂದ ಅವುಗಳಿಗೆ ಸರಳವಾದ ಧ್ವನಿಗಳನ್ನು ಬಳಸಿ ಪದಗಳ ಉಚ್ಚಾರ ಮಾಡಿಸುತ್ತಿರುತ್ತಾರೆ. ಅವು ಎರಡಕ್ಷರಗಳಿಂದ ಕೂಡಿದ ರೂಪಗಳೇ ಹೆಚ್ಚಾಗಿರುತ್ತವೆ. ಮೂರಕ್ಷರ, ನಾಲ್ಕಕ್ಷರ ರೂಪಗಳು ಮಕ್ಕಳ ಭಾಷೆಯ ಬಳಕೆಯಲ್ಲಿ ಕಡಿಮೆ. ಆದ್ದರಿಂದ ಬರಹದ ಭಾಷೆಗಿಂತ ವಿಶಿಷ್ಟವಾಗಿ ಕಂಡುಬರುತ್ತವೆ. ಒಂದಕ್ಷರ ರೂಪದಿಂದ ಹಿಡಿದು ನಾಲ್ಕಕ್ಷರ ರೂಪಗಳವರೆಗೆ ಬಳಕೆಯಾಗುತ್ತದೆ. ಇವು ಮಗುವಿಗೆ ಸಂತೋಷಪಡಿಸುವುದಕ್ಕೆ ಇಲ್ಲ ಹೆದರಿಸುವುದಕ್ಕೆ, ಮಗು ಅಳುವಾಗ, ಮಲಗಿಸುವಾಗ, ಊಟ ಮಾಡಿಸುವಾಗ, ತೊಟ್ಟಿಲು ತೂಗುವಾಗ ಇಂತಹ ರೂಪಗಳನ್ನು ಬಳಸುವುದು ಸಹಜ.

೩.೧೦. ಹ್ರಸ್ವ ಸ್ವರದಿಂದ ಪ್ರಾರಂಭವಾಗುವ ರೂಪಗಳು

ಅಂಬಾ = ಸ್ವ+ವ್ಯ+ವ್ಯ+ಸ್ವ(ದಿ)

ಅಚ್ಚಿ = ಸ್ವ+ವ್ಯ+ವ್ಯ+ಸ್ವ

ಅಮ್ಮಾ = ಸ್ವ+ವ್ಯ+ವ್ಯ+ಸ್ವ(ದಿ)

ಅಮ್ಮಿ = ಸ್ವ+ವ್ಯ+ವ್ಯ+ಸ್ವ

ಅಲ್ಲಿ = ಸ್ವ+ವ್ಯ+ವ್ಯ+ಸ್ವ

ಅತ್ತಿ = ಸ್ವ+ವ್ಯ+ವ್ಯ+ಸ್ವ

ಅಂಗ = ಸ್ವ+ವ್ಯ+ವ್ಯ+ಸ್ವ

ಇಸ್ಸಿ = ಸ್ವ+ವ್ಯ+ವ್ಯ+ಸ್ವ

ಇಮಾನ = ಸ್ವ+ವ್ಯ+ಸ್ವ(ದಿ)+ವ್ಯ+ಸ್ವ

ಉಮ್ಮಾ = ಸ್ವ+ವ್ಯ+ವ್ಯ+ಸ್ವ(ದಿ)

ಉಪಾಯಿ = ಸ್ವ+ವ್ಯ+ಸ್ವ(ದಿ)+ವ್ಯ+ಸ್ವ

೩.೧೧. ದೀರ್ಘ ಸ್ವರದಿಂದ ಪ್ರಾರಂಭವಾಗಲು ರೂಪಗಳು

ಆಮಾಡು = ಸ್ವ(ದಿ)+ವ್ಯ+ಸ್ವ(ದಿ)ವ್ಯ+ಸ್ವ

ಆಕು = ಸ್ವ(ದಿ)+ವ್ಯ+ಸ್ವ

ಆರು = ಸ್ವ(ದಿ)+ವ್ಯ+ಸ್ವ

ಆಬೂ = ಸ್ವ(ದಿ)+ವ್ಯ+ಸ್ವ(ದಿ)

ಆ ಡು = ಸ್ವ(ದಿ)+ವ್ಯ+ಸ್ವ

ಓಂಮಾಡು = ಸ್ವ(ದಿ)+ವ್ಯ+ವ್ಯ+ಸ್ವ(ದಿ)ವ್ಯ+ಸ್ವ

ಓನು = ಸ್ವ(ದಿ)+ವ್ಯ+ಸ್ವ

ಓಟು = ಸ್ವ(ದಿ)+ವ್ಯ+ಸ್ವ

ಆಡು = ಸ್ವ(ದಿ)+ವ್ಯ+ಸ್ವ

ಊಪ್ = ಸ್ವ(ದಿ)+ವ್ಯ

ಐನಾ = ಸ್ವ(ದಿ)+ವ್ಯ+ಸ್ವ(ದಿ)

ಈ ಉದಾರಣೆಗಳನ್ನು ಗಮನಿಸಿದಾಗ ಕೆಲವು ರೂಪಗಳು ಸ್ವರಗಳಿಂದ ಪ್ರಾರಂಭವಾದರೆ ಕೆಲವು ರೂಪಗಳು ವ್ಯಂಜನ ಲೋಪಗೊಂಡು ಅದರಲ್ಲಿ ಉಳಿದಿರುವ ಸ್ವರದಿಂದ ಈ ಶಿಶು ಭಾಷಾರೂಪಗಳು ಪ್ರಾರಂಭವಾಗುತ್ತವೆ. ಉದಾಹರಣೆಗೆ ಅಮ್ಮಿ > ಎಮ್ಮಿ, ಅಲ್ಲಿ > ಎಲ್ಲಿ, ಓನು > ಏನು, ಓಟು > ಏಟು, ಅಂಬಾ > ಆಕಳು ಇವು ಸ್ವರದಿಂದ ಪ್ರಾರಂಭವಾದರೆ ಕೆಲವು ವ್ಯಂಜಗಳಲ್ಲಿರುವ ಸ್ವರದಿಂದ ಪ್ರಾರಂಭವಾಗುತ್ತವೆ. ಉದಾಹರಣೆಗೆ ಯಾಕು > ಆಕು, ಯಾರು > ಆರು, ಹೆಂಗ > ಅಂಗ, ವಿಮಾನ > ಇಮಾನ, ಲತ್ತಿ > ಅತ್ತಿ, ರೈಲು > ಐಲು, ರೂಪಾಯಿ > ಉಪಾಯಿ, ರೊಟ್ಟಿ > ಒಟ್ಟಿ, ರೊಕ್ಕ > ಒಕ್ಕ, ಇತ್ಯಾದಿ ರೂಪಗಳು ಶಿಶು ಭಾಷಾರೂಪಗಳು ಕಾಣುತ್ತೇವೆ.

ಸಾಮಾನ್ಯವಾಗಿ ನಾಲ್ಕು ಧ್ವನಿಮಾಗಳಿಂದ ಪ್ರಾರಂಭವಾಗಿ ಏಳು ಧ್ವನಿಮಾಗಳಿಂದ ಕೊನೆಗೊಳ್ಳುವ ರೂಪಗಳು ಹೆಚ್ಚಾಗಿ ಕಂಡುಬರುತ್ತವೆ. ಇವು ಪದಾದಿಯ ಸ್ವರದಿಂದ ಪ್ರಾರಂಭ ವಾಗುವಂತ ರೂಪಗಳಾಗಿವೆ. ಇವು ಕೇವಲ ಮಕ್ಕಳಿಗಾಗಿ ಬಳಸುವ ಸಹಜ ರೂಪಗಳಾಗಿವೆ.

೩.೧೨. ವ್ಯಂಜನಾದಿಯಾಗಿ ಹ್ರಸ್ವ ಸ್ವರದಿಂದ ಪ್ರಾರಂಭವಾಗುವ ರೂಪಗಳು

ಬಲ್ಲ = ವ್ಯ+ಸ್ವ+ವ್ಯ+ವ್ಯ+ಸ್ವ

ಪುಸ್ಸಿ = ವ್ಯ+ಸ್ವ+ವ್ಯ+ವ್ಯ+ಸ್ವ

ಚಿಯಾ = ವ್ಯ+ಸ್ವ+ವ್ಯ+ಸ್ವ(ದಿ)

ಪುಗ್ಗಾ = ವ್ಯ+ಸ್ವ+ವ್ಯ+ವ್ಯ+ಸ್ವ(ದಿ)

ಬುಸ್ಸಿ = ವ್ಯ+ಸ್ವ+ವ್ಯ+ವ್ಯ+ಸ್ವ

ಬುಜ್ಜಿ = ವ್ಯ+ಸ್ವ+ವ್ಯ+ವ್ಯ+ಸ್ವ

ಚುಪ್ = ವ್ಯ+ಸ್ವ+ವ್ಯ

ಬಿಯಿ = ವ್ಯ+ಸ್ವ+ವ್ಯ+ಸ್ವ

ಪೈಸಾ = ವ್ಯ+ಸ್ವ(ದಿ)+ವ್ಯ+ಸ್ವ(ದಿ)

ಒಕ್ಕ = ವ್ಯ+ಸ್ವ+ವ್ಯ+ವ್ಯ+ಸ್ವ

ಚುಚ್ಚಿ = ವ್ಯ+ಸ್ವ+ವ್ಯ+ವ್ಯ+ಸ್ವ

ಚುಮ್ = ವ್ಯ+ಸ್ವ+ವ್ಯ

ಮುಲ್ಲು = ವ್ಯ+ಸ್ವ+ವ್ಯ+ವ್ಯ+ಸ್ವ

ತವ್ವಿ = ವ್ಯ+ಸ್ವ+ವ್ಯ+ವ್ಯ+ಸ್ವ

ಪುಗ್ಗಾ = ವ್ಯ+ಸ್ವ+ವ್ಯ+ವ್ಯ+ಸ್ವ(ದಿ)

ಕಂದ = ವ್ಯ+ಸ್ವ+ವ್ಯ+ವ್ಯ+ಸ್ವ

ಚಿನ್ನ = ವ್ಯ+ಸ್ವ+ವ್ಯ+ವ್ಯ+ಸ್ವ

ಪಚಕೋ = ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ(ದಿ)

ಚುಂಬಳ = ವ್ಯ+ಸ್ವ+ವ್ಯ+ವ್ಯ+ ಸ್ವ+ವ್ಯ+ಸ್ವ

ಚೈಕಲ್ = ವ್ಯ+ಸ್ವ(ದಿ)+ವ್ಯ+ ಸ್ವ+ವ್ಯ

ಬಕರಿ = ವ್ಯ+ಸ್ವ+ವ್ಯ+ ಸ್ವ+ವ್ಯ+ಸ್ವ

ಗಲ್‌ಗಲ್ = ವ್ಯ+ಸ್ವ+ವ್ಯ+ವ್ಯ+ಸ್ವ+ವ್ಯ

ಡಿಸಮ್ಮಾಡು = ವ್ಯ+ಸ್ವ+ವ್ಯ+ಸ್ವ+ ವ್ಯ+ವ್ಯ+ಸ್ವ(ದಿ)+ವ್ಯ+ಸ್ವ

ಕಕ್ಕುಮಾಡು = ವ್ಯ+ಸ್ವ+ವ್ಯ+ವ್ಯ+ಸ್ವ+ವ್ಯ+ಸ್ವ(ದಿ)+ವ್ಯ+ಸ್ವ

ಶಂಬೊಮಾಡು = ವ್ಯ+ಸ್ವ+ವ್ಯ++ವ್ಯ+ಸ್ವ+ವ್ಯ+ಸ್ವ(ದಿ)+ವ್ಯ+ಸ್ವ

ಬುರುಬುರಿ = ವ್ಯ+ಸ್ವ+ವ್ಯ+ ಸ್ವ+ವ್ಯ+ಸ್ವ+ವ್ಯ+ಸ್ವ

ಡಿ ಒಡಿ = ವ್ಯ+ಸ್ವ+ಸ್ವ+ವ್ಯ+ಸ್ವ

ರಿಂದನಕಟ್ಟಿ = ವ್ಯ+ಸ್ವ+ವ್ಯ+ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ+ವ್ಯ+ವ್ಯ+ಸ್ವ

ಬುಸುಬುಸು = ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ

೩.೧೩. ವ್ಯಂಜನಾಧಿಯಾಗಿ ದೀರ್ಘಸ್ವರದಿಂದ ಪ್ರಾರಂಭವಾಗುವ ರೂಪಗಳು

ಬೂ = ವ್ಯ+ಸ್ವ(ದಿ)

ಥೂಮಾಡು = ವ್ಯ+ಸ್ವ(ದಿ)+ವ್ಯ+ಸ್ವ(ದಿ)+ವ್ಯ+ಸ್ವ

ತಾ = ವ್ಯ+ಸ್ವ(ದಿ)

ಬಾ = ವ್ಯ+ಸ್ವ(ದಿ)

ಜೇಜಿ = ವ್ಯ+ಸ್ವ(ದಿ)+ವ್ಯ+ ಸ್ವ

ಪಾಪು = ವ್ಯ+ಸ್ವ(ದಿ)+ವ್ಯ+ಸ್ವ

ಬಾವು = ವ್ಯ+ಸ್ವ(ದಿ)+ವ್ಯ+ಸ್ವ

ಬೌವು = ವ್ಯ+ಸ್ವ(ದಿ)+ವ್ಯ+ಸ್ವ

ತೀತಿ = ವ್ಯ+ಸ್ವ(ದಿ)+ವ್ಯ+ಸ್ವ

ಬಾವು = ವ್ಯ+ಸ್ವ(ದಿ)+ವ್ಯ+ಸ್ವ

ಗೂಕು = ವ್ಯ+ಸ್ವ(ದಿ)+ವ್ಯ+ಸ್ವ

ಜೋಜೋ = ವ್ಯ+ಸ್ವ(ದಿ)+ವ್ಯ+ಸ್ವ(ದಿ)

ಕೂಸು = ವ್ಯ+ಸ್ವ(ದಿ)+ವ್ಯ+ಸ್ವ

ಬಾನಿ = ವ್ಯ+ಸ್ವ(ದಿ)+ವ್ಯ+ಸ್ವ

ಬಾಡ = ವ್ಯ+ಸ್ವ(ದಿ)+ವ್ಯ+ಸ್ವ

ಚಾಕಿ = ವ್ಯ+ಸ್ವ(ದಿ)+ವ್ಯ+ಸ್ವ

ಚಾಲಿ = ವ್ಯ+ಸ್ವ(ದಿ)+ವ್ಯ+ಸ್ವ

ಹಾಕ = ವ್ಯ+ಸ್ವ(ದಿ)+ವ್ಯ+ಸ್ವ

ಬೂತು = ವ್ಯ+ಸ್ವ(ದಿ)+ವ್ಯ+ಸ್ವ

ಸೂಮಾಡು = ವ್ಯ+ಸ್ವ(ದಿ)+ವ್ಯ+ಸ್ವ(ದಿ)+ವ್ಯ+ಸ್ವ

ಬೌ ಬೌ = ವ್ಯ+ಸ್ವ(ದಿ)+ವ್ಯ+ಸ್ವ(ದಿ)

ಕೌ ಕೌ = ವ್ಯ+ಸ್ವ(ದಿ)+ವ್ಯ+ಸ್ವ(ದಿ)

ಪಾಯಿಪಾಯಿ = ವ್ಯ+ಸ್ವ(ದಿ)+ವ್ಯ+ಸ್ವ+ವ್ಯ+ಸ್ವ(ದಿ)+ವ್ಯ+ಸ್ವ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಪದಾದಿಯ ವ್ಯಂಜನ ಹ್ರಸ್ವ, ದೀರ್ಘಸ್ವರಗಳಿಂದ ಪ್ರಾರಂಭವಾಗುವ ರೂಪಗಳು ಕಂಡುಬರುತ್ತವೆ. ಇಲ್ಲಿ ಒಂದಕ್ಷರ ರೂಪದಿಂದ ಹಿಡಿದು ನಾಲ್ಕಕ್ಷರ ರೂಪಗಳು ಕಂಡುಬರುತ್ತವೆ. ಈ ರೂಪಗಳು, ಪದಾದಿಯ ವ್ಯಂಜನಗಳಿಂದ ಮಾತ್ರ ಪ್ರಾರಂಭವಾಗುತ್ತವೆ ಎರಡು ಧ್ವನಿಮಾಗಳಿಂದ ಪ್ರಾರಂಭವಾಗಿ ಎಂಟು ಧ್ವನಿಮಾಗಳು ಈ ಭಾಷಾ ರೂಪಗಳಲ್ಲಿ ಕಾಣುತ್ತವೆ. ಇವು ಬರಹದ ಕನ್ನಡದಲ್ಲಿ ಇಂತಹ ರೂಪಗಳ ಬಳಕೆಯಾಗುವುದಿಲ್ಲ. ಇವು ವಿಶೇಷವಾಗಿ ಮಕ್ಕಳ ಭಾಷಾ ರೂಪಗಳಲ್ಲಿ ಮಾತ್ರ ಬಳಕೆಯಾಗುತ್ತವೆ. ಆದ್ದರಿಂದ ಸಾಮಾನ್ಯ ಭಾಷೆಗಿಂತ ಮಕ್ಕಳ ಭಾಷೆ ಭಿನ್ನವಾಗಿ ಕಂಡುಬರುತ್ತವೆ.

೩.೧೪. ಪದಾಂತ್ಯ ದೀರ್ಘಸ್ವರದಿಂದ ಕೊನೆಗೊಂಡ ರೂಪ

ಅಂಬಾ = ಸ್ವ+ವ್ಯ+ವ್ಯ+ಸ್ವ(ದಿ)

ಅಮ್ಮಾ = ಸ್ವ+ವ್ಯ+ವ್ಯ+ಸ್ವ(ದಿ)

ಉಮ್ಮಾ = ಸ್ವ+ವ್ಯ+ವ್ಯ+ಸ್ವ(ದಿ)

ಆಬೂ = ಸ್ವ(ದಿ)+ವ್ಯ+ಸ್ವ(ದಿ)

ಐನಾ	= ಸ್ವ(ದಿ)+ವ್ಯ+ಸ್ವ(ದಿ)
ಮಗ್ಗಾ	= ವ್ಯ+ಸ್ವ+ವ್ಯ+ವ್ಯ+ಸ್ವ(ದಿ)
ಚಿಯಾ	= ವ್ಯ+ಸ್ವ+ವ್ಯ+ಸ್ವ(ದಿ)
ಪಚಕೋ	= ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ(ದಿ)
ಬೂ	= ವ್ಯ+ಸ್ವ(ದಿ)
ಜೋಜೋ	= ವ್ಯ+ಸ್ವ(ದಿ)+ವ್ಯ+ಸ್ವ(ದಿ)
ಬೌಬೌ	= ವ್ಯ+ಸ್ವ(ದಿ)+ವ್ಯ+ಸ್ವ(ದಿ)
ಕೌ ಕೌ	= ವ್ಯ+ಸ್ವ(ದಿ)+ವ್ಯ+ಸ್ವ(ದಿ)

ಈ ಮೇಲಿನ ರಚನೆಯನ್ನು ಗಮನಿಸಿದಾಗ ವಯಸ್ಕರ ಭಾಷೆಗಿಂತ ಭಿನ್ನವಾಗಿ ಕಂಡು ಬರುತ್ತದೆ. ಇವುಗಳ ಪದಾಂತ್ಯ ದೀರ್ಘಸ್ವರದಿಂದ ಕೊನೆಗೊಳ್ಳುವ ರೂಪಗಳು ಮಕ್ಕಳ ಭಾಷೆ ಯಲ್ಲಿ ಅತೀ ಕಡಿಮೆ ಎನ್ನಬಹುದು.

ತಂದೆ ತಾಯಂದಿರು ಮಕ್ಕಳ ಜೊತೆ ಸಂವಹನ ಮಾಡುವಾಗ ಪದಾಂತ್ಯದಲ್ಲಿ ದೀರ್ಘಸ್ವರ ಗಳಿಂದ ಕೊನೆಗೊಳ್ಳುವ ರೂಪಗಳು ಕಂಡುಬರುತ್ತವೆ. ಇವು ಮಗುವಿಗೆ ಉಣಿಸುವಾಗ, ತಿನಿಸುವಾಗ, ಮಲಗಿಸುವಾಗ, ಹೆದರಿಸುವಾಗ ಇಂತಹ ರೂಪಗಳು ಬಳಸುವುದು.

೩.೧೫. ಸ್ವರಗಳ ಪಟ್ಟ ೧. ಪದಾದಿಯ ಸ್ವರ ಬದಲಾವಣೆ

ಎಲ್ಲಿ > ಅಲ್ಲಿ	ಎ > ಆ
ಎಮ್ಮಿ > ಅಮ್ಮಿ	ಎ > ಆ
ಎರಡು > ಅಡ್ಡು	ಎ > ಆ
ಏನು > ಓನು	ಏ > ಓ
ಏಟು > ಓಟು	ಏ > ಓ
ಒಂದು > ಅಂದು	ಒ > ಅ
ಊದು > ಊಪು	ಉ > ಊ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಬರಹದ ಭಾಷೆಗಿಂತ ವಿಶಿಷ್ಟವಾಗಿ ಕಂಡುಬರುತ್ತವೆ. ಮಕ್ಕಳ ಭಾಷೆಯಲ್ಲಿ ಸ್ವರ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಪದಾದಿಯು ಎ > ಅ, ಆ > ಅ, ಏ > ಓ, ಒ > ಅ, ಉ > ಊ ಕಾರ ಸ್ವರ

ಬದಲಾವಣೆಗಳ ಪ್ರಕ್ರಿಯೆ ನಡೆದಿದೆ. ಈ ಬದಲಾವಣೆಯನ್ನು ಬರಹ ಕನ್ನಡದೊಂದಿಗೆ ಮಕ್ಕಳ ಭಾಷಾ ರೂಪಗಳನ್ನು ಹೋಲಿಸಿ ನೋಡಿದಾಗ ಭಿನ್ನತೆ ಕಾಣುತ್ತದೆ. ಸಾಮಾನ್ಯ ಭಾಷೆಯಲ್ಲಿರುವ ಪದಾದಿಯ ಎ, ಏ, ಒ, ಆ, ಉ, ಕಾರವು ಶಿಶು ಭಾಷಾ ರೂಪಗಳಲ್ಲಿ ಅ, ಓ, ಆ, ಉ ಕಾರವಾಗಿ ಬಳಕೆಯಾಗುತ್ತಿವೆ. ಬರಹ ಕನ್ನಡದಲ್ಲಿ ಎಲ್ಲಿ ಎಮ್ಮಿ, ಎರಡು, ಏನು, ಏಟು, ಒಂದು, ಊದು, ಆಕಳು ಎಂಬ ನಾಮಪದಗಳು, ಮಕ್ಕಳ ಭಾಷಾ ರೂಪಗಳಲ್ಲಿ ಅಲ್ಲಿ, ಅಮ್ಮಿ, ಅಡ್ಡು, ಅಂದು ಓನು, ಓಟು, ಊಪು ಎಂದು ಕಂಡುಬರುತ್ತವೆ. ಸಾಮಾನ್ಯ ಭಾಷೆಯಲ್ಲಿ ಒಂದು ಸ್ವರದಿಂದ ಪ್ರಾರಂಭವಾದರೆ ಮಕ್ಕಳ ಭಾಷಾರೂಪಗಳಲ್ಲಿ ಆ ಸ್ವರದ ಬದಲು ಇನ್ನೊಂದು ಸ್ವರದಿಂದ ಪ್ರಾರಂಭವಾಗುವುದನ್ನು ಕಾಣುತ್ತೇವೆ.

೩.೧೬. ಪದಾದಿಯ ವ್ಯಂಜನ ಬದಲಾವಣೆ

ಸುಂಬಳ > ಚುಂಬಳ	ಸ > ಚ
ಸಾಕು > ಚಾಕು	ಸ > ಚ
ಸೋಪು > ಚೋಪು	ಸ > ಚ
ಸುಮನೆ > ಚುಪ್	ಸ > ಚ
ಸೂಜಿ > ಚೂಜಿ	ಸ > ಚ
ಶಾಲೆ > ಚಾಲಿ	ಶ > ಚ್
ಕಾಕ > ಹಾಕ	ಕ > ಹ್
ಹಾವು > ಬಾವು	ಹ್ > ಬ್

ಈ ಮೇಲಿನ ರಚನೆಗಳು ಶಿಶು ಭಾಷೆಯಲ್ಲಿ ಕಾಣುತ್ತೇವೆ. ಪದಾದಿಯ ವ್ಯಂಜನ ಬದಲಾವಣೆ ಯಾಗಿರುವುದನ್ನು ಶಿಶು ಭಾಷೆಯಲ್ಲಿ ನೋಡುತ್ತೇವೆ. ಬರಹದ ಭಾಷೆಯಲ್ಲಿ ಸ, ಶ, ಕ, ಹ ದಿಂದ ಪ್ರಾರಂಭವಾದರೆ ಮಕ್ಕಳ ಭಾಷೆಯಲ್ಲಿ ಚ್, ಶ, ಭ, ದಿಂದ ಪ್ರಾರಂಭವಾಗುವುದನ್ನು ಕಾಣುತ್ತೇವೆ. ಹೆಚ್ಚು ಶಿಶು ಭಾಷಾ ರೂಪಗಳಲ್ಲಿ 'ಸ'ಕಾರ 'ಚ'ಕಾರವಾಗಿ ಕಾಣಿಸಿಕೊಳ್ಳುತ್ತದೆ. ಮೂಲ ದ್ರಾವಿಡದಲ್ಲಿ ಇದು ಚಕಾರವೆ. ಆದರೆ ಕನ್ನಡದಲ್ಲಿ ಕಾಣಿಸುವ 'ಸ'ಕಾರ ಒಂದು ಬದಲಾವಣೆಯ ಪರಿಣಾಮವಾಗಿದೆ. ಶಿಶು ಭಾಷಾ ರೂಪಗಳಲ್ಲಿ ಕಾಣಿಸಿಕೊಳ್ಳುವ ಚ ಕಾರವು ಕನ್ನಡದ ಸಕಾರ ಪುನಃ ಚಕಾರವಾಗುವ ಇನ್ನೊಂದು ಬದಲಾವಣೆಯ ಪರಿಣಾಮವಿರಬಹುದು. ಮಕ್ಕಳ ಭಾಷೆ ಯಲ್ಲಿ ಸ ಕಾರದ ಬದಲು ಚಕಾರವೇ ಇದೆ. ಇದು ಪ್ರಾಚೀನ ಚಕಾರವನ್ನು ಹಾಗೆಯೇ ಉಳಿಸಿ ಕೊಂಡು ಬಂದದ್ದರ ಫಲವಾಗಿದೆ. ಉದಾಹರಣೆಗೆ ಸುಂಬಳ > ಚುಂಬಳ, ಸಾಕು > ಚಾಕು, ಸೈಕಲ್ > ಚೈಕಲ್, ಸೋಪು > ಚೋಪು ಇತ್ಯಾದಿ.

ಪಾವು > ಹಾವು > ಬಾವು ಈ ಉದಾಹರಣೆಯನ್ನು ನೋಡಿದಾಗ ಇಲ್ಲಿ ಹ > ಬ ಕಾರವಾಗಿ ಪರಿವರ್ತನೆ ಹೊಂದಿದೆ. ಕನ್ನಡದಲ್ಲಿ ಪ > ವ > ಬ ಕಾರವಾಗುವ ಪ್ರಕ್ರಿಯೇ ಆಗಿ ಹೋಗಿದೆ. 'ಪ'ಕಾರ 'ಹ'ಕಾರವಾಗುವ ಬದಲಾವಣೆಗೆ ಸುಮಾರು ೧೦ನೇ ಶತಮಾನದಲ್ಲಿ ಶುರುವಾಗಿತ್ತು ಎಂಬುದಾಗಿ ಕನ್ನಡ ಶಾಸನಗಳ ಅಧ್ಯಯನದಿಂದ ತಿಳಿಯತ್ತದೆ. ೯ನೆಯ ಶತಮಾನದ ಶಾಸನಗಳಲ್ಲಿ 'ಪ' ಕಾರ ಮಾತ್ರವೇ ಕಾಣಿಸುತ್ತವೆ. ಆದರೆ ೧೦ನೇ ಶತಮಾನದ ಶಾಸನಗಳಲ್ಲಿ 'ಪ' ಕಾರದ ಬದಲು 'ಹ'ಕಾರವನ್ನು ತೋರಿಸುವ ಕೆಲವು ಪದಗಳು ಕಾಣಸಿಗುತ್ತವೆ. ಅನಂತರ ಶಾಸನಗಳಲ್ಲಿ ಇಂತಹ ಪದಗಳ ಎಣಿಕೆ ಹೆಚ್ಚಾಗುತ್ತಾ ಹೋಗುತ್ತವೆ. ೧೪-೧೫ನೆಯ ಶತಮಾನಕ್ಕನುಗುಣವಾಗಿ ಮೊದಲಿಗೆ 'ಪ'ಕಾರ ಬಂದಿರುವ ಪದಗಳು ಕಡಿಮೆಯಾಗುತ್ತಾ ಹೋಗಿ ಅನಂತರ ಅವು ಪೂರ್ಣ ಇಲ್ಲವಾಗಿ ಬಿಡುತ್ತವೆ. ಮಕ್ಕಳ ಭಾಷೆಯಲ್ಲಿ ಕಾಣಿಸುವ 'ಹ' ಕಾರ 'ಬ' ಇದರ ಹಿನ್ನೆಲೆ ನೋಡಿದಾಗ ಹಳಗನ್ನಡ ಕಾಲಕ್ಕೆ ಪಾವು > ಹಾವು > ಬಾವು ಎನ್ನುವ ರೂಪ ನಿರ್ಮಾಣಗೊಂಡಿರುವ ಸಾಧ್ಯತೆಗಳು ಕನ್ನಡ ಭಾಷೆಯಲ್ಲಿವೆ. ಏಕೆಂದರೆ ಕನ್ನಡದಲ್ಲಿ 'ಹ' > 'ಬ' ಪ್ರಕ್ರಿಯೆ ಎಲ್ಲಿಯೂ ನಡೆದಿಲ್ಲ. ಇದು (ಪ>ಬ) ಹಳೆಗನ್ನಡ ಕಾಲಕ್ಕೆ ನಡೆದಿಲ್ಲ ಎನ್ನುವುದಾದರೆ ಶಿಶು ಭಾಷಾ ರೂಪದಲ್ಲಿ ಬದಲಾವಣೆ ನಡಿಯುವುದು ಕಷ್ಟಸಾಧ್ಯ.

ಕನ್ನಡದಲ್ಲಿ ಪ > ಹ ಬದಲಾವಣೆ ನಡೆದಿದೆ. ಇದು ಯಾದಗಿರಿ ಕನ್ನಡದಲ್ಲೂ ಆಗಿವೆ. ಒಂದು ವಿವರಣೆ ಪ್ರಕಾರ (ಕೋಡಗುಂಟಿ, ೨೦೧೧) ಉತ್ತರ ಕರ್ನಾಟಕದ ಕೆಲವು ಪುರಾತನ ಶಾಸನಗಳಲ್ಲಿ 'ಪ' ಕಾರ ಲೋಪ (ಪ > ø) ವಾಗಿರುವ ಬಗ್ಗೆ ವಿವರಿಸುತ್ತಾರೆ. ಒಂದು ವೇಳೆ ಅದು ನಿಜವಾಗಿದ್ದರೆ ಉತ್ತರ ಕರ್ನಾಟಕದಲ್ಲಿ ಪಕಾರ ಲೋಪ (ಪಾಲು > ಆಲು) ಪ > ø ಆಗುತ್ತದೆ. ಹ > ಬ (ಹಾವು > ಬಾವು) ಆಗುವ ಪ್ರಮೇಯವೇ ಬರುವುದಿಲ್ಲ. ಅದು ಪ > ವ > ಬ ಈ ಪರಿವರ್ತನೆಯೇ ಆಗಿರುತ್ತದೆ ಎಂದು ಸ್ಪಷ್ಟವಾಗಿ ಹೇಳಬಹುದು.

೩.೧೭. ಪದಾದಿಯ ವ್ಯಂಜನ ಲೋಪಗೊಂಡಿರುವ ರೂಪ

ಯಾಕು > ಆಕು

ರೊಕ್ಕ > ಒಕ್ಕ

ಯಾರು > ಆರು

ರೈಲು > ಐಲು

ಚುಪ್ > ಉಪ್

ಲತ್ತಿ > ಅತ್ತಿ

ರೂಪಾಯಿ > ಉಪಾಯಿ

ರಬ್ಬರ್ ಪಿಪಿ > ಅಬ್ಬಲ ಪೀಪಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ವ್ಯಂಜನಗಳು ವ್ಯತ್ಯಯಗೊಂಡಿರುವುದು ಶಿಶು ಭಾಷಾ ರೂಪಗಳಲ್ಲಿ ಕಾಣುತ್ತವೆ. ಇಲ್ಲಿ ಪದಾದಿಯ ವ್ಯಂಜನಗಳು ವ್ಯತ್ಯಯಗೊಂಡು ನಂತರ ಉಳಿಯುವ ಸ್ವರದಿಂದ ಪದ ಬಳಕೆಗೊಳ್ಳುವ ಪ್ರಕ್ರಿಯ ಶಿಶು ಭಾಷಾ ರೂಪಗಳಲ್ಲಿ ಕಂಡುಬರುತ್ತವೆ.

ಸಾಮಾನ್ಯವಾಗಿ ದಿನನಿತ್ಯ ಆಡುವ ಸಹಜ ಮಾತಿನಲ್ಲಿ ಪ್ರಕ್ರಿಯೆ ನಡೆಯುವುದು ಕಡಿಮೆಯೇ ಮಗು ಭಾಷಾ ಕಲಿಕೆ ಹಂತದಲ್ಲಿ ಇರುವುದರಿಂದ ಅದಕ್ಕೆ ಸುಲಭವಾಗಿ ಗ್ರಹಿಕೆಗೆ ಬರಲೆಂದು ಈ ತರಹ ಪದಾದಿಯ ವ್ಯಂಜನಾಕ್ಷರಗಳನ್ನು ವ್ಯತ್ಯಾಸಗೊಳಿಸಿ ಸ್ವರದಿಂದ ಪ್ರಾರಂಭಿಸುವ ಪ್ರಕ್ರಿಯೆ ನಡೆಯುತ್ತದೆ ಎನ್ನುವುದು ವಿದ್ವಾಂಸರ ಅಭಿಪ್ರಾಯ.

ಸಾಮಾನ್ಯವಾಗಿ ಧ್ವನಿ ವ್ಯತ್ಯಾಸಗಳು ಮಾನವನ ಸೌಲಭ್ಯಕಾಂಕ್ಷೆ ಅಥವಾ ಮಿತವ್ಯಯಸಕ್ತಿಯ ಪರವಾಗಿ ನಡೆಯುತ್ತದೆ. ಆದ್ದರಿಂದ ಅವು ಕಾಲಕಾಲಕ್ಕೆ ಬದಲಾವಣೆಗೊಳ್ಳುತ್ತಿರುತ್ತವೆ. ಶಿಶು ಭಾಷಾ ರೂಪಗಳಲ್ಲಿ ಯಾರು > ಆರು, ಯಾಕು > ಆಕು ಎಂದಾಗುತ್ತದೆ. ಈ ಪದಗಳಲ್ಲಿನ ಆದಿ ವ್ಯಂಜನಾಕ್ಷರಗಳಾದ ಯ್ ಕಾರ ಲೋಪವಾಗುತ್ತದೆ. ಅದರೊಳಗೆ ಇರುವ ಸ್ವರದಿಂದ ಈ ಭಾಷಾ ರೂಪಗಳ ಪ್ರಾರಂಭವಾಗುವ ಪ್ರಕ್ರಿಯೆ ನಡೆಯುತ್ತದೆ. ಅದೇ ರೀತಿ ರೈಲು > ಐಲು, ರೊಕ್ಕ > ಒಕ್ಕ, ಲತ್ತಿ > ಅತ್ತಿ, ರೂಪಾಯಿ > ಉಪಾಯಿ, ರಬ್ಬರ್ > ಅಬ್ಬಲ ಇಂತಹ ರೂಪಗಳು ಇವೆ. ಹೆಚ್ಚಾಗಿ ವ್ಯಂಜನ ಲೋಪಗೊಳ್ಳುವ ಪ್ರಕ್ರಿಯೆ ಕಾಣುತ್ತವೆ.

'ಯ' ಕಾರವು ಮೂಲದ್ರಾವಿಡ ಪದಗಳ ಆದಿಯಲ್ಲಿ 'ಆ'ಕಾರ ಪಕ್ಕದಲ್ಲಿದ್ದಾಗ ಬರುತ್ತದೆ. ಇದು ಕನ್ನಡದಲ್ಲಿ ಪದಾದಿಯಲ್ಲಿ ಲೋಪವಾಗುವುದು. ಯಾರು > ಆರು, ಯಾಕು > ಆಕು, ಪದಾದಿಯ 'ಯ'ಕಾರ ಲೋಪವಾಗಿ ಅದಕ್ಕೆ ಪೂರ್ವದ ಮತ್ತು ಪರದ ಸ್ವರಗಳೆರಡು ಒಂದಾಗಿ ದೀರ್ಘವಾಗಿ ಮಕ್ಕಳ ಭಾಷಾ ರೂಪಗಳಲ್ಲಿ ಬಳಕೆಯಾಗುತ್ತದೆ.

೩.೧೮. ಪದಾಂತ್ಯ ವ್ಯಂಜನಗಳ ಬದಲಾವಣೆ

ಬೂಟು > ಬೂತು

ಕೂಡು > ಕೂರ

ಮುಳ್ಳು > ಮುಲ್ಲು

ನಳಾ > ನಲಾ

ಈ ಮೇಲಿನ ಉದಾಹರಣೆಗಳನ್ನು ನೋಡಿದಾಗ ಪದಾಂತ್ಯದಲ್ಲಿರುವ ವ್ಯಂಜನಗಳ ಬದಲಾವಣೆಯಾಗಿರುವುದು ಶಿಶುಭಾಷೆಯಲ್ಲಿ ಕಾಣುತ್ತೇವೆ. ಬರಹ ಕನ್ನಡದಲ್ಲಿ ಪದಾಂತ್ಯ ಪರಿಸರದಲ್ಲಿ ಟ, ಡ, ಳ ಕೊನೆಯಾಗಿ ಬಂದಿದ್ದರೆ ಮಕ್ಕಳ ಭಾಷಾ ರೂಪಗಳಲ್ಲಿ ತ, ರ, ಲ

ಕಾರಗಳಿಂದ ಕೊನೆಗೊಳ್ಳುವುದನ್ನು ಕಾಣಿಸುತ್ತದೆ. ಉದಾಹರಣೆಗೆ ಬೂಟು > ಬೂತು, ಮುಳ್ಳು > ಮುಲ್ಲು, ಕೂಡು > ಕೂರ, ನಳಾ > ನಲಾ ಎಂಬ ರೂಪಗಳ ಪದಾಂತ್ಯದಲ್ಲಿ ಧ್ವನಿಗಳ ಬದಲಾವಣೆಯಾಗುವುದು ಕಾಣುತ್ತೇವೆ. ಇಲ್ಲಿ ವಯಸ್ಕರ ಭಾಷೆಗಿಂತ ಮಕ್ಕಳ ಭಾಷೆಯ ವಿಶಿಷ್ಟವಾಗಿ ಗುರುತಿಸಲಿಕ್ಕೆ ಸಾಧ್ಯವಾಗುತ್ತದೆ.

೩.೧೯. ಪದಾದಿಯ ದ್ವಿತ್ವ ಲೋಪಗೊಂಡಿರುವ ರೂಪಗಳು

ಪ್ಯಾಂಟು > ಪಾಂಟು   ಆ್ಯ > ಆ

ಬ್ಯಾನಿ > ಬಾನಿ   ಆ್ಯ > ಆ

ಬ್ಯಾಡ > ಬಾಡ   ಆ್ಯ > ಆ

ಈ ಮೇಲಿನ ರಚನೆಯನ್ನು ನೋಡಿದಾಗ ಪದಾದಿಯ ದ್ವಿತ್ವಾಕ್ಷರ ಲೋಪಗೊಂಡಿರುವುದು ಶಿಶು ಭಾಷಾ ರೂಪಗಳಲ್ಲಿ ಕಾಣುತ್ತವೆ. ಪದಾದಿಯ ದ್ವಿತ್ವ ಲೋಪಗೊಂಡು ನಂತರ ಉಳಿದ ವ್ಯಂಜನಾಕ್ಷರಗಳಿಂದ ಶಿಶು ಭಾಷಾರೂಪ ಆರಂಭವಾಗುವ ಪ್ರಕ್ರಿಯೇ ಕಂಡುಬರುತ್ತದೆ. ಉದಾಹರಣೆಗೆ ಪ್ಯಾಂಟು > ಪಾಂಟು, ಬ್ಯಾನಿ > ಬಾನಿ, ಬ್ಯಾಡ > ಬಾಡ ಎಂಬ ರೂಪಗಳು ಬಳಕೆಯಾಗುತ್ತದೆ. ಇವು ಸಾಮಾನ್ಯ ಭಾಷೆಯಲ್ಲಿ ಬಳಕೆಯಾಗುವುದಿಲ್ಲ. ಬರಹ ಕನ್ನಡದಲ್ಲಿ ದ್ವಿತ್ವದಿಂದ ಆರಂಭವಾದರೆ ಶಿಶು ಭಾಷಾರೂಪ ಉಳಿದ ವ್ಯಂಜನಗಳಿಂದ ಆರಂಭವಾಗುತ್ತದೆ. ಇಲ್ಲಿ ಧ್ವನಿಗಳ ವ್ಯತ್ಯಾಸವನ್ನು ಗುರುತಿಸಲಿಕ್ಕೆ ಸಾಧ್ಯವಾಗುತ್ತದೆ.

ಸಾಮಾನ್ಯವಾಗಿ ಧ್ವನಿ ವ್ಯಾತ್ಯಸಗಳು ಮಾನವನ ಸೌಲಭ್ಯಕಾಂಕ್ಷೆ ಅಥವಾ ಮಿತವ್ಯಯಸಕ್ತಿ ಫಲವಾಗಿ ನಡೆಯುತ್ತದೆ. ಪರಿವರ್ತನೆಗೊಳ್ಳುತ್ತದೆ. ಒಂದು ಪದದ ಆದಿಯಲ್ಲಿನ ಅಥವಾ ಪ್ರಾರಂಭದಲ್ಲಿ ಎರಡು ವ್ಯಂಜನಗಳಿದ್ದರೆ ಅಥವಾ ದ್ವಿತ್ವಗಳಿಂದ ಕೂಡಿದರೆ ಅವುಗಳಲ್ಲಿ ಒಂದು ದ್ವಿತ್ವ ಲೋಪಗೊಂಡು ಉಳಿದ ವ್ಯಂಜಗಳಿಂದ ಶಿಶುಭಾಷಾರೂಪಗಳು ಬಳಕೆಯಾಗುತ್ತವೆ. ಉದಾಹರಣೆಗೆ ಪ್ಯಾಂಟು > ಪಾಂಟು, ಬ್ಯಾನಿ > ಬಾನಿ, ಬ್ಯಾಡ > ಬಾಡ ಎಂದಾಗುತ್ತದೆ. ಈ ಪದಾದಿಯ ವ್ಯಂಜನಾಕ್ಷರಗಳಾದ ಪ್ ಮತ್ತು ಯ್ ಎಂಬೆರಡು ಅಕ್ಷರಗಳಲ್ಲು ಯ್ ವ್ಯಂಜನ ಲೋಪಗೊಳಿಸಿ ಉಳಿದ ವ್ಯಂಜನಾಕ್ಷರದಿಂದ ಶಿಶು ಭಾಷಾ ರೂಪಗಳು ಬಳಕೆಯಾಗುತ್ತವೆ. ಇದರಲ್ಲಿ ಯ್ ಎಂಬ ಆದಿ ವ್ಯಂಜನಾಕ್ಷರವು ಲೋಪವಾಗಿ ಪ್ಯಾಂಟು, ಬ್ಯಾನಿ ಎಂಬುದು ಪಾಂಟು, ಬಾಡ್ಯ, ಬಾನಿಯಯಾಯಿತು. ಇದರಲ್ಲಿ ಯ್ ವ್ಯಂಜನ ಲೋಪವಾಗಿ ಬಳಕೆಯಾಗುತ್ತವೆ.

೩.೨೦. ಪದಾಂತ್ಯ ದೀರ್ಘಸ್ವರಗೊಂಡಿರುವ ರೂಪಗಳು

ಮೌಂಸ > ಚಿಯಾ

ರೊಕ್ಕ > ಪೈಸಾ

ಮಲಗು > ಪಚಕೋ

ಬೇಕಾ > ಬೊಕಾ

ಆಕಳು > ಅಂಬಾ

ಊಟ > ಉಮ್ಮಾ

ರೊಕ್ಕ > ಒಕ್ಕ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಪದಾಂತ್ಯದಲ್ಲಿರುವ ಹ್ರಸ್ವಸ್ವರವು ದೀರ್ಘ ಸ್ವರಗಳಿಂದ ಕೊನೆಗೊಳ್ಳುವ ರೂಪಗಳು ಶಿಶುಭಾಷೆಯಲ್ಲಿ ಕಂಡುಬರುತ್ತವೆ. ಬರಹ ಕನ್ನಡ ಎರಡಕ್ಷರ ಪದಗಳಲ್ಲಿರುವ ಪದಾಂತ್ಯವು ಸ್ವರವು ಶಿಶುಭಾಷಾ ರೂಪಗಳಲ್ಲಿ ದೀರ್ಘಸ್ವರವಾಗಿ ಪರಿವರ್ತನೆಯಾಗುತ್ತದೆ. ಉದಾಹರಣೆಗೆ ಮೌಂಸ > ಚಿಯಾ, ರೊಕ್ಕ > ಪೈಸಾ, ಒಕ್ಕಾ, ಮಲಗು > ಪಚಕೋ, ಆಕಳು > ಅಂಬಾ, ಊಟ > ಉಮ್ಮಾ, ಇತ್ಯಾದಿ ರೂಪಗಳ ಪದಾಂತ್ಯದಲ್ಲಿ ಹ್ರಸ್ವ ಸ್ವರದಿಂದ ದೀರ್ಘಸ್ವರವಾಗುವ ಪ್ರಕ್ರಿಯೆ ಶಿಶುಭಾಷೆಯಲ್ಲಿ ಕಾಣುತ್ತವೆ.

ಅಧ್ಯಾಯ ನಾಲ್ಕು

ಶಿಶು ಭಾಷಾರೂಪಗಳ ಸಾಮಾಜಿಕ ವ್ಯತ್ಯಾಸ

ಶಿಶು ಭಾಷಾ ರೂಪಗಳ ಸಾಮಾಜಿಕ ವ್ಯತ್ಯಾಸಗಳ ಕುರಿತು ಹೇಳುವಾಗ ಹಲವು ಭಿನ್ನತೆಗಳು ಕಂಡುಬರುತ್ತವೆ. ಆದರೆ ಈ ಶ್ರೇಣಿಕೃತ ವ್ಯವಸ್ಥೆಯಲ್ಲಿ ಜಾತಿ ವ್ಯವಹಾರಿಕವಾಗಿ ಪದಗಳನ್ನು ಬಳಸುವುದಕ್ಕೆ ಮಾರ್ಗ ಹಾಕಿಕೊಟ್ಟಿದೆ. ಆ ಹಿನ್ನೆಲೆಯಲ್ಲಿ ಒಂದು ಪರಿಸರದ ಜನರಾಡುವ ಮಾತುಗಳಲ್ಲಿ ಶ್ರೇಷ್ಠ ಕನಿಷ್ಟ ಎಂಬ ವ್ಯತ್ಯಾಸವನ್ನು ಗುರುತಿಸಬಹುದು. ಯಾದಗಿರಿ ಪರಿಸರದಲ್ಲಿ ಪ್ರಮುಖವಾಗಿ ಲಿಂಗಾಯಿತ, ಕುರುಬ, ನಾಯಕ, ದಲಿತ, ಬ್ರಾಹ್ಮಣ ಸಮುದಾಯಗಳಿವೆ. ವ್ಯಕ್ತಿಗಳ ಮತ್ತು ಮಕ್ಕಳ ನಡುವೆ ನಡೆಯುವ ಸಂವಹನದಲ್ಲಿ ·ಭಾಷೆಯ ಭಿನ್ನತೆಯನ್ನು ಕಾಣುತ್ತವೆ. ಗಂಡು ಹೆಣ್ಣುಗಳು ಬಳಸುವ ಭಾಷೆಯಲ್ಲಿ ಅನೇಕ ವೈರುಧ್ಯವಿದೆ. ಮೇಲು ವರ್ಗದವರು ಕೆಳವರ್ಗದ ಜನರನ್ನು, ಕೆಳವರ್ಗದವರು, ಮೇಲುವರ್ಗದವರನ್ನು ಸಂಭೋದಿಸುವ ರೀತಿಯಲ್ಲಿ ಅನೇಕ ಭಾಷಿಕ ಅಂಶಗಳು ಕಾಣಬಹುದಾಗಿದೆ. ಎಲ್ಲ ಸಮುದಾಯದ ಜನರು ಆಡುವ ಭಾಷೆ ಒಂದೇ ಆದರೂ ಅವರಾಡುವ ಭಾಷೆಯಲ್ಲಿ ಭಿನ್ನತೆ ಕಾಣುತ್ತದೆ. ಜಾತಿ, ವರ್ಗ, ಲಿಂಗಗಳ ಸಂಬೋಧನೆಯಲ್ಲಿ ಭಾಷಿಕ ಭಿನ್ನತೆ, ಸಾಮಾಜಿಕ ವ್ಯತ್ಯಾಸ ಗತಿಸದಿರುವ ಸಂವಹನದ ಪ್ರಕ್ರಿಯೆ ಸಹಜವಾಗಿ ನಡೆದಿರುತ್ತದೆ.

ಸಮಾಜದಲ್ಲಿ ಪ್ರಭಾವಶಾಲಿ ವರ್ಗಗಳಿಂದ ಭಾಷಾ ರೂಪಗಳ ವ್ಯತ್ಯಾಸವಾಗುತ್ತವೆ ಎಂಬುವುದನ್ನು ಜೇಮ್ಸ್‌ಡ್ಯಾಲಿ (ಉದ್ಧೃತ: ಎಲ್.ಎಸ್. ಕಾಡದೇವರ ಮಠ, ೧೯೯೬) ಎಂಬುವರು ನಡೆಸಿದ ಪ್ರಯೋಗವೊಂದು ಹೇಳುತ್ತಾನೆ. ಇಲ್ಲಿ ನೆನಪಿಡಬೇಕಾದ ಅಂಶವೆಂದರೆ ಭಾಷೆಯಲ್ಲಿ ನಡೆಯುವ ಯಾವುದೇ ವ್ಯತ್ಯಾಸವು ಸಾಮಾನ್ಯವಾಗಿ ಮೊದಲು ಒಬ್ಬ ವ್ಯಕ್ತಿಯಿಂದ ಆರಂಭ ವಾಗುತ್ತದೆ. ಆ ವ್ಯತ್ಯಾಸವು ಸಾರ್ವತ್ರಿಕವಾಗಿ ಆರಂಭವಾಗುವುದಿಲ್ಲ. ಮೊದಲು ಒಬ್ಬ ವ್ಯಕ್ತಿಯಿಂದ ಆರಂಭವಾಗಿ ನಂತರ ಸಾರ್ವತ್ರಿಕ ಸ್ವರೂಪವನ್ನು ಪಡೆಯುತ್ತದೆ. ಸಾಮಾಜಿಕ ಭಾಷಾಧ್ಯಯನದ ಒಳವಿಭಾಗದಲ್ಲಿ ಜಾತಿಯ ಉಪಭಾಷೆ ಎಂಬುವುದು ಒಂದು ಮುಖ್ಯ ಶಾಖೆಯೆನಿಸಿದೆ.

ಜಾತಿಯ ಅಂತರವನ್ನು ಸೂಚಿಸಲು ಹುಟ್ಟಿದ ಜಾತಿ, ಭಾಷಾ ವ್ಯತ್ಯಾಸವನ್ನು ಪ್ರಭಾವಿಸುವ ಏಕೈಕ ಸಾಮಾಜಿಕ ವ್ಯತ್ಯಾಸವಾಗಿದೆ. ಆಯಾಯ ಜಾತಿಗಳಲ್ಲಿ ತಮ್ಮದೇ ಆದ ಪದ ಪ್ರಯೋಗಗಳಿಂದ ಹಿಡಿದು ಉಚ್ಚಾರದಲ್ಲಿಯೂ ಕೆಲವು ನಿಟ್ಟಿನಲ್ಲಿ ಬದಲಾವಣೆಗಳಿವೆ. ಮಕ್ಕಳ ಭಾಷೆಯಲ್ಲಿಯೂ ಬಳಸುವಾಗ ಅಂತಹ ವ್ಯತ್ಯಾಸಗಳು ಕಂಡುಬರುತ್ತದೆ. ಬ್ರಾಹ್ಮಣ, ಲಿಂಗಾಯಿತ, ದಲಿತ ಭಾಷೆಯಲ್ಲಿ ಬಳಕೆ ಗೊಳ್ಳುತ್ತಿರುವ ಶಿಶು ಭಾಷಾರೂಪಗಳ ಸಾಮಾಜಿಕ ವ್ಯತ್ಯಾಸಗಳನ್ನು ಪಟ್ಟಿ ಮಾಡಲಾಗಿದೆ.

ಬ್ರಾಹ್ಮಣ	ಲಿಂಗಾಯಿತ	ದಲಿತ	ಸಾಮಾನ್ಯ
ಓಂಮಾಡು	ಜೇಜಿಮಾಡು	ಜೇಜಿಮಾಡು	ನಮಸ್ಕಾರ ಮಾಡು
ಇಸ್ಸಿ	ಇಸ್ಸಿ	ಅಸ್ಸಿ	ಹೊಲಸು
ಸೂಮಾಡು	ಸೂಮಾಡು	ಉಸಮಾಡು	ಏಕಿಮಾಡು, ಉಚ್ಚಿಒಯಿ,
ಪಪ್ಪಿಕೊಡು	ಬಲ್ಲಕೊಡು	ಮುದ್ದುಕೊಡು	ಮುತ್ತುಕೊಡು, ಕಿಸ್‌ಕೊಡು
ಮುಸ್ಸಿ	ಮ್ಯಾಂವು	ಮ್ಯಾಂವು	ಬೆಕ್ಕು
ಬ್ಹೂ	ಬಿಯಿ	ಡಿರ್	ಊರಿಗೆ ಹೊತ್ತಿನಿ
ಪಾಪು	ಪುಟ್ಟಾ	ಕೂಸ	ಮಗು
ಪುಗ್ಗಾ	ಪುಗ್ಗಾ	ಅಬ್ಬಲ್‌ಪೀಪಿ	ರಬಲ್ ಪಿಪಿ, ಬಲೂನ್
ಇಮಾನ	ಅಂತರಾಗಾಡಿ	ಆಕಾಶಗಾಡಿ	ವಿಮಾನ
ಬಕರಿ	ಉಮ್ಮಾ	ಉಮ್ಮಾ	ಊಟ
ಆಬೂ	ಆ ಆಗ್ವಾದ	ಆ ಆಗ್ವಾದ	ಗಾಯ ನೋವು
ಬುಜ್ಜಿ	ಪಾಮು	ಪಾಪ	ಮಗು
ಪಚಕೋ	ಮಕ್ಕ	ಮಕ್ಕಾ	ಮಲಗು

ಮೇಲಿನ ಉದಾಹರಣೆಗಳಲ್ಲಿ ಭಾಷಾ ರೂಪಗಳ ಸಾಮಾಜಿಕ ವ್ಯತ್ಯಾಸಗಳನ್ನು ಗುರುತಿಸಬಹುದು. ಆಧುನಿಕ ಜಗತ್ತಿನಲ್ಲಿ ಊರಿಗೊಂದು ಭಾಷೆ, ಜಾತಿಗೊಂದು ಭಾಷೆ ಎಂದು ಭಾಷಾ ಪ್ರಭೇದಗಳನ್ನು ಸೂಚಿಸುವ ಮಾತುಗಳು ಕೇಳಿಬರುತ್ತವೆ. ನಮಗೆ ಗಮನ ಸೆಳೆಯುವ ಎರಡು ಬಗೆಯ ಕನ್ನಡವೆಂದರೆ ಒಂದು ಆಧುನಿಕ ಗದ್ಯ ಅಥವಾ ಬರವಣಿಗೆಯ ಕನ್ನಡ, ಇನ್ನೊಂದು ದೈನಂದಿನ ಭಾಷಾ ವ್ಯವಾಹಾರದಲ್ಲಿ ಬಳಸಲಾಗುವ ಆಡುನುಡಿ ಈ ಭೇದವನ್ನು ಪಾಶ್ಚಾತ್ಯ ವಿದ್ವಾಂಸರಾದ ಎಸ್. ಝುಗ್ಗರ್ ಮತ್ತು ಎಫ್ ಕಿಟಲ್ (ಉದ್ಧೃತ: ಬಿ. ರಾಮಚಂದ್ರರಾವ್, ೧೯೯೮) ಅವರು ಗಮನಿಸಿದ್ದಾರೆ.

ಓಂಮಾಡು > ಜೇಜಿಮಾಡು ಎನ್ನುವ ರೂಪಗಳು ಬಳಕೆಯಲ್ಲಿವೆ. ಓಂಮಾಡು ಎಂಬುವುದು ಮಗುವಿನ ಸಹಜ ರೂಪ. ಇದರ ರಚನೆಯನ್ನು ಗಮನಿಸಿದಾಗ ಬರಹದ ಭಾಷೆಗಿಂತ ಭಿನ್ನವಾಗಿ ಕಾಣುತ್ತದೆ. ಇದು ಬ್ರಾಹ್ಮಣರು ತಮ್ಮ ಮಕ್ಕಳಿಗೆ ಬಳಸುವಂತಹ ರೂಪ. ಆದ್ದರಿಂದ ಓಂಮಾಡು ಎಂದರೆ ದೇವರಿಗೆ ನಮಸ್ಕಾರ ಮಾಡು, ಶರಣಾಗು, ಗೌರವಿಸು, ತಲೆಬಾಗು ಎಂಬ ಅರ್ಥಗಳಿವೆ. ಇಂತಹ ರೂಪಗಳು ತಂದೆ ತಾಯಿ ಮತ್ತು ಮಕ್ಕಳ ನಡುವೆ ನಡೆಯುವ ಬಳಕೆ ಮಾತ್ರ, ಆದರೆ ಹಿಂದುಳಿದ ವರ್ಗಗಳಲ್ಲಿ ದಲಿತ, ನಾಯಕ ಸಮುದಾಯಗಳಲ್ಲಿ ಓಂಮಾಡು ಎಂಬ ರೂಪ ಬಳಕೆಯಲ್ಲಿಲ್ಲ. ಇದರ ಬದಲಾಗಿ ಜೇಜಿಮಾಡು ಎಂಬ ರೂಪ ಬಳಸುವುದು ನೋಡುತ್ತೇವೆ. ಇಲ್ಲಿ ಧ್ವನಿಗಳ ವ್ಯತ್ಯಾಸಗಳು ಕಂಡುಬರುತ್ತವೆ. ಬರಹದ ಭಾಷೆಗೂ ಮತ್ತು ಮಕ್ಕಳ ಭಾಷೆಗೂ ಇರುವ ವ್ಯತ್ಯಾಸವನ್ನು ಗುರುತಿಸಬಹುದು. ಓಂಮಾಡು, ಜೇಜಿ ಮಾಡು ಎನ್ನುವ ರೂಪಗಳು ಕೇಳುವುದಕ್ಕೆ, ಹೇಳುವುದಕ್ಕೆ ವಿಶಿಷ್ಟವಾಗಿ ಕಾಣುತ್ತವೆ. ಪ್ರಾದೇಶಿಕವಾಗಿ ನೋಡಿದಾಗ ಪರ್ಯಾಯ ರೂಪಗಳು ಕಾಣುತ್ತವೆ. ಜೋತಮಾಡು ಎನ್ನುವ ರೂಪ ದಕ್ಷಿಣ ಕರ್ನಾಟಕದಲ್ಲಿ ಮಕ್ಕಳಿಗೆ ವಿಶೇಷವಾಗಿ ಬಳಸುತ್ತಾರೆ.

ಇಸ್ಸಿ > ಆಸ್ಸಿ ಎನ್ನುವ ರೂಪಗಳು ಶಿಶುಭಾಷೆಯಲ್ಲಿ ಕಾಣುತ್ತವೆ. ತಂದೆ ತಾಯಿಯಂದಿರು ಹಾಗೂ ಸಂಬಂಧಿಕರು ಶಿಶು ಜೊತೆಗಿನ ಸಂವಹನಕ್ಕಾಗಿ ಬಳಸುವ ರೂಪಗಳಾಗಿವೆ. ಇಸ್ಸಿ ಎಂದರೆ ಸಾಮಾನ್ಯ ಭಾಷೆಯಲ್ಲಿ ಹೊಲಸು ಎಂಬ ಅರ್ಥವಿದೆ. ಆದರೆ ಬರಹದ ಭಾಷೆಯಲ್ಲಿ ಇಸ್ಸಿ ಆಸ್ಸಿ ಎನ್ನುವ ರೂಪಗಳು ಬಳಕೆಯಲ್ಲಿಲ್ಲ. ಈ ರೂಪಗಳಲ್ಲಿ ಧ್ವನಿ ವ್ಯತ್ಯಾಸವನ್ನು ಗುರುತಿಸಬಹುದು. ಇಸ್ಸಿ ಎಂಬ ರೂಪ ಕೇವಲ ಮೇಲುವರ್ಗ ಮತ್ತು ಅಕ್ಷರಸ್ಥ ಜನರ ಮಾತಿನಲ್ಲಿ ಹೆಚ್ಚು ಬಳಕೆಯಾಗುತ್ತಿದೆ. ಕೆಳಸಮುದಾಯದ ಜನರು ಮಕ್ಕಳಿಗೆ ಬಳಸುವಾಗ 'ಅಸ್ಸಿ' ಎಂಬ ರೂಪ ಬಳಸುವುದೇ ಹೆಚ್ಚು ಆದ್ದರಿಂದ ಸಾಮಾಜಿಕ ವ್ಯತ್ಯಾಸ ಗುರುತಿಸಬಹುದು.

ಸೂಮಾಡು > ಸಿಮಾಡು ಎಂಬ ರೂಪಗಳು ಸ್ಪಷ್ಟವಾಗಿ ಭಿನ್ನತೆಯನ್ನು ತೋರಿಸಿ ಕೊಡುತ್ತವೆ. ಇವು ಮಗುವಿನ ಸಹಜ ಭಾಷೆಯಲ್ಲಿವೆ. ಸೂಮಾಡು ಎಂಬ ರೂಪ ಕೇವಲ ಬ್ರಾಹ್ಮಣರು ತಮ್ಮ ಮಕ್ಕಳಿಗೆ ಬಳಸುವಂತಹ ರೂಪವಾಗಿದೆ. ಸೂಮಾಡು ಎಂದರೆ ಸಾಮಾನ್ಯ ಭಾಷೆಯಲ್ಲಿ ಒಂದಮಾಡು, ಉಚ್ಚೆಹೊಯ್ಯು ಎಂಬ ಅರ್ಥ. ಸಿಮಾಡು, ಉಸಮಾಡು ಎಂಬ ರೂಪಗಳು ಕೆಳವರ್ಗದ ಸಮುದಾಯಗಲ್ಲಿ ಮಕ್ಕಳಿಗೆ ಬಳಸುವಂತ ರೂಪಗಳು. ಈ ರೂಪಗಳ ಅರ್ಥ ಒಂದೇ ಆದರೂ ಧ್ವನಿಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಮೇಲುವರ್ಗದವರು ಮಕ್ಕಳಿಗೆ ಭಾಷಾ ರೂಪಗಳನ್ನು ಬಳಸುವಾಗ ವ್ಯಂಜನ ದೀರ್ಘಸ್ವರದಿಂದ ಪ್ರಾರಂಭವಾದರೆ ಕೆಳವರ್ಗದ ವ್ಯಕ್ತಿಗಳಲ್ಲಿ ವ್ಯಂಜನ ಹ್ರಸ್ವದಿಂದ ಪ್ರಾರಂಭವಾಗುತ್ತದೆ. ಉದಾಹರಣೆಗೆ ಸೂಮಾಡು > ಸಿಮಾಡು > ಉಸಮಾಡು ಇವುಗಳಲ್ಲಿ ಸಾಮಾಜಿಕ ಭಿನ್ನತೆಯನ್ನು ಗುರುತಿಸಬಹುದು. ಇವುಗಳಲ್ಲಿ ಪದಾದಿಯ ಸ್ವರ ಬದಲಾವಣೆಯಾಗಿರುವುದು ಕಾಣುತ್ತವೆ.

ಉದಾಹರಣೆಗೆ ಸೂ ಮಾಡು ಪುಟ್ಟಾ

ಉಸ್‌ಮಾಡು ಪುಟ್ಟಾ

ಪಪ್ಪಿಕೊಡು, ಬಲ್ಲಕೊಡು, ಮುದ್ದುಕೊಡು ಎಂಬ ರೂಪಗಳು ಮಗುವಿನ ಸಹಜ ಭಾಷೆಯಲ್ಲಿ ಕಾಣುತ್ತವೆ. ಪಪ್ಪಿಕೊಡು ಎಂದರೆ ಮುತ್ತುಕೊಡು, ಕಿಸ್‌ಕೊಡು ಎಂದರ್ಥ. ಬೇರೆ ಬೇರೆ ವರ್ಗ ಗಳಲ್ಲಿ ಚುಮ್ಮಕೊಡು, ಉಪ್ಪಕೊಡು ಎಂಬ ಅರ್ಥಗಳು ಕಾಣುತ್ತವೆ. ಇಲ್ಲಿ ಪಪ್ಪಿಕೊಡು ಎನ್ನುವ ರೂಪ ಮೇಲುವರ್ಗದವರ ಮನೆಯಲ್ಲಿ ಹೆಚ್ಚು ಬಳಕೆಯಲ್ಲಿದೆ. ಈ ರೂಪ ಆಧುನಿಕ ಶಿಕ್ಷಣ ಪ್ರಭಾವದಿಂದ ಮಕ್ಕಳ ಭಾಷೆಯಲ್ಲಿ ಬಳಸುತ್ತಾರೆ. ಬಲ್ಲಕೊಡು, ಮುದ್ದುಕೊಡು ಎನ್ನುವ ರೂಪಗಳು ಕೆಳವರ್ಗದ ಸಮುದಾಯಗಳಲ್ಲಿ ಮುದ್ದು, ಬಲ್ಲ ಎಂಬ ರೂಪ ಹೆಚ್ಚು ಬಳಕೆಯಲ್ಲಿ ಕಾಣುತ್ತವೆ. ಇಂತಹ ರೂಪಗಳು ತಂದೆ ತಾಯಿಂದಿರು ಮಕ್ಕಳಿಗೆ ಬಳಸುವ ಸಹಜ ರೂಪಗಳಾಗಿವೆ.

ಉದಾಹರಣೆಗೆ ಪುಟ್ಟಾ ಪಪ್ಪಿಕೊಡು

ಮುದ್ದುಕೊಡು ಪುಟ್ಟಾ

ಈ ಮೇಲಿನ ಉದಾಹರಣೆಗಳು ಬರಹದ ಭಾಷೆಯಲ್ಲಿ ಬಳಕೆಯಲ್ಲಿಲ್ಲ. ಇವು ಕೇವಲ ಮಕ್ಕಳಿಗಾಗಿ ಬಳಸುವ ರೂಪಗಳಾಗಿವೆ. ಇವು ಅರ್ಥಗಳಲ್ಲಿ ಒಂದೇಯಾದರೂ ಧ್ವನಿಗಳಲ್ಲಿ ಭಿನ್ನತೆ ಕಾಣುತ್ತವೆ.

'ಪುಸ್ಸಿ ಬಂತು ಪುಟ್ಟಾ'

'ಹೇ ಪುಟ್ಟಾ ಮ್ಯಾವು ಬಂತು'

ಈ ಮೇಲಿನ ಉದಾಹರಣೆಗಳ ಗಮನಿಸಿದಾಗ ಭಾಷಿಕ ವ್ಯತ್ಯಾಸಗಳು ಗುರುತಿಸಬಹುದು. ಪುಸ್ಸಿ, ಮ್ಯಾಂವು ಎಂಬ ರೂಪಗಳು ಶಿಶುಭಾಷಾ ಮೂಲ ರೂಪಗಳಲ್ಲಿ ಬಳಕೆಯಲ್ಲಿವೆ. ಪುಸ್ಸಿ ಎಂದರೆ ಸಾಮಾನ್ಯ ಭಾಷೆಯಲ್ಲಿ ಬೆಕ್ಕು ಎಂದರ್ಥ. ಇದು ಕೇವಲ ಬ್ರಾಹ್ಮಣರು ತಮ್ಮ ಮಕ್ಕಳಿಗೆ ಬಳಸುವಂತಹ ರೂಪವಾಗಿದೆ. ತಾಯಿ ತಂದೆ ತಮ್ಮ ಮಕ್ಕಳಿಗೆ ಹೆದರಿಸುವಾಗ, ಆಡಿಸುವಾಗ ಸಹಜವಾಗಿ ಬಳಸುವಂತ ರೂಪ ಇದಾಗಿದೆ.

ಪುಸ್ಸಿ ಎಂಬ ರೂಪ ಹಿಂದುಳಿದ ವರ್ಗ, ದಲಿತ, ನಾಯಕ ಸಮುದಾಯದ ಜನರ ಮಾತಿನಲ್ಲಿ ಈ ರೂಪ ಬಳಕೆಯಲಿಲ್ಲ. ಆದ್ದರಿಂದ ಸಾಮಾಜಿಕ ಭಿನ್ನತೆಯನ್ನು ತೋರಿಸಬಹುದು. ಮ್ಯಾಂವು ಎಂಬ ರೂಪ. ಕೆಳವರ್ಗದ ಸಮುದಾಯಗಳಲ್ಲಿ ಹೆಚ್ಚು ಬಳಕೆಯಲ್ಲಿರುವ ರೂಪವಾಗಿದೆ. ಇದು ಅನುಕರಣವಾಚಿ ರೂಪವೆಂದು ಕರೆಯಬಹುದು.

ಬ್ಬೂ ಹೊತಿನಿ > ಡಿರ್ ಹೊತಿನಿ ಎನ್ನುವ ರೂಪಗಳು ಶಿಶು ಭಾಷೆಯ ಮೂಲ ರೂಪಗಳು. ಇವು ಶಬ್ದಾನುಕರಣ ರೂಪಗಳೆನ್ನಬಹುದು. ಯಾವುದೇ ವಾಹನಗಳಿಂದ ಹೊರಡಿರುವ

ಶಬ್ದಗಳನ್ನು ಅನುಕರಿಸಿ ಬಳಸುವುದಕ್ಕೆ ನಾವು ಶಬ್ದಾನುಕರಣ ರೂಪಗಳೆಂದು ಕರೆಯುತ್ತೇವೆ. ಬ್ಬೂ ಹೊತಿನಿ ಎಂದರೆ ಊರಿಗೆ ಹೋಗುತ್ತೇನೆ ಎಂದರ್ಥ. ಇದು ಬ್ರಾಹ್ಮಣ, ಲಿಂಗಾಯಿತ ಸಮುದಾಯದಲ್ಲಿ ಮಕ್ಕಳಿಗೆ ಬಳಸುವಂತ ರೂಪವಿದು. ಡೀರ್ ಎಂಬ ರೂಪ ಕೆಳವರ್ಗದ ಸಮುದಾಯದಲ್ಲಿ ಹೆಚ್ಚು ಬಳಕೆಯಲ್ಲಿದೆ. ಇವು ಬರಹ ಭಾಷೆಯಲ್ಲಿ ಈ ರೂಪಗಳ ಬಳಕೆಯಲ್ಲಿಲ್ಲ. ಆದ್ದರಿಂದ ಮಕ್ಕಳ ಭಾಷೆಯಲ್ಲಿ ವಿಶೇಷವಾಗಿ ಕಾಣುತ್ತವೆ. ಇದರಲ್ಲಿ ಧ್ವನಿಗಳ ವ್ಯತ್ಯಾಸವನ್ನು ಗುರುತಿಸಬಹುದು. ಉದಾಹರಣೆಗೆ ಬ್ಬೂ ಹೋಗಾಮಿ ಪುಟ್ಟಾ, ಡಿರ್ ಬಂತ್ತು ಪುಟ್ಟಾ,

ಬಕರಿ > ಉಮ್ಮಾ ಎನ್ನುವ ರೂಪ ಶಿಶು ಭಾಷಾ ಬಳಕೆಯಲ್ಲಿವೆ. ಇವು ಬರಹದ ಭಾಷೆಯಲ್ಲಿ ಬಳಕೆಯಿಲ್ಲ. ಬಕರಿ ಎಂದರೆ 'ರೊಟ್ಟಿ' ಎಂದರ್ಥ. ಬಕರಿ ಊಟ ಮಾಡು ಎಂದರೆ ರೊಟ್ಟಿ ಊಟ ಮಾಡು ಎಂದರ್ಥವಾಗುತ್ತದೆ. ಇದು ಬ್ರಾಹ್ಮರು ತಮ್ಮ ಮಕ್ಕಳಿಗೆ ಬಳಸುವ ರೂಪವಿದು. 'ಬಕರಿ' ಎಂಬುದು ಮೂಲ ಮರಾಠಿ ಶಬ್ದ. ಬಾಕರಿಯಿಂದ ಬಂದಿದ್ದು ಬ್ರಾಹ್ಮಣರು ಬಾಕರಿ ಎಂದು ಬಳಸುತ್ತಿದ್ದರು. ಅದು ಮುಂದೆ ಆಡುನುಡಿಯಲ್ಲಿ ಬಕರಿ ಎಂದಾಯಿತು.

ಬಕರಿ ಎನ್ನುವ ರೂಪ ಲಿಂಗಾಯಿತ, ದಲಿತ, ನಾಯಕ ಜನಾಂಗದವರ ಮಾತಿನಲ್ಲಿ ಬಳಕೆಯಲ್ಲಿಲ್ಲ. ಆದರೆ ಉಮ್ಮಾ ಎನ್ನುವ ರೂಪ ಮಕ್ಕಳಿಗೆ ತಂದೆ ತಾಯಿಯಂದಿರು ಅದಕ್ಕೆ ಊಟ ಮಾಡಿಸುವಾಗ ಉಮ್ಮಾ ಉಣ್ಣು ಪುಟ್ಟಾ ಎಂದು ತಾಯಿ ಮಗುವಿಗೆ ಹೇಳುವ ರೂಪವಿದ್ದು, ಇವುಗಳಲ್ಲಿ ಭಾಷಿಕ ವ್ಯತ್ಯಾಸವನ್ನು ಗುರುತಿಸಬಹುದು.

ಇಮಾನ > ಅಂತರಗಾಡಿ > ಆಕಾಶಗಾಡಿ ಎಂಬ ರೂಪಗಳು ಮಗುವಿನ ಸಹಜ ರೂಪ ಗಳಲ್ಲಿ ಕಾಣುತ್ತವೆ. ಇಮಾನ ಎನ್ನುವ ರೂಪ ಸಾಮಾನ್ಯವಾಗಿ ಎಲ್ಲಾ ಜಾತಿ ಜನರು ಮಕ್ಕಳಿಗೆ ಬಳಸುತ್ತಾರೆ. ಆದರೆ ಅಂತರ ಗಾಡಿ >ಆಕಾಶಗಾಡಿ ಎಂಬ ರೂಪಗಳು ಬಳಸುವಾಗ ಸಾಮಾಜಿಕ ವ್ಯತ್ಯಾಸವನ್ನು ಗುರುತಿಸಬಹುದು. ಅಂತರಗಾಡಿ ಎನ್ನುವ ರೂಪ ಮೇಲ್ವರ್ಗ ಬಳಸುವಂತ ರೂಪ. ಅಂತರಗಾಡಿ ಎಂದರೆ ಸಾಮಾನ್ಯ ಭಾಷೆಯಲ್ಲಿ ವಿಮಾನ ಎಂದರ್ಥ. ಆಕಾಶಗಾಡಿ ಎಂಬ ರೂಪ ದಲಿತ ಸಮುದಾಯದಲ್ಲಿ ಹೆಚ್ಚು ಬಳಕೆಯಲ್ಲಿದೆ. ಆಕಾಶಗಾಡಿ ಎಂದರೆ ಆಕಾಶದಲ್ಲಿ ತಿರುಗಾಡುವ ವಾಹನ ಎಂದರ್ಥ. ಇದು ತಂದೆ ತಾಯಂದಿರು ಮಕ್ಕಳಿಗೆ ಬಳಸುವಂತ ರೂಪವಾಗಿದೆ. ಉದಾಹರಣೆಗೆ 'ಅಂತರಗಾಡಿ ಬಂತು ಪುಟ್ಟ', 'ಪುಟ್ಟಾ ಆಕಾಶ ಗಾಡಿ ಬಂತು ನೋಡು' ಎಂದು ಮಕ್ಕಳಿಗೆ ತಾಯಂದಿರು ವಿಶೇಷವಾಗಿ ಬಳಸುತ್ತಾರೆ. ಇಲ್ಲಿ ಸಾಮಾಜಿಕ ಭಿನ್ನತೆಯನ್ನು ಗುರುತಿಸಬಹುದು.

ಪುಗ್ಗಾ > ಅಬ್ಬಲ್‌ಪೀಪಿ ಎನ್ನುವ ರೂಪಗಳು ಶಿಶುಭಾಷೆಯಲ್ಲಿ ಬಳಕೆಯಲ್ಲಿವೆ. ಇಂತಹ ರೂಪಗಳು ಸಾಮಾನ್ಯ ಭಾಷೆಯಲ್ಲಿ ಬಳಕೆಯಲ್ಲಿಲ್ಲ. ಇವು ಕೇವಲ ಮಕ್ಕಳಿಗಾಗಿ ಬಳಕೆಯಾಗುವ

ವಿಶೇಷ ರೂಪಗಳಿವು. ಪುಗ್ಗಾ ಎಂದರೆ ಸಾಮಾನ್ಯ ಭಾಷೆಯಲ್ಲಿ ರಬ್ಬಲ್ ಪೀಪಿ ಬಲೂನು ಎಂದರ್ಥ. ಪುಗ್ಗಾ ಎನ್ನುವುದು ಬ್ರಾಹ್ಮಣ, ಲಿಂಗಾಯತ, ರೆಡ್ಡಿ, ಕಂಬಾರ, ಕುಂಬಾರ ಇತ್ಯಾದಿ ಮೇಲ್ವರ್ಗದ ಸಮುದಾಯಗಳಲ್ಲಿ ಮಕ್ಕಳಿಗಾಗಿ ಬಳಸುವಂತ ರೂಪವಿದು. ಇದು ಕೆಳವರ್ಗದ ಸಮುದಾಯದಲ್ಲಿ ಮಕ್ಕಳಿಗೆ ಬಳಸುವಾಗ ಅಬ್ಬಲ್ ಪೀಪಿ ಎಂದು ಬಳಸುವುದು ಸಹಜ. ಇಲ್ಲಿ 'ಪುಗ್ಗಾ' ಎಂಬ ರೂಪ ವ್ಯಂಜನದಿಂದ ಪ್ರಾರಂಭವಾದರೆ ಅಬ್ಬಲ್ ಪೀಪಿ ಎಂಬ ರೂಪ ಸ್ವರದಿಂದ ಪ್ರಾರಂಭವಾಗಿದೆ. ಇಲ್ಲಿ ಧ್ವನಿಗಳ ವ್ಯತ್ಯಾಸವನ್ನು ಗುರುತಿಸಬಹುದು.

ಆಬೂ ಮತ್ತು ಆ ಆಗ್ಯಾದ ಎನ್ನುವ ರೂಪಗಳು ಮಕ್ಕಳ ಭಾಷೆಯಲ್ಲಿ ಬಳಕೆಯಾಗಿವೆ. ಸಾಮಾನ್ಯ ಭಾಷಾ ಪದಕೋಶದಲ್ಲಿ ಇಂತಹ ರೂಪಗಳು ಸಿಗುವುದಿಲ್ಲ. ಆದ್ದರಿಂದ ಬರಹ ಭಾಷೆಗಿಂತ ಭಿನ್ನವಾಗಿ ಕಂಡುಬರುತ್ತದೆ. ಆಬೂ ಎಂಬ ರೂಪ ಬ್ರಾಹ್ಮಣ, ಲಿಂಗಾಯತ ಮನೆಯಲ್ಲಿ ಮಕ್ಕಳಿಗೆ ಬಳಸಲಾಗುತ್ತದೆ. ಆಬೂ ಎಂದರೆ ಗಾಯ ಎಂದರ್ಥ. ಈ ರೂಪ ಕೆಳವರ್ಗದ ಜನರ ಮಾತಿನಲ್ಲಿ ಬಳಕೆಯಲಿಲ್ಲ. ಆ ಆಗ್ಯಾದ ಎಂಬ ರೂಪ ಕೆಳವರ್ಗದ ಸಮುದಾಯದಲ್ಲಿ ಮಕ್ಕಳಿಗಾಗಿ ಬಳಸುತ್ತಾರೆ.

ಸಮಾಜ ಮತ್ತು ಭಾಷೆ ಇವೆರಡರ ಆಂತರಿಕ ಸಂಬಂಧ ವಿಶಿಷ್ಟವಾದದ್ದು. ಆದರೆ ಭಾಷೆ ಯಿಂದ ಸಮಾಜದ ರಚನೆಯ ವ್ಯವಸ್ಥೆಯನ್ನು ಸುಲಭವಾಗಿ ಅರಿಯುವುದಕ್ಕೆ ಸಾಧ್ಯವಾಗುತ್ತದೆ. ಸಮಾಜದಲ್ಲಿ ಮಗು ತನ್ನಷ್ಟಕ್ಕೆ ತಾನೇ ಸರ್ವ ಸ್ವತಂತ್ರವಾಗಿರದ ಆಯಾ ಸಮುದಾಯದ ಅವಿಚ್ಛಿನ್ನ ಘಟಕವಾ್ಗಿರುವುದು ಮಕ್ಕಳನ್ನು ಸಮಾಜದಿಂದ ಯಾವುದೇ ಕಾರಣದಿಂದಲೂ ಬೇರ್ಪಡಿಸಲಾಗದು. ಭಾಷೆ ಸಮಾಜದ ಎಲ್ಲಾ ಚಟುವಟಿಕೆಯ ಕೇಂದ್ರವಾಗಿದೆ. ಸಮಾಜದ ಬೆಳವಣಿಗೆಗೆ ಹಾಗೂ ಬದಲಾವಣೆಗೆ ಭಾಷೆ ಅನಿವಾರ್ಯವಾಗಿದೆ.

ಭಾರತದಲ್ಲಿ ಅನೇಕ ಜಾತಿ ಉಪಜಾತಿಗಳು, ಧರ್ಮಗಳು ಅನೇಕ ಭಾಷಾ ಪ್ರಭೇದಗಳು ಇರುವುದರಿಂದ ಪ್ರತಿಯೊಂದು ಜಾತಿ, ಉಪಜಾತಿ, ಧರ್ಮಗಳಲ್ಲಿನ ಭಾಷಿಕರ ಆಚಾರ, ವಿಚಾರ, ಸಂಪ್ರದಾಯ, ನಂಬಿಕೆಗಳು ಸಾಮಾಜಿಕ ಪದ್ಧತಿಗಳು ಎಲ್ಲವೂ ಸಹ ಭಾಷೆಯೊಂದರ ಕಲಿಕೆ ಬಳಕೆಯ ನೆಲೆಗಳ ಮೇಲೆ ಪ್ರಭಾವ ಬೀರುತ್ತಿರುತ್ತವೆ. ಇದರಿಂದಾಗಿ ಭಾರತದಲ್ಲಿ ಅನೇಕ ಭಾಷೆ ಭಾಷಾ ಪ್ರಭೇದಗಳು ಜೊತೆಗೆ ಅಸಂಖ್ಯಾತ ವ್ಯಕ್ತಿಗಳು ಇವೆ. ಇವು ಪ್ರತಿಯೊಂದು ಮಗುವಿನಿಂದ ಮಗುವಿಗೆ ಕಲಿಕೆಯ ಬಳಕೆಯ ನೆಲೆಯಲ್ಲಿ ಭಿನ್ನವಾಗಿದ್ದು ಭಾಷಾ ರಚನೆಯ ಮೇಲೆ ಅನೇಕ ರೀತಿಯ ಪ್ರಭಾವವನ್ನು ಉಂಟು ಮಾಡುತ್ತಿರುತ್ತದೆ. ಜೊತೆಗೆ ಅನೇಕ ಭಾಷೆ, ಭಾಷಾ ಪ್ರಭೇದಗಳು ಭಾರತದಲ್ಲಿರುವುದರಿಂದ ಭಾಷಿಕರು ಬದುಕುವ ಸಾಮಾಜಿಕ ಪರಿಸರದಲ್ಲಿ ಹಲವು ಭಾಷೆಗಳನ್ನು ಸಹಜವಾಗಿ ಕಲಿತು ಬಳಸುತ್ತಿರುತ್ತಾರೆ. ಇಂತಹ ಸಂದರ್ಭಗಳಿಂದಾಗಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿತು ಬಳಸುವುದರಿಂದ ದ್ವಿಭಾಷಿಕ ಮತ್ತು ಬಹುಭಾಷಿಕ ಪರಿಸರ ಉಂಟಾಗುತ್ತದೆ.

ಕರ್ನಾಟಕದ ಗಡಿಯುದ್ದಕ್ಕೂ ದ್ವಿಭಾಷಿಕತೆಯ ಪರಿಸರದಿಂದ ಎಷ್ಟೋ ಬಾರಿ ಕನ್ನಡಕ್ಕೆ ಮಾರಕವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಸಹಜವಾಗಿ ಕನ್ನಡ ಪ್ರಾಂತ್ಯಗಳಿಗೆ ವಲಸೆ ಬಂದವರು ಹೆಚ್ಚಾದಾಗ ವಲಸೆ ಭಾಷೆ ಪ್ರಚಲಿತವಾಗಿ ನೆಲದ ಭಾಷೆ ಸೊರಗಿ ತನ್ನ ಅಸ್ತಿತ್ವ ಕಳೆದುಕೊಳ್ಳುವುದು. ಇಂಗ್ಲಿಷ್ ಇಡೀ ನಾಡಿನ ಎಲ್ಲಾ ಪ್ರಾಂತಗಳ ಮೇಲೆ ವಸಾಹತಿಕರಣದ ವಿಕಿರಣದಂತಿದೆ. ಗಡಿ ಪರಿಸರದಲ್ಲಿ ಬಹುಭಾಷಿಕ ದ್ವಿಭಾಷಿಕ ಪರಿಸರ ಉಂಟಾಗಿವೆ.

ಯಾದಗಿರಿ ಪರಿಸರವು ಕನ್ನಡ, ತೆಲುಗು ಭಾಷೆ ಬಳಕೆ ಇರುವುದರಿಂದ ಇಲ್ಲಿ ದ್ವಿಭಾಷಿಕ ಪರಿಸರ ನೆಲೆಯಾಗಿದೆ. ಸಹಸ್ರ ವರ್ಷದ ಕನ್ನಡ ನೆಲ ಮರಾಠಿಯ ಸಂಪರ್ಕದಲ್ಲಿ ಆಧಾನ ಪ್ರಧಾನ ರೂಪದ ಕೊಡುಕೊಳ್ಳುವಿಕೆಯಿದೆ. ಯಾದಗಿರಿ ಜಿಲ್ಲೆಯಲ್ಲಿ ನೆಲೆಸಿರುವ ತೆಲುಗರು ಮನೆಯ ಆವರಣದಲ್ಲಿ ತೆಲುಗು ಭಾಷೆಯನ್ನು ಬಳಸುತ್ತಾರೆ. ಸಾರ್ವಜನಿಕ ಆವರಣದಲ್ಲಿ ಕನ್ನಡ + ತೆಲುಗು ಮಿಶ್ರಿತ ರೂಪಗಳ ಬಳಕೆ ಹೆಚ್ಚು. ಬಹುಸಂಖ್ಯಾತ ಕನ್ನಡಿಗರೊಂದಿಗೆ ವ್ಯವಹಾರ ಮಾಡುವುದರಿಂದ ಅನಿವಾರ್ಯವಾಗಿ ತೆಲುಗರು ಕನ್ನಡ ಭಾಷೆಯನ್ನು ಬಳಕೆ ಮಾಡುವ ಒತ್ತಡವಿದೆ. ಹಾಗಾಗಿ ಅಂತಹ ಸಂದರ್ಭದಲ್ಲಿ ತೆಲುಗು ಕನ್ನಡ ಮಾತಿನಲ್ಲಿ ತೆಲುಗು ಭಾಷೆ ಉಚ್ಚಾರಣೆ, ಶಬ್ದಕೋಶ, ವ್ಯಾಕರಣ ವಿಚಾರಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಯಾದಗಿರಿ ಜಿಲ್ಲೆಯಲ್ಲಿ ಕೆಲವು ಕಡೆ ನೆಲೆಸಿರುವ ತೆಲುಗರು ದ್ವಿಭಾಷಿಕರು. ಹಾಗಾಗಿ ಕನ್ನಡ ಮತ್ತು ತೆಲುಗು ಎರಡು ಭಾಷೆಗಳಲ್ಲಿ ವ್ಯವಹಾರ ಮಾಡುವ ಸಾಮರ್ಥ್ಯ ಹೊಂದಿದವರು ಮನೆಯ ಆವರಣದಲ್ಲಿ ಶಿಷ್ಟ ತೆಲುಗು .ಮಾತನಾಡಿದರೆ ಕನ್ನಡ ಪರಿಸರದಲ್ಲಿ ಮಧ್ಯೆ ಮಧ್ಯೆ ತೆಲುಗು ರೂಪಗಳನ್ನು ಸೇರಿಸಿ ಮಾತನಾಡುವ ಭಾಷಿಕ ಪ್ರಕ್ರಿಯೆ ಇಲ್ಲಿದೆ.

ಸಾಮಾಜಿಕ ಶ್ರೇಣೀಕರಣ ಮತ್ತು ಸಮುದಾಯಗಳ ನಡುವಿನ ಸಾಮಾಜಿಕ ನಿರ್ಬಂಧದೊಡನೆ ಅವುಗಳ ಪ್ರತ್ಯೇಕತೆಯನ್ನು ನಿರ್ವಹಿಸುವಲ್ಲಿ ಜಾತಿ ಪ್ರಮುಖ ಪಾತ್ರವಹಿಸುತ್ತದೆ. ಒಂದು ಭಾಷಿಕ ಸಮುದಾಯದ ಒಳ ಭಿನ್ನತೆಗಳಿಗೆ ಸಾಮಾಜಿಕವಾದ ಜಾತಿ ವ್ಯವಸ್ಥೆಯೂ ಕಾರಣ ವಾಗುತ್ತದೆ. ಏಕೆಂದರೆ ಪ್ರತಿ ಜಾತಿಯ ಮೂಲಭೂತವಾಗಿ ಭಿನ್ನವಾದ ನಂಬಿಕೆ, ರೀತಿ, ನಡುವಳಿಕೆ ಗಳನ್ನು ಜೀವನ ಕ್ರಮವನ್ನು ಪಾರಂಪರಿಕವಾಗಿ ರೂಪಿಸಿಕೊಂಡಿರುತ್ತದೆ. ಈ ಕಾರಣದಿಂದಾಗಿ ಬಳಸುವ ಭಾಷೆಯಲ್ಲಿ ಭಾಷಾಭಿವ್ಯಕ್ತಿಯಲ್ಲಿ ವ್ಯತ್ಯಾಸಗಳು ಕಾಣಿಸಿಕೊಳ್ಳುತ್ತವೆ. ಹಾಗಾಗಿ ಜಾತಿ ಸಮುದಾಯಗಳ ಭಾಷೆಗೆ ಕೆಲವು ವಿಶಿಷ್ಟ ಲಕ್ಷಣಗಳು ಪ್ರಾಪ್ತವಾಗಿರುತ್ತವೆ. ಅವು ಧ್ವನಿ, ಪದ್ಯ, ವಾಕ್ಯ ರಚನೆಯಲ್ಲಿ ಇಂತಹ ವಿಶಿಷ್ಟ ವಿಭಿನ್ನತೆಗಳನ್ನು ಆಧರಿಸಿ ಸಾಮಾಜಿಕ ಪ್ರಭೇದಗಳನ್ನು ಗುರುತಿಸಲಾಗಿದೆ. ಧ್ವನಿ ಘಟಕಕ್ಕೆ ಸಂಬಂಧಿಸಿದ ಒಂದು ಉದಾಹರಣೆಯನ್ನು ಇಲ್ಲಿ ಗಮನಿಸ ಬಹುದು. ಯಾದಗಿರಿ ಪರಿಸರದ ಶಿಶು ಭಾಷಾ ರೂಪಗಳಲ್ಲಿ ಯಾಕು > ಆಕು, ಯಾರು > ಆರು, ಎಮ್ಮಿ > ಅಮ್ಮಿ, ಏನು > ಓನು, ಏಟು > ಓಟು, ಇತ್ಯಾದಿ ರೂಪಗಳು ಮಕ್ಕಳ ಭಾಷೆಯಲ್ಲಿ ಕಾಣುತ್ತವೆ.

ಭಾರತದಲ್ಲಿ ನೂರಾರು ಸಾಮಾಜಿಕ ವರ್ಗಗಳಿವೆ. ಪ್ರತಿಯೊಂದು ಸಾಮಾಜಿಕ ವರ್ಗ ತನ್ನದೇ ಆದ ಭಾಷೆ. ಸಮಾಜ ಮತ್ತು ಸಂಸ್ಕೃತಿಯನ್ನು ಹೊಂದಿದೆ. ಭಾಷಾ ಭೇದಕ್ಕೆ ಸಾಮಾಜಿಕ ವರ್ಗಗಳು ಪ್ರಮುಖ ಪಾತ್ರವಹಿಸುತ್ತವೆ. ಕನ್ನಡದಲ್ಲಿ ಪ್ರಾದೇಶಿಕತೆ ಮತ್ತು ವಿವಿಧ ಸಾಮಾಜಿಕ ವರ್ಗಗಳನ್ನು ಆಧರಿಸಿ ಭಾಷಿಕ ಹಿನ್ನೆಲೆಯಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿವೆ. ಸಾಮಾಜಿಕ ದೂರ, ಭಾಷಾ ಭೇದಕ್ಕೆ ಮತ್ತೊಂದು ಪ್ರಧಾನ ಅಂಶ. ಇವಲ್ಲದೆ ಆಯಾ ಜನಾಂಗದ ಆಚರಣೆ ವಿಧಿ ವಿಧಾನಗಳು ಭಾಷಾ ಭೇದಕ್ಕೆ ಕಾರಣವಾಗಿವೆ. ಒಂದೇ ಸಾಮಾಜಿಕ ವರ್ಗದೊಳಗೆ ಸಾಮಾಜಿಕ ಭಿನ್ನಾಂಶಗಳ ಸಹಾಯದಿಂದ ಸಾಮಾಜಿಕ ಭಾಷಾಧ್ಯಯನಗಳು ಬೆರಳೆಣಿಕೆಯಷ್ಟು ನಡೆದಿವೆ. ಬ್ರಾಹ್ಮಣ ಬ್ರಾಹ್ಮಣೇತರ ಮತ್ತು ಹರಿಜನ ಇಂತಹ ಸಾಮಾಜಿಕ ವರ್ಗಗಳನ್ನಾಧರಿಸಿ ವಿವರಣಾತ್ಮಕ ಮಾದರಿಯಲ್ಲಿ ಅಧ್ಯಯನ ನಡೆದಿದೆ. ಸಾಮಾಜಿಕ ವರ್ಗಗಳು ಮತ್ತು ಸಾಮಾಜಿಕ ದೂರ ಭಾಷಾಭೇದಕ್ಕೆ ಪ್ರಮುಖ ಕಾರಣವೆಂದು ಈ ಅಧ್ಯಾಯಗಳಿಂದ ತಿಳಿದುಬರುತ್ತದೆ.

ಬುಜ್ಜ > ಪಾಪು ಎನ್ನುವ ರೂಪಗಳು ಯಾದಗಿರಿ ಜಿಲ್ಲೆಯ ಶಿಶು ಭಾಷೆಯಲ್ಲಿ ಕಾಣುತ್ತವೆ. ಬುಜ್ಜ ಎನ್ನುವ ಪದ ಮೂಲತಃ ತೆಲುಗು ಭಾಷೆಯಿಂದ ಬಂದ ರೂಪ. ತೆಲುಗು ಮನೆಮಾತುಳ್ಳವರು ಕನ್ನಡಿಗರ ಜೊತೆ ಕರ್ನಾಟಕದಲ್ಲಿ ವಾಸವಾಗಿದ್ದಾಗ ಇಂತಹ ರೂಪ ಬಳಸುವುದು ಸಹಜ. ಬುಜ್ಜಿ ಎಂದರೆ ಮಗು, ಕೂಸು, ಕಂದ, ಚಿನ್ನ, ಬಂಗಾರ, ರಾಜ, ಚೆಲುವ, ಪುಟ್ಟಾ ಎಂಬ ಅರ್ಥಗಳಿವೆ. ಕನ್ನಡಿಗರ ಮನೆಯಲ್ಲಿ ಮಕ್ಕಳಿಗೆ ಬುಜ್ಜಿ ಎನ್ನುವ ರೂಪ ಬಳಕೆಯ ಬದಲಾಗಿ ಪಾಪು ಎನ್ನುವ ರೂಪ ಹೆಚ್ಚು ಮಕ್ಕಳಿಗೆ ಬಳಸಲಾಗುತ್ತದೆ. ಪಾಪು, ಪಾಪ, ಆಪ್ ಎಂತಲೂ ಕರೆಯುತ್ತಾರೆ. ಇಂತಹ ರೂಪಗಳು ತಂದೆ ತಾಯಿ ಮತ್ತು ಮಗುವಿನ ನಡುವೆ ನಡೆಯುವ ಸಂವಹನ ಮಾತ್ರ. ಇದು ಸಮಾಜದಲ್ಲಿ ಎಲ್ಲಾ ಜಾತಿ ಜನರ ಮಾತಿನಲ್ಲಿ ಈ ರೂಪಗಳು ಬಳಕೆಯಾಗುತ್ತವೆ.

ಪಚಕೋ > ಮಲಗು ಎಂಬ ರೂಪ ಶಿಶು ಭಾಷೆಯಲ್ಲಿದೆ. ಪಚಕೋ ಎಂಬ ರೂಪ ಮೂಲತಃ ತೆಲುಗು ಭಾಷೆಯಿಂದ ಬಂದ ರೂಪವಾಗಿದೆ. ಪಚಕೋ ಎಂದರೆ ಮಲಗು ಎಂದರ್ಥ. ಯಾದಗಿರಿ ಜಿಲ್ಲೆಯು ಗಡಿ ಪ್ರದೇಶವಾಗಿರುವುದರಿಂದ ತೆಲುಗು ಪ್ರಭಾವ ಕನ್ನಡ ಭಾಷೆ ಮೇಲೆ ಪ್ರಭಾವಬೀರಿದೆ. ಅದಕ್ಕಾಗಿ ಕನ್ನಡ ಮಾತನಾಡುವರ ಮನೆಯಲ್ಲಿ ಸಹಜವಾಗಿ ಬಳಕೆಯಾಗುತ್ತದೆ. ಪಚಕೋ ಎನ್ನುವ ರೂಪ ತೆಲುಗು ಮನೆಮಾತಾಗಿದ್ದು ಕರ್ನಾಟಕದೊಳಗೆ ನೆಲೆಸಿದ ಕನ್ನಡಿಗರ ಜೊತೆ ದಿನನಿತ್ಯ ವ್ಯವಹಾರಕ್ಕಾಗಿ ಸಂಪರ್ಕದಲ್ಲಿದ್ದಾಗ ಇಂತಹ ರೂಪ ಬಳಸುವುದು ಸಹಜ. ಪಚಕೋ ಎನ್ನುವ ರೂಪ ಕನ್ನಡದಲ್ಲಿ ಬಳಕೆಯಲ್ಲಿಲ್ಲ. ಕನ್ನಡ ಸಂದರ್ಭದಾಗ ಮಲಗು ಮಕ್ಕಾ ಎಂಬ ರೂಪಗಳು ಮಕ್ಕಳಿಗೆ ಬಳಸಲಾಗುತ್ತದೆ. ಇಲ್ಲಿಯೂ ವ್ಯತ್ಯಾಸವನ್ನು ಗುರುತಿಸಬಹುದು. ಪ್ರಾದೇಶಿಕವಾಗಿ ನೋಡಿದಾಗ ಪಾಚು ಎನ್ನುವ ರೂಪ ದಕ್ಷಿಣ ಕರ್ನಾಟಕದಲ್ಲಿ

ಮಕ್ಕಳಿಗೆ ವಿಶೇಷವಾಗಿ ಬಳಸುವಂತಹ ರೂಪವಿದು. ಇದು ತಂದೆ ತಾಯಿ ಮತ್ತು ಸಂಬಂಧಿಕರು ಮಗುವಿನ ಜೊತೆ ಸಂವಹನ ಮಾಡುವಾಗ ಇಂತಹ ರೂಪಗಳು ಸಹಜವಾಗಿ ಬಳಸುತ್ತಾರೆ. ಇದು ಪ್ರಾದೇಶಿಕವಾಗಿ ಭಿನ್ನತೆಯನ್ನು ತೋರಿಸುತ್ತದೆ. ಇವು ಬರಹದ ಕನ್ನಡದಲ್ಲಿ ಈ ರೂಪಗಳು ಬಳಕೆಯಾಗುವುದಿಲ್ಲ. ಯಾದಗಿರಿ ಜಿಲ್ಲೆಯ ಶಿಶು ಭಾಷಾರೂಪಗಳಲ್ಲಿ ಬಳಕೆಯಾದ ಭಾಷೆ ತುಂಬಾ ಕುತೂಹಲಕಾರವಾಗಿದೆ. ಇಲ್ಲಿ ಮೆಲುವರ್ಗ ಮತ್ತು ಕೆಳವರ್ಗದ ಸಮುದಾಯದ ಮಕ್ಕಳಲ್ಲಿ ನಡೆಯುವ ಸಂವಹನದಲ್ಲಿ ಭಾಷೆಯ ಭಿನ್ನತೆಯನ್ನು ಗುರುತಿಸಲಾಗಿದೆ.

ಸಮಾಜದಲ್ಲಿ ಮಗುವಿನ ಭಾಷಾ ಪ್ರಕ್ರಿಯೆಗಳ ಮೂಲಕ ಭಾಷಾ ಸಾಮರ್ಥ್ಯವನ್ನು ಪಡೆಯುವ ಕ್ರಿಯೆ ಜೀವಂತ ಪ್ರಕ್ರಿಯೆ. ಈ ಕ್ರಿಯೆಯ ಉದ್ದೇಶಕ್ಕನುಗುಣವಾಗಿ ಭಾಷೆ ಸಮಾಜ ದಲ್ಲಿ ಬಳಕೆಯಾಗುತ್ತಿರುತ್ತದೆ. ಸಂದರ್ಭಕ್ಕೆ ತಕ್ಕಂತ ಭಾಷಿಕರು ಭಾಷೆಯನ್ನು ಬಳಸುತ್ತಾರೆ. ಯಾವುದೇ ಭಾಷಿಕ ಸಮುದಾಯ ಒಂದರಲ್ಲಿ ಭಾಷಿಕರು ಬಳಸುವ ಭಾಷೆಯಲ್ಲಿ ಹಲವು ವ್ಯತ್ಯಾಸ ಗಳಿರುವುದು ಕಾಣುತ್ತವೆ. ಈ ವ್ಯತ್ಯಾಸಗಳು ವ್ಯಕ್ತಿಯಿಂದ ವ್ಯಕ್ತಿಗೆ ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತದೆ. ಈ ಭಿನ್ನತೆಯನ್ನು ಗುರುತಿಸಲು ಈ ರೂಪಗಳು. ನೋಡಬುಹುದು.

ಓಂಮಾಡು > ಜೇಜಿಮಾಡು	ಇಸ್ಸಿ > ಅಸ್ಸಿ
ಸೂಮಾಡು > ಸಿಮಾಡು, ಉಸಮಾಡು	ಪುಸ್ಸಿ > ಮ್ಯಾಂವು
ಪಪ್ಪಿಕೊಡು > ಮುದ್ದುಕೊಡು	ಬುಜ್ಜಿ > ಪಾಪು
ಪಚಕೋ > ಮಲಗು	ಅಂತರಗಾಡಿ > ಆಕಾಶಗಾಡಿ

ಇತ್ಯಾದಿ ರೂಪಗಳಿಂದ ಸಾಮಾಜಿಕ ವ್ಯತ್ಯಾಸಗಳನ್ನು ಗುರುತಿಸಲು ಸಾಧ್ಯ. 'ವಿಲಿಯಂ ಲೆಬೋವ್' (೧೯೬೬) ಅವರು ಸಾಮಾಜಿಕ ಭಿನ್ನಾಂಶ ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿದಲ್ಲದೆ ಅಮೇರಿಕಾದ ಪೆಟೊಲಿಕ್ಸನ್ಸ್ ಅಧ್ಯಯನದಲ್ಲಿ ಸಾಮಾಜಿಕ ಭಿನ್ನಾಂಶದಿಂದಾಗಿ ಭಾಷಾ ಬಳಕೆಯಲ್ಲಿ ಉಂಟಾಗುವ ಹಲವು ಅಂಶಗಳನ್ನು ದಾಖಲಿಸಿದ್ದಾರೆ. ಪಶ್ಚಿಮದಲ್ಲಿ ಅನೇಕ ಭಾಷಾಧ್ಯಯನಗಳು ಹಲವು ಬಗೆಯ ಸಾಮಾಜಿಕ ವ್ಯತ್ಯಾಸಗಳು ಹೇಗೆ ಭಾಷಿಕ ವ್ಯತ್ಯಾಸಕ್ಕೆ ಕಾರಣವಾಗುತ್ತವೆ. ಭಾಷೆ ಬಳಕೆಯ ನೆಲೆಗಳ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆ ಎನ್ನುವ ಹಲವು ವಿಚಾರಗಳು ಭಾಷಾಧ್ಯಯನಗಳಲ್ಲಿ ಮೇಲು ವರ್ಗ ಮತ್ತು ಕೆಳವರ್ಗದಲ್ಲಿ ಬಳಸುತ್ತಿರುವ ಶಿಶು ಭಾಷಾ ರೂಪಗಳ ಸಾಮಾಜಿಕ ವ್ಯತ್ಯಾಸ ಗುರುತಿಸಲಾಗಿದೆ. ಇವುಗಳಿಂದ ಭಾಷಾಧ್ಯಯನದ ಮೂಲಕ ಸಮಾಜದ ಸಂರಚನೆಯ ಸ್ವರೂಪ ತಿಳಿಯಬಹುದಾಗಿದೆ.

ಅಧ್ಯಾಯ ಐದು

ಸಮಾರೋಪ

ಮಕ್ಕಳು ಜಗತ್ತಿನ ಭವಿಷ್ಯವನ್ನು ರೂಪಿಸುವವರು. ಅವರ ಇಡೀ ಜೀವನದ ಭವಿಷ್ಯ ಬಾಲ್ಯದ ಬುನಾದಿಯ ಮೇಲೆ ನಿಂತಿರುತ್ತದೆ ಎಂದು ಸಿಗ್ಮಂಡ್ ಪ್ರಾಯ್ಡ್, ಆಡ್ಲರ್ ಮತ್ತು ಜಾರ್ಜ್‌ನೊಮನ್‌ಗಳಂತಹ ವಿದ್ವಾಂಸರು ಒತ್ತಿ ಹೇಳಿದ್ದಾರೆ.

ಮಗುವಿನ ಮುದ್ದಾದ ಮಾತು ಕೇಳುವವರನ್ನು ಉತ್ಸಕರನ್ನಾಗಿಸುತ್ತದೆ. ಮಗು ಹುಟ್ಟಿದ ತಕ್ಷಣ ಭಾಷೆಯನ್ನು ಅರಿತಿರಲಾರದು. ಹೀಗಾಗಿ ಮೊದಲು ತನ್ನ ಸುತ್ತಮುತ್ತಲಿನ ಪರಿಸರದ ಜನರ ವರ್ತನೆಗಳನ್ನು ಅವಲೋಕಿಸುವುದು ಮತ್ತು ಇತರರು ಮಾತನಾಡುವ ಧ್ವನಿಗಳನ್ನು ಅವಲೋಕಿಸುತ್ತ ಅವರನ್ನು ಅನುಸರಿಸುತ್ತದೆ. ಮಗುವಿನ ತಾಯಿ ಮತ್ತು ಮಗು ಸತತ ಪ್ರಯತ್ನ ದಿಂದ ಭಾಷೆಯನ್ನು ಕಲಿಯುತ್ತದೆ. ಮಗು ಆರಂಭದಲ್ಲಿ ಬರಿ ಧ್ವನಿಗುಚ್ಛವನ್ನು ಉಚ್ಚರಿಸಲು ಪ್ರಾರಂಭಿಸುತ್ತದೆ.

ತಾಯಿ ಮಗುವಿನ ಭಾಷೆ ರೂಪಿಸಲು ಪ್ರಮುಖ ಪಾತ್ರವಹಿಸುತ್ತಾಳೆ. ತಾಯಿ ಮಗುವಿನ ಬೌದ್ಧಿಕ ಬೆಳವಣಿಗೆಯೊಂದಿಗೆ ಮಾನಸಿಕ ಬೆಳವಣಿಗೆಯನ್ನು ಮಾಡುವವಳಾಗಿದ್ದಾಳೆ. ಮಗುವಿನ ಭಾಷೆ ಕರಗತ ಮಾಡಿಕೊಳ್ಳದಿರುವ ಸಂದರ್ಭದಲ್ಲಿ ತಾಯಿ ಮಾತನ್ನು ಪುನಾರವರ್ತಿಸಿ ಮಾತನಾಡಿ ಮಗುವಿಗೆ ಆ ಧ್ವನಿ ಅರ್ಥ ವಿವರಿಸುವಲ್ಲಿ ಕಾರಣಳಾಗುತ್ತಾಳೆ.

ತಾಯಿ ಮಗುವಿಗೆ ಭಾಷೆ ಕಲಿಸಲು ತನ್ನ ಭಾಷೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಿ ಕೊಳ್ಳುತ್ತಾಳೆ. ಸಹಜ ರೂಪಗಳನ್ನು ಸರಳಿಕರಿಸುವುದು, ಧ್ವನಿಮಾತ್ಮಕವಾಗಿ ವ್ಯತ್ಯಾಸ ಗೊಳಿಸುವುದು, ರೂಪ ಬದಲಾವಣೆ, ಪ್ರಾಣಿ-ಪಕ್ಷಿ ಮತ್ತು ವಸ್ತು ಹೊರಡಿಸುವ ಶಬ್ದ ಅನುಕರಿಸುವುದು.

ಇಂತಹ ಅನೇಕ ಭಾಷಿಕ ಬದಲಾವಣೆ ಮಗುವಿನ ಭಾಷೆಯಲ್ಲಿರುತ್ತದೆ. ಮಕ್ಕಳಿಗಾಗಿ ಒಂದು ವಿಶಿಷ್ಟ ಭಾಷಾ ಪದಕೋಶವೇ ಸೃಷ್ಟಿಗೊಂಡಿರುತ್ತದೆ. ಆ ರೂಪಗಳು ವಯಸ್ಕರ ಭಾಷೆಯಲ್ಲಿ ಇರುವುದಿಲ್ಲ. ಎಲ್ಲಾ ಭಾಷಾ ಸಮುದಾಯದಲ್ಲೂ ಮಕ್ಕಳೊಡನೆ ಮಾತನಾಡಲು ಒಂದು ವಿಶೇಷವಾದ ರೀತಿಯಿದೆ. ಇದು ವಯಸ್ಕರು ಸಾಮಾನ್ಯವಾಗಿ ಮಾತನಾಡುವ ರೀತಿಗಿಂತ ಭಿನ್ನವಾಗಿರುತ್ತದೆ. ಈ ಬಗ್ಗೆ ಜಾಗತೀಕ ಮಟ್ಟದಲ್ಲಿ ಅನೇಕ ಅಧ್ಯಯನಗಳು ನಡೆದಿವೆ ಮತ್ತು ನಡೆಯುತ್ತಲಿವೆ. ಹಾಗೆಯೇ ಶಿಶುಭಾಷಾ ರೂಪಗಳ ಬಗ್ಗೆ ಅಧ್ಯಯನಗಳು ಬರುತ್ತಿವೆ.

ಈ ಅಧ್ಯಯನಕ್ಕೆ ಇರುವ ಉದ್ದೇಶ, ವ್ಯಾಪ್ತಿ ಮತ್ತು ಅಧ್ಯಯನದ ಸ್ವರೂಪನ್ನು ವಿವರಿಸಲಾಗಿದೆ. ಈ ಮಿತಿಗಳನ್ನಿಟ್ಟುಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಮಾಹಿತಿಗಳನ್ನು ಅಧ್ಯಯನಕ್ಕೆ ರೂಪಿಸಿಕೊಂಡಿರುವ ಸ್ವರೂಪಕ್ಕನುಗುಣವಾಗಿ ವಿಂಗಡಿಸಿಕೊಂಡು ವಿವರಿಸಲಾಗಿದೆ. ಅಧ್ಯಯನದ ಪೂರಕ ಮಾಹಿತಿಗಾಗಿ ಈ ಹಿಂದೆ ಮಕ್ಕಳ ಭಾಷೆ ಬಗ್ಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದೆ. ಮಗುವಿನ ಭಾಷೆ ಬೆಳವಣಿಗೆ ಬಗ್ಗೆ ಆರ್. ರಾಮಕೃಷ್ಣ ಅವರ 'ಬಾಲಭಾಷೆ' (೧೯೯೯) ಡಾ. ಸಾಂಬಮೂರ್ತಿ ಅವರ 'ಬಾಲಭಾಷೆ ವಿಶಿಷ್ಟ ಪದಕೋಶ' (೨೦೧೨) ಸವದತ್ತಿಮಠ ಅವರ 'ಮಕ್ಕಳ ಭಾಷೆ' (೧೯೯೯), ಬಸವರಾಜ ಕೊಡಗುಂಟಿ ಅವರ 'ಮಕ್ಕಳ ಭಾಷೆ' (೨೦೦೩), 'ಮಕ್ಕಳ ಭಾಷಾ ವಿಜ್ಞಾನ', 'ಮಗು ಮತ್ತು ಭಾಷೆ' (೨೦೦೭) ಈ ಲೇಖನಗಳನ್ನು ವೀಕ್ಷಿಸಲಾಗಿದೆ. ಇವುಗಳಲ್ಲದೆ ಕೆಂಪೇಗೌಡ, ಕೆ.ವಿ. ನಾರಾಯಣ (೨೦೦೧) ಅವರು ರಚಿಸಿರುವ 'ಮಕ್ಕಳ ಭಾಷೆ' ಬಗೆಗಿನ ಅಧ್ಯಯನಗಳನ್ನು ಉಲ್ಲೇಖಿಸಲಾಗಿದೆ.

ಮಕ್ಕಳ ಭಾಷೆಯ ಬಗ್ಗೆ ಬಂದಿರುವ ಪಿಎಚ್.ಡಿ. ಪ್ರಬಂಧಗಳನ್ನು ಸಮೀಕ್ಷಿಸಲಾಗಿದೆ. ಅವರಲ್ಲಿ ಎಲ್. ದೇವಕಿ ಅವರ (೧೯೯೧) "ಡೆವಲಪ್‌ಮೆಂಟ್ ಆಫ್ ಮಾರ್ಫೊಲಜಿಕಲ್ ರೂಲ್ಸ್ ಇನ್ ಚಿಲ್ಡ್ರನ್", ಎಂ.ವಿ.ಗಿರಿಜಮ್ಮ ಅವರು "ಮಕ್ಕಳಲ್ಲಿ ಕನ್ನಡ ಭಾಷಾ ಕಲಿಕೆ" (೨೦೦೬), ಎನ್.ಕೆ. ಮಂಜುಳವರು "ಮಕ್ಕಳಲ್ಲಿ ವಾಕ್ಯರಚನಾ ನಿಯಮಗಳ ಬೆಳವಣಿಗೆ" (೨೦೦೯) ಈ ಪ್ರಬಂಧಗಳ ಸಾರವನ್ನು ಅಧ್ಯಯನಕ್ಕೆ ಪೂರಕವಾಗಿ ಒದಗಿಸಲಾಗಿದೆ. ಈ ಅಧ್ಯಯನವು ಹೇಗೆ ಕಟ್ಟಿಕೊಳ್ಳಬೇಕೆಂದು ಈ ಹಿಂದಿನ ಅಧ್ಯಯನಗಳ ಮೂಲಕ ಅರಿತುಕೊಳ್ಳಲಾಗಿದೆ.

ಮಗು ಹುಟ್ಟಿನಿಂದ ಬಾಲ್ಯದ ಹಂತ ದಾಟುವವರೆಗೆ ಹೇಗೆ ಹಂತ ಹಂತವಾಗಿ ಭಾಷೆಯನ್ನು ಕಲಿಯುತ್ತದೆ ಮತ್ತು ಅವುಗಳಿಗೆ ಸುತ್ತಮುತ್ತಲು ಪರಿಸರದ ವ್ಯಕ್ತಿಗಳು ಯಾವ ತರಹದ ಭಾಷಿಕ ರೂಪಗಳನ್ನು ಬಳಸುತ್ತಾರೆ. ಈ ಎಲ್ಲಾ ಸಂಗತಿಗಳನ್ನು ವಿವರಿಸಲಾಗಿದೆ. ಈ ಅಧ್ಯಯನದಲ್ಲಿ ಮಕ್ಕಳಿಗಾಗಿ ಬಳಸುವ ರೂಪಗಳು ಹೇಗೆ ನಿರ್ಮಾಣವಾಗುತ್ತವೆ ಎನ್ನುವುದನ್ನು ವಿವರಿಸಲಾಗಿದೆ. ಉದಾಹರಣೆಗೆ ವಾಹನ, ಪ್ರಾಣಿ, ಪಕ್ಷಿಗಳ, ಶಬ್ದಾನುಕರಣ ರೂಪಗಳು (ಡೀರ, ಬೌಬೌ, ಕೌಕೌ,

ಚಿಂವ್ ಚಿಂವ್, ಬುಸು ಬುಸು) ಇವುಗಳಲ್ಲದೇ ಹ್ರಸ್ವೀಕರಣಗೊಂಡ ರೂಪಗಳನ್ನು (ಚಾಕಿ, ಬಿಕ್ಕಿ) ರೂಪ ನಿಷ್ಪತ್ತಿಗಳನ್ನು ವಿವರಿಸಲಾಗಿದೆ.

ಶಿಶುಭಾಷಾ ರೂಪಗಳಲ್ಲಿ ಸಹಜರೂಪ ಅಚ್ಚಿ, ಅಮ್ಮಾ, ಆಕು, ಆರು, ತೀತಿ, ಪುಸ್ಸಿ, ಬಾವು ಮತ್ತು ಸಂಯುಕ್ತ ರೂಪಗಳು ಆಮಾಡು, ಥೂಮಾಡು, ಸೂಮಾಡು, ಓಂಮಾಡು, ಡಿಸಮ್ಮಾಡು, ಕಕ್ಕುಮಾಡು ಹಾಗೂ ಶಬ್ಧಾನುಕರಣ ರೂಪಗಳು ಅಂಬಾ, ಬೌಬೌ, ಬುಸುಬುಸು, ಚಿಂವ್‌ಚಿಂವ್, ಪಂವ್‌ಪಂವ್ ಡಿಸಮ್ಮಾಡು, ಮ್ಯಾಂವು, ಕೌಕೌ ಇಂತಹ ರೂಪಗಳನ್ನು ವಿವರಿಸಲಾಗಿದೆ. ಶಬ್ಧಾನುಕರಣದಲ್ಲಿ ಆಧುನಿಕ ಶಿಕ್ಷಣ, ದೃಶ್ಯ, ಶ್ರವ್ಯ, ಮಾಧ್ಯಮಗಳು ಯಾವ ರೀತಿ ಹೊಸ ರೂಪ ಸೃಷ್ಟಿಗೆ ಕಾರಣವಾಗುತ್ತವೆನ್ನುವುದನ್ನು ವಿವರಿಸಲಾಗಿದೆ. ಉದಾಹರಣೆಗೆ ಡಿಸಮ್ಮಾಡು, ಹೊಡಿ ಇತ್ಯಾದಿ.

ಹಿರಿಯರು ಮಕ್ಕಳೊಡನೆ ಮಾತನಾಡುವಾಗ ಭಾಷಿಕ ರೂಪಗಳು ಹ್ರಸ್ವೀಕರಣ ಮಾಡುವುದು ಕಂಡುಬರುತ್ತದೆ. ಇವು ಮಗುವಿಗೆ ಭಾಷೆಯನ್ನು ಸುಲಭಗೊಳಿಸುವುದಾಗಿದೆ. ಈ ಮೂಲಕ ಮಗು ಭಾಷೆಯನ್ನು ಬೇಗ ಗ್ರಹಿಸಿಕೊಳ್ಳಬಲ್ಲದು. ಅಲ್ಲದೆ ತಾನು ಉಚ್ಛರಿಸುವಾಗಲೂ ಅದನ್ನೇ ಉಚ್ಛರಿಸುವುದು. ಉದಾಹರಣೆಗೆ ಚಾಕ್ಲೇಟು > ಚಾಕಿ, ಬಿಸ್ಕಿಟ > ಬಿಕ್ಕಿ, ಸೂಜಿ > ಚುಚ್ಚಿ, ಹಣು > ಹಣ್ಣಿ, ಇತ್ಯಾದಿಗಳನ್ನು ವಿವರಿಸಲಾಗಿದೆ.

ಈ ಅಧ್ಯಯನದಲ್ಲಿಯೇ ಶಿಶುಭಾಷಾ ರೂಪಗಳನ್ನು ಅವುಗಳ ಧ್ವನಿಮಾತ್ಮಕ ರಚನೆಗಳ ಅನುಗುಣವಾಗಿ ವಿಂಗಡಿಸಿ ವಿವರಿಸಲಾಗಿದೆ. ಅವುಗಳಲ್ಲಿ,

ಒಂದಕ್ಷರ ರೂಪಗಳು

ಬೂ

ಎರಡಕ್ಷರ ರೂಪಗಳು

ಜೇಜಿ, ಪುಸ್ಸಿ, ಬಾವು, ಬೌವ್ವ

ಇಸ್ಸಿ, ಚಿಯಾ, ಚಾಕಿ, ಬಿಕ್ಕಿ

ಓನು, ಓಟು, ಆಕು, ಆರು

ಮೂರಾಕ್ಷರ ರೂಪಗಳು

ಆಮಾಡು, ಥೂಮಾಡು, ಸೂಮಾಡು,

ಓಂಮಾಡು, ಡಿಓಡಿ, ಬಕರಿ,

ಚೈಕಲ್, ಇಮಾನ

ನಾಲ್ಕು ಐದಕ್ಷರ ರೂಪಗಳು

ಕಕ್ಕುಮಾಡು, ಐಲುಗಾಡಿ, ಆಕಾಶಗಾಡಿ,

ಅಂತರಗಾಡಿ, ಬುರುಬುರಿ, ಠಿಂದನಕಟ್ಟಿ,

ಪಾಯಿಪಾಯಿ, ಬುಸುಬುಸು

ಹೀಗೆ ಧ್ವನಿಗಳಿಗನುಗುಣವಾಗಿ ವಿಂಗಡಿಸಿ ವಿವರಿಸಲಾಗಿದೆ. ಪದಗಳನ್ನು ಅವುಗಳನ್ನು ಹೊಂದಿರುವ ಸ್ವರ, ವ್ಯಂಜನ ಧ್ವನಿಗಳ ಆಧಾರದ ಮೇಲೆ ವಿಭಾಗಿಸಲಾಗಿದೆ.

ಹ್ರಸ್ವದಿಂದ ಪ್ರಾರಂಭವಾಗುವ ರೂಪಗಳು

ಅಜ್ಜಿ (ಸ್ವ+ವ್ಯ+ವ್ಯ+ಸ್ವ)

ಅಮ್ಮಾ (ಸ್ವ+ವ್ಯ+ವ್ಯ+ಸ್ವ(ದಿ))

ಹೀಗೆ ಸ್ವರದಿಂದ ಪ್ರಾರಂಭವಾಗುವ, ವ್ಯಂಜನದಿಂದ ಪ್ರಾರಂಭವಾಗುವ ದೀರ್ಘ ಸ್ವರದಿಂದ ಅಂತ್ಯಗೊಳ್ಳುವ ಪದಗಳೆಂದು ವರ್ಗೀಕರಿಸಿ ಧ್ವನಿ ವಿಂಗಡಣೆ ಮಾಡಲಾಗಿದೆ.

ಒಂದು ಭಾಷೆಯಲ್ಲಿ ಬದಲಾವಣೆಗೆ ಹೇಗೆ ಅನಿವಾರ್ಯವೋ ಹಾಗೆಯೇ ಶಿಶುಭಾಷಾ ರೂಪಗಳು ನಿಷ್ಪತ್ತಿಯಾಗುವಾಗ ಮೂಲ ಪದಗಳಲ್ಲಿ ಕೆಲವು ವ್ಯತ್ಯಾಸಗಳುಂಟಾಗುತ್ತವೆ. ಅವುಗಳಲ್ಲಿ

ಪದಾದಿಯ ಸ್ವರ ಬದಲಾವಣೆ

ಎಲ್ಲಿ > ಅಲ್ಲಿ

ಎಮ್ಮಿ > ಅಮ್ಮಿ

ಪದಾದಿ ವ್ಯಂಜನ ಬದಲಾವಣೆ

ಸಾಕು > ಚಾಕು

ಸಾರು > ಚಾರು

ಪದಾದಿಯ ವ್ಯಂಜನ ಲೋಪವಾದ ರೂಪಗಳು

ಯಾಕು > ಆಕು

ಯಾರು > ಆರು

ರೊಕ್ಕ > ಒಕ್ಕ

ರೊಟ್ಟಿ > ಒಟಿ

ಪದಾಂತ್ಯ ವ್ಯಂಜನ ಬದಲಾವಣೆ

ಬೂಟು > ಬೂತು

ಮುಳ್ಳು > ಮುಲ್ಲು

ಪದಾದಿಯ ದಿತ್ವ ಕಳೆದುಕೊಂಡ ರೂಪಗಳು

ಪ್ಯಾಂಟು > ಪಾಂಟು

ಬ್ಯಾನಿ > ಬಾನಿ

ಇಂತಹ ಬದಲಾವಣೆಗಳನ್ನು ಯಾದಗಿರಿ ಪರಿಸರದಲ್ಲಿ ಗುರುತಿಸಲಾಗಿದೆ. ಅವುಗಳನ್ನು ಇಲ್ಲಿ ವರ್ಗೀಕರಿಸಿ ವಿವರಿಸಲಾಗಿದೆ.

ಮಾನವನು ತನ್ನ ಸೌಲಭ್ಯಾಕಾಂಕ್ಷಿ ಪ್ರವೃತ್ತಿಯಿಂದ ಭಾಷೆಯಲ್ಲಿ ಕಾಲದಿಂದ ಕಾಲಕ್ಕೆ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಅಂತಹದ್ದೇ ಪ್ರಕ್ರಿಯೆಯನ್ನು ಮಕ್ಕಳ ಭಾಷಾ ರೂಪಗಳಲ್ಲಿಯು ಕಂಡುಬಂದಿದೆ. ಇದು ಮಕ್ಕಳಿಗೆ ಭಾಷಾ ಕರಗತ ಮಾಡಿಕೊಡುವ ನಿಟ್ಟಿನಲ್ಲಿ ಈ ಪ್ರಯತ್ನ ನಡೆದಿದೆ. ಈ ಕುರಿತು ಅಧ್ಯಯನಗಳು ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗಬಲ್ಲವು. ಈ ಫಲಿತಗಳನ್ನಿಟ್ಟುಕೊಂಡು ಶೈಕ್ಷಣಿಕ ಪಠ್ಯ ಅಥವಾ ಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮವನ್ನು ರೂಪಿಸಲು ಸಹಾಯಕವಾಗುತ್ತದೆ.

ಈ ವಿವರಣೆಗೆ ಸಾಮಾಜಿಕ ಜಾತಿಗಳಾದ ಬ್ರಾಹ್ಮಣ, ಲಿಂಗಾಯಿತ, ದಲಿತ, ನಾಯಕ ಎಂದು ವಿಭಾಗಿಸಿಕೊಂಡು ಮತ್ತೆ ಅವುಗಳಲ್ಲಿ ವ್ಯತ್ಯಾಸಗಳಿದ್ದರೆ ಲಿಂಗಾಯಿತ, ದಲಿತರಲ್ಲಿಯ ಇತರ ಉಪಜಾತಿಗಳಲ್ಲಿರುವ ಭಿನ್ನತೆಯನ್ನು ವಿವರಿಸಲಾಗಿದೆ.

ಬ್ರಾಹ್ಮಣ	ಲಿಂಗಾಯಿತ	ದಲಿತ
ಬ್ಲೂಪಿ	ಬುರ್	ಡಿರ್
ಬಕರಿ	ಉಮ್ಮಾ	ಉಮ್ಮಾ
ಆಬೂ	ಆ ಆಗ್ಯಾದ	ಆಗ್ಯಾದ
ಓಂಮಾಡು	ಜೇಜಿಮಾಡು	ಜೇಜಿಮಾಡು
ಪುಸ್ಸಿ	ಮ್ಯಾಂವು	ಮ್ಯಾಂವು
ಇಮಾನ್	ಆಕಾಶಗಾಡಿ	ಅಂತರಗಾಡಿ
ಸುಮಾಡು	ಸಿಮಾಡು	ಉಸ್ಮಾಡು

ಹೀಗೆ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ದ್ವಿಭಾಷಿಕ, ಬಹುಭಾಷಿಕ ಪರಿಸರ ಹೊಂದಿರುವ ಯಾದಗಿರಿ ಪರಿಸರಕ್ಕೆ ಅನೇಕ ಅನ್ಯ ಭಾಷೆಯ ಪದಗಳು ಬಂದು ಸೇರಿವೆ. ಅವುಗಳಲ್ಲಿ ಮರಾಠಿ, ತೆಲುಗು, ಉರ್ದು ಪದಗಳನ್ನು ಸೇರಿ ಶಿಶುಭಾಷಾ ರೂಪಗಳಾಗಿರುವುದನ್ನು ಕಂಡುಕೊಳ್ಳಲಾಗಿದೆ. ಉದಾಹರಣೆಗೆ ಬಾಕರಿ > ಬಕರಿ (ಮರಾಠಿ), ಪಚಕೊ > ಬುಜ್ಜಿ (ತೆಲುಗು) ಹೀಗೆ ವಿವರಣೆ ನೀಡಲಾಗಿದೆ.

ಇಲ್ಲಿ ಎಲ್ಲಾ ಅಧ್ಯಾಯಗಳ ಅಧ್ಯಯನ ಕ್ರಮ ಮತ್ತು ವಿಧಾನಗಳನ್ನು ವಿವರಿಸಲಾಗಿದೆ. ಉಳಿದಂತೆ ಆಕರಗ್ರಂಥ, ಅನುಬಂಧದಲ್ಲಿ ಮಾಹಿತಿದಾರರ ವಿವರ ಸಂಗ್ರಹಿಸಿದ ಶಿಶುಭಾಷಾ ರೂಪಗಳನ್ನು ಕೊಡಲಾಗಿದೆ. ಮಾಹಿತಿದಾರರು ಹೆಸರು ನೀಡುವಾಗ ತಾಯಿಯ ಹೆಸರು, ಮಗುವಿನ ಹೆಸರು, ವಯಸ್ಸು, ಲಿಂಗ, ಜಾತಿ, ವೃತ್ತಿ ಇವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

ಒಟ್ಟಿನಲ್ಲಿ ಈ ಅಧ್ಯಯನದಲ್ಲಿ ಮೊದಲ ಅಧ್ಯಾಯದಿಂದ ಕೊನೆಯ ಅಧ್ಯಾಯನದವರೆಗೆ ಯಾದಗಿರಿ ಪರಿಸರದಲ್ಲಿ ದೊರೆತಿರುವ ಮಾಹಿತಿಗನುಗುಣವಾಗಿ ಖಚಿತ ಉದಾಹರಣೆಗೆ ಅನುಸಾರವಾಗಿ ವಿವರಿಸಲಾಗಿದೆ. ಈ ಅಧ್ಯಯನವು ದೊರೆತ ಮಾಹಿತಿಯ ಆಧಾರದ ಮೇಲೆ ರೂಪಗೊಂಡಿರುವುದರಿಂದ ಇಲ್ಲಿ ಉತ್ಪ್ರೇಕ್ಷೆಯ ಯಾವ ಪ್ರಮೇಯವಿಲ್ಲವೆಂದು ಸಾಕ್ಷಿಕರಿಸಲಾಗಿದೆ. ಈ ಅಧ್ಯಯನವು ಕಾಲದಮಿತಿಯ ಆಧಾರದ ಮೇಲೆ ಪ್ರಾಥಮಿಕ ಅಧ್ಯಯನ ವಾಗಿದೆ. ಇದು ಮುಂದಿನ ಅಧ್ಯಯನಗಳಿಗೆ ಆಕಾರವಾಗಬಲ್ಲದು.

ಅನುಬಂಧಗಳು

೧. ಶಿಶುಭಾಷಾ ರೂಪಗಳ ಪದಕೋಶ

ಶಿಶು ಭಾಷಾರೂಪಗಳನ್ನು ಬರಹದ ಕನ್ನಡದ ರೂಪಗಳೊಂದಿಗೆ ತುಲನೆ ಮಾಡಿದಾಗ ಬರಹ ಕನ್ನಡ ಭಾಷೆಗಿಂತ ಭಿನ್ನವಾಗಿದೆ. ಈ ಪದಕೋಶದಲ್ಲಿ ತಂದೆ ತಾಯಿ ಕೇವಲ ಮಕ್ಕಳಿಗೆ ಬಳಸುವಂತಹ ರೂಪಗಳನ್ನು ಗುರುತಿಸಿ ಅವುಗಳನ್ನು ಸಂಗ್ರಹಿಸಲಾಗಿದೆ. ಬಳಕೆಯ ಹಿನ್ನಲೆಯನ್ನು ಆಧರಿಸಿ ಪ್ರಧಾನ ಗುಂಪುಗಳನ್ನಾಗಿ ವಿಂಗಡಿಸಿ ಪಟ್ಟಿಮಾಡಲಾಗಿದೆ.

ಶಿಶು ರೂಪಗಳು	ಸಾಮಾನ್ಯ ರೂಪ	ಶಿಶು ರೂಪಗಳು	ಸಾಮಾನ್ಯ ರೂಪ
ಅಚ್ಚಿ	ರೊಟ್ಟಿ	ಅಂದು	ಒಂದು
ಅಮ್ಮಿ	ಎಮ್ಮಿ	ಅಡ್ಡು	ಎರಡು
ಅಂಗ	ಹೆಂಗ	ಅತ್ತಿ	ಲತ್ತಿ
ಅಲ್ಲಿ	ಎಲ್ಲಿ	ಅಮ್ಮಾ	ಮೊಲೆಹಾಲು
ಆರು	ಯಾರು	ಆಕು	ಯಾಕು
ಆಡು	ಲಾಡು	ಆಬೂ	ಗಾಯ
ಇಮಾನ	ವಿಮಾನ	ಕೂಸು	ಮಗು
ಕಂದ	ಮಗು	ಗೂಕು	ಮಂಗ
ಗಲಗಲ್	ಭಿಕ್ಷುಕ	ಚಾಕು	ಸಾಕು
ಚಿಯಾ	ಮೌಂಸ	ಚುಪ್	ಸುಮನೆ
ಚೈಕಲ್	ಸೈಕಲ್	ಚುಂಬಳ	ಸುಂಬಳ
ಚಾಲಿ	ಶಾಲೆ	ಚಾರು	ಸಾರು
ಜೇಜಿ	ದೇವರು	ಜೋಜೋ	ತೊಟ್ಟಿಲು ತೂಗು
ಡಿರ್	ವಾಹನ	ತೀತಿ	ಕೋಳಿ
ತವ್ವಿ	ಸಪ್ಪೆ ಬ್ಯಾಳಿ	ಪೈಸಾ	ರೊಕ್ಕ
ಪಾಮು	ಮಗು	ಪುಗ್ಗಾ	ಲೂನ

ಶಿಶು ರೂಪಗಳು	ಸಾಮಾನ್ಯ ರೂಪ	ಶಿಶು ರೂಪಗಳು	ಸಾಮಾನ್ಯ ರೂಪ
ಪುಸ್ಸಿ	ಬೆಕ್ಕು	ಪಚಕೋ	ಮಲಗು
ಬೂ	ನೀರು	ಬಾವು	ಹಾವು
ಬೌವ್ವ	ಹುಳ	ಬುಜ್ಜಿ	ಮಗು
ಬೂರ್	ಊರಿಗೆ ಹೊಗ್ತಿನಿ	ಬಕರಿ	ರೊಟ್ಟಿ
ಬಾಡ	ಬೇಡ	ಬಾನಿ	ಬ್ಯಾನಿ
ಬುಸ್ಸಿ	ಸ್ನಾನ	ಹಾತ	ತಾತ
ಹಾಕ	ಕಾಕ	ಆತು	ಆಯಿತು
ಹೊತು	ಹೋಯಿತು	ಉಪಾಯಿ	ರೂಪಾಯಿ
ಬೂತು	ಬೂಟು	ಮುಲ್ಲು	ಮುಳ್ಳು
ಐಲುಗಾಡಿ	ರೈಲುಗಾಡಿ	ಅಬ್ಬಲ ಪೀಪಿ	ರಬ್ಬರ್ ಪೀಪಿ
ಕೂರು	ಕೂಡು	ತಾಟ	ಟಾಟಾ
ಪಾಂಟು	ಪ್ಯಾಂಟು	ಬಲ್ಲ	ಮುತ್ತುಕೊಡು
ಮುದ್ದು	ಮುತ್ತು, ಕಿಸ್‌ಕೊಡು	ಉಪಕೊಡು	ಪಪ್ಪಿಕೊಡು

ಅನುಕರಣವಾಚಿ ರೂಪಗಳು

ಅಂಬಾ	ಆಕಳು
ಕೌ ಕೌ	ಕಾಗೆ
ಚಿಂವ್‌ಚಿಂವ್	ಗುಬ್ಬಿ
ಪಂವ್‌ಪವ್	ವಾಹನ
ಮ್ಯಾಂವು	ಬೆಕ್ಕು
ಬುಸುಬುಸು	ಹಾವು
ಬೌ ಬೌ	ನಾಯಿ

ಸಂಯುಕ್ತ ರೂಪಗಳು

ಆಮಾಡು	ಬಾಯಿ ತೆರಿ

ಆಬೂ ಆಗ್ಯಾದ	ಗಾಯವಾಗಿದೆ
ಓಂ ಮಾಡು	ನಮಸ್ಕಾರ ಮಾಡು
ಕಕ್ಕುಮಾಡು	ವಾಂತಿಮಾಡು
ಥೂಮಾಡು	ಉಗಳು
ಸೂಮಾಡು	ಏಕಿಮಾಡು, ಉಚ್ಚೆಹೊಯ್ಯ
ಓನಾಗಿದೆ	ಏನಾಗಿದೆ

ಸಂಕ್ಷಿಪ್ತ ರೂಪಗಳು

ಚಾಕಿ	ಚಾಕ್ಲೆಟು
ಬಿಕ್ಕಿ	ಬಿಸ್ಕೆಟು
ಚುಚ್ಚಿ	ಸೂಜಿ

ಒಂದಕ್ಷರ ರೂಪಗಳು

ಬೂ	ನೀರು
ತಾ	ಕೊಡು

ಎರಡಕ್ಷರ ಶಿಶು ಭಾಷಾರೂಪಗಳು

ಅಂಬಾ	ಆಕಳು	ಅಚ್ಚಿ	ರೊಟ್ಟಿ
ಅಮ್ಮಾ	ಮೊಲೆಹಾಲು	ಅಂದು	ಒಂದು
ಅತ್ತಿ	ಲತ್ತಿ	ಅಮ್ಮಿ	ಎಮ್ಮಿ
ಅಲ್ಲಿ	ಎಲ್ಲಿ	ಅಂಗ	ಹೆಂಗ
ಅಡ್ಡು	ಎರಡು	ಆಕು	ಯಾಕು
ಆರು	ಯಾರು	ಆತು	ಆಯಿತು
ಆಬೂ	ಗಾಯ	ಆಡು	ಲಾಡು
ಉಮ್ಮಾ	ಊಟ	ಉಪ್	ಊದು
ಊಸ್	ಊದು	ಐನಾ	ಚೈನಾ
ಓನು	ಏನು	ಓಟು	ಏಟು

ಕೂಸು	ಮಗು	ಕಂದ	ಮಗು
ಗೂಕು	ಮಂಗ	ಚಾಕು	ಸಾಕು
ಚೋಪು	ಸೋಪು	ಚಾರು	ಸಾರು
ಚುಪ್	ಸುಮನೆ	ಚಾಲಿ	ಸಾಲಿ
ಚಾಕಿ	ಚಾಕ್ಲೆಟು	ಚುಚ್ಚಿ	ಸೂಜಿ
ಜೇಜಿ	ದೇವರು	ಜೋಜೋ	ತೂಗುವುದು
ಡೀರ್	ವಾಹನ	ತಾಟ	ಟಾಟಾ
ತೀತಿ	ಕೋಳಿ	ಪೈಸಾ	ರೊಕ್ಕ
ಪಪ್ಪಿ	ಮುತ್ತು	ಪಾಪು	ಮಗು
ಪುಗ್ಗಾ	ಬಲೂನ್	ಬಾವು	ಹಾವು
ಬೌವ್ವ	ದೆವ್ವ	ಬುಯಿ	ಊರಿಗೆ
ಬಿಕ್ಕಿ	ಬಿಸ್ಕೇಟು	ಬಾಡ	ಬ್ಯಾಡ
ಬಾನಿ	ಬ್ಯಾನಿ	ಬೂತು	ಬೂಟು
ಬಲ್ಲ	ಮುತ್ತು	ಹಣಿ	ಹಣ್ಣು

ಮೂರಾಕ್ಷರ ಶಿಶು ಭಾಷಾರೂಪಗಳು

ಆಮಾಡು	ಬಾಯಿತೆಗಿ
ಇಮಾನ	ವಿಮಾನ
ಉಪಾಯಿ	ರೂಪಾಯಿ
ಓಂಮಾಡು	ನಮಸ್ಕಾರ ಮಾಡು
ಚೈಕಲ್	ಸೈಕಲ್
ಚುಂಬಳ	ಸುಂಬಳ
ಡಿ ಒಡಿ	ಡಿಕ್ಕಿ ಹೊಡಿ
ಥೂಮಾಡು	ಉಗುಳು
ಪಚಕೋ	ಮಲಗು
ಬಕರಿ	ರೊಟ್ಟಿ

ನಾಲ್ಕಕ್ಷರ ಶಿಶುಭಾಷಾ ರೂಪಗಳು

ಉಪ್ಪಕೊಡು	ಮುದ್ದುಕೊಡು
ಕಕ್ಕುಮಾಡು	ವಾಂತಿಮಾಡು
ಐಲುಗಾಡಿ	ರೈಲುಗಾಡಿ
ಡಿಸಮ್ಮಾಡು	ಫೈಟಿಂಗ್ ಆಡುವುದು
ಪಾಯಿ ಪಾಯಿ	ನಡಿದಾಡುವದು
ಬುರುಬುರಿ	ಮಿರ್ಚಿ ಬಜ್ಜಿ
ರಿಂದನಕಟ್ಟೆ	ತುಳಸಿಕಟ್ಟೆ
ಶಂಬೋಮಾಡು	ನಮಸ್ಕಾರ ಮಾಡು

ಐದಕ್ಷರ ಶಿಶು ಭಾಷಾ ರೂಪಗಳು

ಆಕಾಶಗಾಡಿ	ವಿಮಾನ
ಅಂತರಗಾಡಿ	ವಿಮಾನ
ರಿಂದನಕಟ್ಟಿ	ತುಳಸಿಕಟ್ಟಿ

ಹ್ರಸ್ವ ಸ್ವರದಿಂದ ಪ್ರಾರಂಭವಾಗುವ ಶಿಶು ಭಾಷಾ ರೂಪಗಳು

ಅಂಬಾ = ಸ್ವ+ವ್ಯ+ವ್ಯ+ಸ್ವ(ದಿ)

ಅಜ್ಜಿ = ಸ್ವ+ವ್ಯ+ವ್ಯ+ಸ್ವ

ಅಮ್ಮಾ = ಸ್ವ+ವ್ಯ+ವ್ಯ+ಸ್ವ(ದಿ)

ಅಮ್ಮಿ = ಸ್ವ+ವ್ಯ+ವ್ಯ+ಸ್ವ

ಅಲ್ಲಿ = ಸ್ವ+ವ್ಯ+ವ್ಯ+ಸ್ವ

ಅತ್ತಿ = ಸ್ವ+ವ್ಯ+ವ್ಯ+ಸ್ವ

ಅಂಗ = ಸ್ವ+ವ್ಯ+ವ್ಯ+ಸ್ವ

ಇಸ್ಸಿ = ಸ್ವ+ವ್ಯ+ವ್ಯ+ಸ್ವ

ಇಮಾನ = ಸ್ವ+ವ್ಯ+ಸ್ವ(ಎ)ವ್ಯ+ಸ್ವ

ಉಮ್ಮಾ = ಸ್ವ+ವ್ಯ+ವ್ಯ+ಸ್ವ(ದಿ)

ಊಪ್ = ಸ್ವ(ಎ)+ವ್ಯ+ಸ್ವ

ಉಪಾಯಿ = ಸ್ವ+ವ್ಯ+ಸ್ವ(ದಿ)ವ್ಯ+ಸ್ವ

ದೀರ್ಘ ಸ್ವರದಿಂದ ಪ್ರಾರಂಭವಾಗಲು ರೂಪಗಳು

ಆಡು = ಸ್ವ(ದಿ)+ವ್ಯ+ಸ್ವ

ಆಕು = ಸ್ವ(ದಿ)+ವ್ಯ+ಸ್ವ

ಆರು = ಸ್ವ(ದಿ)+ವ್ಯ+ಸ್ವ

ಆಬೂ = ಸ್ವ(ದಿ)+ವ್ಯ+ಸ್ವ(ದಿ)

ಆಡು = ಸ್ವ(ದಿ)+ವ್ಯ+ಸ್ವ

ಆಮಾಡು = ಸ್ವ(ದಿ)+ವ್ಯ+ಸ್ವ(ದಿ)ವ್ಯ+ಸ್ವ

ಓನು = ಸ್ವ(ದಿ)+ವ್ಯ+ಸ್ವ

ಓಟು = ಸ್ವ(ದಿ)+ವ್ಯ+ಸ್ವ

ಆಡು = ಸ್ವ(ದಿ)+ವ್ಯ+ಸ್ವ

ಊಪ್ = ಸ್ವ(ದಿ)+ವ್ಯ+ಸ್ವ

ಐನಾ = ಸ್ವ(ದಿ)+ವ್ಯ+ಸ್ವ(ದಿ)

ವ್ಯಂಜನ ಹ್ರಸ್ವ ಸ್ವರದಿಂದ ಪ್ರಾರಂಭವಾಗುವ ರೂಪಗಳು

ಕಕ್ಕುಮಾಡು = ವ್ಯ+ಸ್ವ+ವ್ಯ+ವ್ಯ+ಸ್ವ(ದಿ)+ವ್ಯ+ಸ್ವ

ಕಂದ = ವ್ಯ+ಸ್ವ+ವ್ಯ+ವ್ಯ+ಸ್ವ

ಗಲ್‌ಗಲ್ = ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ

ಚಿಯಾ = ವ್ಯ+ಸ್ವ+ವ್ಯ+ಸ್ವ(ದಿ)

ಚುಪ್ = ವ್ಯ+ಸ್ವ+ವ್ಯ+ಸ್ವ

ಚುಚ್ಚಿ = ವ್ಯ+ಸ್ವ+ವ್ಯ+ವ್ಯ+ಸ್ವ

ಚುಮ್ಮ = ವ್ಯ+ಸ್ವ+ವ್ಯ+ವ್ಯ+ಸ್ವ

ಚುಂಬಳ = ವ್ಯ+ಸ್ವ+ವ್ಯ+ವ್ಯ+ಸ್ವ+ವ್ಯ+ಸ್ವ

ಚೈಕಲ್ = ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ

ಡಿಸಮ್ಮಾಡು = ವ್ಯ+ಸ್ವ+ವ್ಯ+ವ್ಯ+ಸ್ವ+ವ್ಯ+ಸ್ವ(ದಿ)+ವ್ಯ+ಸ್ವ

ಡಿ ಒಡಿ = ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ

ತಪ್ಪಿ = ವ್ಯ+ಸ್ವ+ವ್ಯ+ವ್ಯ+ಸ್ವ

ಮಸ್ತಿ = ವ್ಯ+ಸ್ವ+ವ್ಯ+ವ್ಯ+ಸ್ವ

ಪೈಸಾ = ವ್ಯ+ಸ್ವ+ವ್ಯ+ಸ್ವ(ದಿ)

ಮಗ್ಗಾ = ವ್ಯ+ಸ್ವ+ವ್ಯ+ವ್ಯ+ಸ್ವ(ದಿ)

ಪಚಕೋ = ವ್ಯ+ಸ್ವ+ವ್ಯ+ಸ್ವ ವ್ಯ+ಸ್ವ(ದಿ)

ಬುಸ್ಸಿ = ವ್ಯ+ಸ್ವ+ವ್ಯ+ವ್ಯ+ಸ್ವ

ಬುಜ್ಜಿ = ವ್ಯ+ಸ್ವ+ವ್ಯ+ವ್ಯ+ಸ್ವ

ಬಿಯಿ = ವ್ಯ+ಸ್ವ+ವ್ಯ+ಸ್ವ

ಬಲ್ಲ = ವ್ಯ+ಸ್ವ+ವ್ಯ+ವ್ಯ+ಸ್ವ

ಬಕರಿ = ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ

ಬುಸುಬುಸು = ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ

ಬುರುಬುರಿ = ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ

ಮುಲ್ಲು = ವ್ಯ+ಸ್ವ+ವ್ಯ+ವ್ಯ+ಸ್ವ

ಶಂಬೊಮಾಡು = ವ್ಯ+ಸ್ವ+ವ್ಯ+ವ್ಯ+ಸ್ವ+ವ್ಯ+ಸ್ವ(ದಿ)+ಸ್ವ

ರಿಂದನಕಟ್ಟಿ = ವ್ಯ+ಸ್ವ+ವ್ಯ+ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ+ವ್ಯ+ವ್ಯ+ಸ್ವ

ವ್ಯಂಜನ ದೀರ್ಘಸ್ವರದಿಂದ ಪ್ರಾರಂಭವಾಗುವ ರೂಪಗಳು

ಕೂಸು = ವ್ಯ+ಸ್ವ(ದಿ)+ವ್ಯ+ಸ್ವ

ಕೌ ಕೌ = ವ್ಯ+ಸ್ವ(ದಿ)+ವ್ಯ+ಸ್ವ(ದಿ)

ಚಾಕು = ವ್ಯ+ಸ್ವ(ದಿ)+ವ್ಯ+ಸ್ವ

ಚಾಲಿ = ವ್ಯ+ಸ್ವ(ದಿ)+ವ್ಯ+ಸ್ವ

ಚಾಕು = ವ್ಯ+ಸ್ವ(ದಿ)+ವ್ಯ+ಸ್ವ

ಚಾರು = ವ್ಯ+ಸ್ವ(ದಿ)+ವ್ಯ+ಸ್ವ

ಜೇಜಿ = ವ್ಯ+ಸ್ವ(ದಿ)+ವ್ಯ+ಸ್ವ

ಜೋಜೋ = ವ್ಯ+ಸ್ವ(ದಿ)+ವ್ಯ+ಸ್ವ(ದಿ)

ತೀತಿ = ವ್ಯ+ಸ್ವ(ದಿ)+ವ್ಯ+ಸ್ವ

ಥೂಮಾಡು = ವ್ಯ+ಸ್ವ(ದಿ)+ವ್ಯ+ಸ್ವ(ದಿ)+ವ್ಯ+ಸ್ವ

ಪಾಯಿಪಾಯಿ = ವ್ಯ+ಸ್ವ(ದಿ)+ವ್ಯ+ಸ್ವ ವ್ಯ+ಸ್ವ(ದಿ)+ವ್ಯ+ಸ್ವ

ಪಾಪು = ವ್ಯ+ಸ್ವ(ದಿ)+ವ್ಯ+ಸ್ವ

ಬಾವು = ವ್ಯ+ಸ್ವ(ದಿ)+ವ್ಯ+ಸ್ವ

ಬೌವು = ವ್ಯ+ಸ್ವ(ದಿ)+ವ್ಯ+ಸ್ವ

ಬಾಡ = ವ್ಯ+ಸ್ವ(ದಿ)+ವ್ಯ+ಸ್ವ

ಬಾನಿ = ವ್ಯ+ಸ್ವ(ದಿ)+ವ್ಯ+ಸ್ವ

ಬೂತು = ವ್ಯ+ಸ್ವ(ದಿ)+ವ್ಯ+ಸ್ವ

ಬೌ ಬೌ = ವ್ಯ+ಸ್ವ(ದಿ)+ವ್ಯ+ಸ್ವ(ದಿ)

ಬೂ = ವ್ಯ+ಸ್ವ(ದಿ)

ಸೂಮಾಡು = ವ್ಯ+ಸ್ವ(ದಿ)+ವ್ಯ+ಸ್ವ(ದಿ)+ವ್ಯ+ವ್ಯ

ಹಾಕ = ವ್ಯ+ಸ್ವ(ದಿ)+ವ್ಯ+ಸ್ವ

ಪದಾಂತ್ಯ ದೀರ್ಘಸ್ವರದಿಂದ ಕೊನೆಗೊಂಡ ರೂಪ

ಅಂಬಾ = ಸ್ವ+ವ್ಯ+ವ್ಯ+ಸ್ವ(ದಿ)

ಅಮ್ಮಾ = ಸ್ವ+ವ್ಯ+ವ್ಯ+ಸ್ವ(ದಿ)

ಆಬೂ = ಸ್ವ(ದಿ)+ವ್ಯ+ಸ್ವ(ದಿ)

ಉಮ್ಮಾ = ಸ್ವ+ವ್ಯ+ವ್ಯ+ಸ್ವ(ದಿ)

ಐನಾ = ಸ್ವ+ವ್ಯ+ಸ್ವ(ದಿ)

ಕೌ ಕೌ = ವ್ಯ+ಸ್ವ(ದಿ)+ವ್ಯ+ಸ್ವ(ದಿ)

ಚಿಯಾ = ವ್ಯ+ಸ್ವ+ವ್ಯ+ಸ್ವ(ದಿ)

ಜೋಜೋ = ವ್ಯ+ಸ್ವ(ದಿ)+ವ್ಯ+ಸ್ವ(ದಿ)

ಪುಗ್ಗಾ = ವ್ಯ+ಸ್ವ+ವ್ಯ+ವ್ಯ+ಸ್ವ(ದಿ)

ಪಚಕೋ = ವ್ಯ+ಸ್ವ+ವ್ಯ+ಸ್ವ+ವ್ಯ+ಸ್ವ(ದಿ)

ಬೌ ಬೌ = ವ್ಯ+ಸ್ವ(ದಿ)+ವ್ಯ+ಸ್ವ(ದಿ)

ಪದಾದಿಯ ಸ್ವರ ಬದಲಾವಣೆ

ಅಮ್ಮಿ > ಎಮ್ಮಿ

ಅಲ್ಲಿ > ಎಲ್ಲಿ

ಆಡ್ಡು > ಎರಡು

ಅಂದು > ಒಂದು

ಅಂಬಾ > ಆಕಳು

ಊಪ > ಉದು

ಓನು > ಏನು

ಓಟು > ಏಟು

ಪದಾದಿಯ ವ್ಯಂಜನ ಬದಲಾವಣೆ

ಚುಂಬಳ > ಸುಂಬಳ

ಚಾಕು > ಸಾಕು

ಚೋಪು > ಸೋಪು

ಚುಪ್ > ಸುಮನೆ

ಚಾಲಿ > ಶಾಲೆ

ಚೂಜಿ > ಸೂಜಿ

ಚಾಲಿ > ಶಾಲೆ

ಚೈಕಲ್ > ಸೈಕಲ್

ಹಾಕ > ಕಾಕ

ಹಾತ > ತಾತ

ಬಾವು > ಹಾವು

ಬೌವ್ವ > ದೆವ್ವ

ಪದಾದಿಯ ವ್ಯಂಜನ ಲೋಪಗೊಂಡಿರುವ ರೂಪ

ಆಕು > ಯಾಕು

ಆರು > ಯಾರು

ಒಕ್ಕ > ರೊಕ್ಕ

ಇಮಾನ > ವಿಮಾನ

ಉಪ್ > ಚುಪ್

ಒಟ್ಟಿ > ರೊಟ್ಟಿ

ಅತ್ತಿ > ಲತ್ತಿ

ಉಪಾಯ > ರೂಪಾಯಿ

ಅಬ್ಬಲ > ರಬ್ಬರ್

ಪದಾಂತ್ಯ ವ್ಯಂಜನಗಳ ಬದಲಾವಣೆ

ಬೂತು > ಬೂಟು

ಮುಲ್ಲು > ಮುಳ್ಳು

ಕೂರ > ಕೂಡು

ನಲಾ > ನಳು

ಪದಾದಿಯ ದ್ವಿತ್ವ ಲೋಪಗೊಂಡಿರುವ ರೂಪಗಳು

ಪಾಂಟು > ಪ್ಯಾಂಟು

ಬಾನಿ > ಬ್ಯಾನಿ

ಬಾಡ > ಬ್ಯಾಡ

ಪದಾಂತ್ಯ ದೀರ್ಘಸ್ವರಗೊಂಡಿರುವ ರೂಪಗಳು

ಅಂಬಾ > ಆಕಳು

ಉಮ್ಮಾ > ಊಟ

ಒಕ್ಕ > ರೊಕ್ಕ

ಚಿಯಾ > ಮೌಂಸ

ಪೈಸಾ > ರೊಕ್ಕ

ಪಚಕೋ > ಮಲಗು

ಒಟ್ಟಾರೆ ಶಿಶು ಭಾಷಾರೂಪಗಳು

ಅಂಬಾ (ಆಕಳು, ಹಸು, ದನ)	ಅಡ್ಡು (ಎರಡು)
ಅಚ್ಚಿ (ರೊಟ್ಟಿ)	ಅಮ್ಮಾ (ಮೊಲೆಹಾಲು)
ಅಂದು (ಒಂದು)	ಅಲ್ಲಿ (ಎಲ್ಲಿ)
ಅತ್ತಿ (ಲತ್ತಿ)	ಅಮ್ಮಿ (ಎಮ್ಮಿ)
ಅಂಗ (ಹೆಂಗ)	ಅಂತರಗಾಡಿ / ಆಕಾಶಗಾಡಿ (ವಿಮಾನ)
ಅಬ್ಬಲ (ರಬ್ಬಲ್)	ಆರು (ಯಾರು)
ಆಕು (ಯಾಕು)	ಆತು (ಆಯಿತು)
ಆಡು (ಲಾಡು)	ಆಬೂ (ಗಾಯ)
ಇಸ್ಸಿ (ಟಾಯ್ಲೆಟ್)	ಇಮಾನ (ವಿಮಾನ)
ಉಪ್ಪಕೊಡು (ಮುತ್ತುಕೊಡು)	ಉಮ್ಮಾ (ಊಟ)
ಊಪ (ರೂಪಾಯಿ)	ಊಪ್ (ಊದು)
ಊಸ್ (ಊದು)	ಐನಾ (ಚೈನಾ)
ಓನು (ಏನು)	ಐಲುಗಾಡಿ (ರೈಲುಗಾಡಿ)
ಓಟು (ಏಟು)	ಓನಾತು (ಏನಾಯಿತು)
ಓಂಮಾಡು (ನಮಸ್ಕಾರಮಾಡು)	ಕೂಸು (ಮಗು)
ಕೌ ಕೌ (ಕಾಗೆ)	ಕಂದ (ಮಗು)
ಕಕ್ಕಮಾಡು (ವಾಂತಿಮಾಡು)	ಗಲ್‌ಗಲ್ (ಭಿಕ್ಷುಕ)
ಗೂಕು (ಮಂಗ)	ಚಾಕು (ಸಾಕು)
ಚಾರು (ಸಾರು)	ಚಿಂವ್‌ಚಿಂವ್ (ಗುಬ್ಬಿ)
ಚುಂಬಳಿ (ಸುಂಬಳ)	ಚೈಕಲ್ (ಸೈಕಲ್)
ಚುಪ್ (ಸುಮನೆ)	ಚುಚ್ಚಿ (ಸೂಜಿ)

ಚಾಲಿ (ಶಾಲೆ)	ಚಾಕಿ (ಚಾಕ್ಲೇಟು)
ಚೂಜಿ (ಸೂಜಿ)	ಚುಚ್ಚಿ (ಸೂಜಿ)
ಚಿನ್ನ (ಮಗು)	ಚಾಲಿ (ಶಾಲೆ)
ಜೇಜಿ (ದೇವರು)	ಜೋಜೋ (ತೂಗುವುದು)
ಡಿರ್ ಬುರ್ (ವಾಹನ)	ಡಿ ಒಡಿ (ಡಿಕ್ಕಿ ಹೊಡಿ)
ತಪ್ಪಿ (ಸಪ್ಪೆ ಬ್ಯಾಳಿ)	ತೀತಿ (ಕೋಳಿ)
ತಾಟ (ಟಾಟಾ)	ಥೂಮಾಡು (ಉಗುಳು)
ಪೈಸಾ (ರೊಕ್ಕ)	ಪಾಪು (ಮಗು)
ಪಪ್ಪಿ (ಮುತ್ತು)	ಪುಗ್ಗಾ (ಬಲೂನ)
ಪುಸಾ (ರೊಕ್ಕ)	ಪುಸ್ಸಿ (ಬೆಕ್ಕು)
ಪಾಯಿಪಾಯಿ (ನಡಿದಾಡು)	ಬಾವು (ಹಾವು)
ಬೌವ್ವ (ದೆವ್ವ)	ಬೂತು (ಬೂಟು)
ಬುಜ್ಜಿ (ಪಾಪು)	ಬುಸ್ಸಿ (ಸ್ನಾನ)
ಬಲ್ಲ (ಮುತ್ತು)	ಬಾಡ (ಬ್ಯಾಡ)
ಬಾನಿ (ಬ್ಯಾನಿ)	ಬಿಯ (ಊರಿಗೆ)
ಬಿಕ್ಕಿ (ಬಿಸ್ಕೀಟು)	ಬೂ (ನೀರು)
ಬುರುಬುರಿ (ಬಜ್ಜಿ)	ಬುಸುಬುಸು (ಹಾವು)
ಬೌ ಬೌ (ನಾಯಿ)	ಬಕರಿ (ರೊಟ್ಟಿ)
ಮುಲ್ಲು (ಮುಳ್ಳು)	ಮುದ್ದ (ಮುತ್ತು)
ಮ್ಯಾಂವು (ಬೆಕ್ಕು)	ಹಣಿ (ಹಣ್ಣು)
ಹಾಕ (ಕಾಕ)	ಹಾತ (ತಾತ)
ರಿಂದನಕಟ್ಟಿ (ತುಳಸಿಕಟ್ಟೆ)	ಸೂಮಾಡು (ಏಕಿಮಾಡು, ಉಚ್ಚಿಮಾಡು)
ಶಂಬೋಮಾಡು (ನಮಸ್ಕಾರಮಾಡು)	ಚಿಯಾ (ಮಾಂಸ)

೨. ಶಿಶುವಿನ ಹಾಡುಗಳು

೧. ಮಲಗಯ್ಯ ಕಂದ ನೀನ ಮಾತು ಚಂದ ಮನೆ
ಮನ ಬೆಳಗುವ ಹುಣ್ಣಿಮೆಯ ಚಂದ್ರ ॥ ಪ ॥
ಹುಟ್ಟಿದ ಮನೆಯ ಬೆಳಗಲ್ಲು ಬಂದೆ ಕಷ್ಟಗಳೆಲ್ಲ
ಕಡಿಗಾದ ಏಂದು ಶ್ರೇಷ್ಠ ಎನ್ನ ಬಾಲ ಅರವಿಂದ
ಬಟ್ಟಲ ಹಾಲು ಕುಡಿಸುವೆ ಕಂದ
ಮಲಗಯ್ಯ ಕಂದ ನೀನ ಮಾತು ಚಂದ ಮನೆ ಮನ
ಬೆಳಗುವ ಹುಣ್ಣಿಮೆಯ ಚಂದ್ರ

ಪಡೆದಂತ ತಂದೆಗೆ ಆನಂದ ನೀಡು ಒಡಹುಟ್ಟಿದವರ
ಪ್ರೇಮದಿ ನೋಡು ಹಡೆದ್ವಳಾನು ಜೋಪನ
ಮಾಡು ದಡ ವೀರರಲ್ಲಿ ಧರ್ಮದ ದಾರಿ ನೋಡು
ಮಲಗಯ್ಯ ಕಂದ ನೀನ ಮಾತು ಚಂದ...

ವರಪುತ್ರ ನೀನು ಹರಸುವೇನು ನಾನು ಚೀರ
ಕೀರ್ತಿಶಾಲಿ ಆಗಲೆಂದು ಪರಶಿವನ
ನಿನಗೆ ಆಯುಶ್ಯವನ್ನು ಕರುಣಿಸಲೆಂದು
ಬೇಡುವೆ ನಾನು ಮಲಗಯ್ಯ ಕಂದ
ನಿನ ಮಾತು ಚಂದ ಮನೆ ಮನ
ಬೆಳಗುವ ಹುಣ್ಣಿಮೆಯ ಚಂದ್ರ

೨. ಕಂದನ ಕೊಡು ಶಿವನೆ ಹಂಗಿನ ಅನ್ನ ಊಣ
ಲಾರೆ ಹಂಗಿನ ಅನ್ನ ಊಣಲಾರೆ
ಬಂಜೆಬ್ಬ ಶಬ್ಧ ಹೋರಲಾರೆ

ಬಾಲ ನೀಲ್ಲದ ಮ್ಯಲೆ ಬಾಳಿದಯಾತ್ಯರ
ಜನ್ಮ ಬಾಡಿಗೆ ಎತ್ತು ದುಡಿದಾಂಗ
ಬಾಳೆಲೆ ಹಾಸುಡು ಬಿಸಿ ಒಗೆದಂಗ
ಆಕಳ ಕರಬಿಟ್ಟು ನಾಲ್ಕು ಮೂಲಿಗೆ ನಿಂತ

ಯಾಕೆ ಗೊಂಪ್ಪಮ ತರವಲ್ಲ ನನ್ನ ಕಂದ
ಹಾಲಿಲ್ಲದ ಅನ್ನ ಊಣುವಲ್ಲ

ಮೂರನೇ ಸಂಜಿನ ಮುತ್ತೈದಿ ಬಾಯಿಲ್ಲಿ
ಕೇಳಿ ಬಾ ನನ್ನ ಕಂದ ವಚನವ
ಕೇಳಿ ಬಾ ಕಂದ ವಚನವ ತಾಯತ್ವ
ಮುತ್ತಿನ ಅಂತ ವಾಕ್ಯ ನುಡಿದಾಳೆ

೩. ಹಾಲೊಂದು ಒಲ್ಲಿ ಮೇಲ ನೀರೊಂದ
ಒಲ್ಲಿ ಮೇಲ ಆಡ ಕಂದ ತೋಡಿ
ಮೇಲೆ ಇದ್ದರೆ ಹಾಲಂತ ತವರ ಮರೆತನ

೪. ಸಕ್ಕರೆ ಸವಿದಾರ ವಿಳಾದ ರುಚಿಬಾರ
ವೀರಭದ್ರನ ಅವತಾರ ಕಂದಯ್ಯ
ವೀರಭದ್ರನ ಅವತಾರ ನನ್ನ ಕಂದ
ಜಯವಂತನಾಗಿ ಬೆಳೆಯಲ್ಲಿ

೫. ಎಲ್ಲರ ಇರಲ್ವ ಹೂ ಆಗಿ ಬೆಳಿಲಲ್ವ
ನೇಲಿ ಬಡ್ಯಾಗ ಚಿಗಿಯಲಿ ಜಯ
ವಂತನಾಗಿ ಚಿಗಿಯಲಿ

೬. ಯಾಕೆ ಅಳತಾನಂತ ಎಲ್ಲರು
ಕೇಳತಾರ ಕಾಯಲದ ಹಾಲ ಕೇನಿ
ಬೇಡಿ ಅಂತರ ನನ್ನ ಕಂದ
ಹವಳದ ಮುತ್ತ ಸುರಿದಾಂಗ

೭. ದೇಶಕ್ಕೆ ಹೆಸರಾದ ಹೆಬ್ಬಾಳ ಊರ
ಅದರೊಳಗೊಬ್ಬಿದ ಸಾಧು ಬಸವಣ್ಣ
ಹಿಂಗ ಸಂತ್ರಲಯದೊಳು ನಿತ್ಯ
ಮಾಡ್ಯಾರ ಭಜನ ಜೊ... ಜೊ...

ನಾಗೂರ ಗ್ರಾಮ ಜನ್ಮ ಸತಿ ಅವನ
ಬೆನ್ನ ಹತ್ತಿ ಬಂದೆನಿತ್ತಾಳ, ಗಂಡ

ಹೆಂಡರು ಕೂಡಿ ಮಾಡ್ಯಾರ ಭಜನಿ
ಹಿಂಗ ಸಂತ್ರಲಯದೊಳು ನಿತ್ಯ ಮಾಡ್ತಾ
ಭಜನ ಜೊ.... ಜೊ.....

ಹೆಣ್ಣಿಲ್ಲದ ಗೌಡರಗಿ ಹೆಣ್ಣಕೊಟ್ಟರ
ಗಂಡಿಲದ ಸೌಕಾರಗ ಗಂಡ ಕೊಟ್ಟಾರ
ಅವರ ಇಬ್ಬರ ನಡುವೆ ಊಟ
ಬಿಟ್ಟಾರ ಹಿಂಗ ಸಂತ್ರಲಯದೊಲು
ನಿತ್ಯ ಮಾಡ್ಯರ ಭಜನ ಜೋ... ಒ...

೮. ತೂಗಿರಿ ರನ್ನನ ತೂಗಿರಿ ಚಿನ್ನನ
ತೂಗಿರಿ ಎಚ್ಚ ಕರಕಾರ
ತೂಗಿಸಿ ಕರಕಾರ ಒಪ್ಪೆನ ಭಾಗ್ಯವಂತರೆಲ್ಲ
ತೂಗಿರಿ ನೀವು ತೂಗಿರೆ

ಮಲ್ಲಿಗೆ ಹೂವ ಚೆಲ್ಲುತ ಬರುವಾಗ
ಕಲ್ಯಾಣ ದೇಶದವರು ಕಾಡಿಹರೆ
ಕಲ್ಯಾಣ ದೇಶವರು ಕಡಿಯವರು ಬರುವಾಗ
ಚನ್ನ ಮಲ್ಲೇಶನ ತೂಗಿರೆ ನೀವು ತೂಗಿರೆ

ಸಂಪಿಗೆ ಹೂವ ಹಂಚ್ಚುತ ಬರುವಾಗ
ಕಲ್ಯಾಣ ದೇಶವರು ಕಾಡಿಹರೆ ಕಲ್ಯಾಣ
ದೇಶವರು ಕಡಿಯವರು ಬರುವಾಗ
ಹಂಪಿ ವೀರಪಾಕ್ಷನ ತೂಗಿರೆ ನೀವು ತೂಗಿರೆ

ಕೂಸಿನ ತೊಟ್ಟಲಿಗೆ ಎಸೊಂದು ಮಿಣಿಹಗ್ಗ
ಸಾಸನ ಸರವೆಂದು ಬರುವಾಗ ತೂಗಿರೆ
ನೀವು ತೂಗಿರೆ ಸಾಸನ ಸರವೆದು ಬರುವಾಗ
ದೇಸಾಯಿ ತೊಟ್ಟಿಲ ತೂಗಿರೆ ನೀವು ತೂಗಿರೆ

೯. ಹಾಲ ಬೇಡಿ ಹರದಾಗೆ
ಕೋಲ ಬೇಡಿ ಕುಣಿದಾನೆ
ಮೊಸರ ಬೇಡಿ ಕೆಸರ ತುಳಿದಾನೆ
ನಮ್ಮ ಕೃಷ್ಣನ ಕೂಸಲಾದ ಗೆಜ್ಜೆ ಕೆಸರಾಗೆ

೧೦. ಹಾಲ ಕುಡಿಯುವ ಹಕ್ಕಿ ನೀರ
ಕುಡಿಯುವ ಗುಬ್ಬಿ ತುಪ್ಪವ
ಕುಡಿಯೋ ಶ್ರೀಕೃಷ್ಣ

೧೧. ಅಳವ ಕೂಸಿನ ಬಿಟ್ಟು ಓಡಿ ಹೊಳಿಯಕ್ಕೆ
ಹೋಗಿ ಮಣಿ ಮಣಿ ಲೇರಡು ದಿಮಕ್ಕವ
ಹಾಕಿದರ ಅಳುವದ ಬಿಟ್ಟು ನಗತ್ತಾನೆ

೧೨. ಅಳವ ಕೂಸಿನ ಬಿಟ್ಟು ಹೊಳೆಯ
ನೀರಿಗೆ ಹೊದ ಅಳಬೇಡ ರಾಮ
ಲಕ್ಷ್ಮಣ ಹೊಳಿ ನೀರಿಗೆ ಹೋಗಿ ತಡದಾಲೊ

೧೩. ಹಾಲ ಕೂಡಿದ ಬೆಕ್ಕ ತಳ್ಯಾಗ ಮನಗ್ಯಾದ
ಬಾಳೆಂತ ಕಣ್ಣ ಬಿಡತಾದೆ
ನಮ್ಮ ಕೃಷ್ಣಯಾಳ್ಯಾದ ನಿದ್ದಿ ಕೆಡಸ್ಯಾದೆ

೧೪. ಅತ್ತರ ಅಳುವನಲ್ಲೆ ಹಸ್ತರೊಬ್ಬನಲೆ
ಲಕ್ಷಣವಂತ ಗುಣವಂತ ನಮ್ಮ
ಕೃಷ್ಣನಂತೊರು ಮಕ್ಕಳಿರಬೇಕ
ಮನಿ ತುಂಬಾ

೧೫. ಯಾಕಳತೆ ನನ್ನ ಏಕು ಬಾಳೆಯ ಹಣ್ಣ
ನಾಕೊಂಡು ಕೊಡುವೆ ನಿನಗೊಂದು
ಕಲಬುರ್ಗಿ ನಾಲ್ಕು ಬಾಜಾರದ ಲಾರ್ಬನ

೧೬. ಮುದ್ದನ ಮುಡಿ ಅಂಗಿ, ವಜ್ರದ
ಕಸಿ ಅಂಗಿ, ಮುದ್ದೆ ಸೊನಮ್ಮ
ತೊಡುವಂಗಿ ವಜ್ರದ ಪ್ಯಾಜ್ಯಗ ಒಳಗೆಲ್ಲ

೧೭. ಹೊಳು ಆಯಿ ಬೊಳ್ಳೊಳಿ ಕಾಯಮ್ಮ

ಹಳಾದ ಅಂಚ್ಟಲಿ ಅವರಾಯಿ
ಹಳಾದ ಅಂಚ್ಟಲಿ ಅವರಾಯಿ ನೆಳುತೆ
ನೀರ ತರುತ್ತಾಳೆ

೧೮. ಕಂದಮ್ಮ ಅಳತಾದಂತ ಬಂದಿದ
ಹೊರ್‍ಯಾಕ, ನೀಲಿ ಹೊತ್ತಿಗೆ
ತೆಗೆಸಿದ ನೀಲಿ ಹೊತ್ತಿಗೆ ತೆಗಸಿ
ನೋಡಿದರ ತಂದಿ ಮನಿ ಹಿರೋಡ್ಯಾ

೧೯. ಅಣ್ಣ ತಮ್ಮರು ನೀವು ಹೊಂದಿ
ನೀಲ ಬೇಡಿ ಮಂದಿಯ ಕಣ್ಣು ನಿಮ್ಮ
ಮ್ಯಾಲ ಮಂದಿಯ ಕಣ್ಣು ನಿಮ್ಮ
ಮ್ಯಾಲೆ ವಿಶ್ವನಾಥ ತಮ್ಮಗೆ ತೊಳು ಮರಿಮಾಡೊ

೨೦. ಅಣ್ಣ ತಮ್ಮರು ಬ್ಯಾಟ್ಯಾಡಿ ಬರುವಾಗ
ತಮ್ಮ ತಾಯಮ್ಮ ಯಾಲಕ್ಕಿ ದೃಷ್ಟಿ ತೆಗೆದಾಳ

೨೧. ಅಣ್ಣ ಮಾಡಿದ ಹೋಲ ತಮ್ಮ ನೋಡಲು ಹೋದ
ಬನ್ನಿ ಗಿಡದ ಹೊಲ ಬಲೆ ಜ್ವಾಳ ಬನ್ನಿಗಿಡದ
ಹೊಲ ಬಲೆ ಜೋಳ ಅನಿಲ ಬಂಡಿಲಿ
ಮದನ ಹೋಡಿದ್ದಾನೆ.

೨೨. ಬೆಳನ ಬಿಳಿ ಎತ್ತ ಬಲವರ
ಮನಿ ಮುಂದ, ಮಲ್ಲಿಗೆ ನೀಡಕ
ತಳಕ್ಯಾರೆ, ಮಲ್ಲಿಗೆ ಗೀಡಕ
ಬಲೆವನ ಬಂಡಿ ಮದಲಂತಾ

೨೩. ಬೆಳ್ಳಾನ ಬಿಳಿ ಎತ್ತ ಬ್ಯಾರ್‍ಯಾಕ
ಮೈದಾವೆ, ಬ್ಯಾರಾಗೆರನ
ತವರವರು, ಬ್ಯಾರಾಗೆರೆನ ತವರವರ
ಹೊಲದಾಗ ಜೊಡ ಕೂರಗಿ ನಡದಾವೆ

೨೪.	ಹಾಲುಂಡ ತವರಿಗೆ ಎನ್ನತ
ಹಾಡಲಿ ನೀರುಂಡ ನಿಂ ಬಿಗಿಯಲಿ
ನೀರುಂಡ ನಿಂಬೆ ಬಿಗಿಲೆ ಶರಣನ
ಹಾಲುಕ್ಕಿ ಹಳ್ಳ ಹರಿಯಲೆ

೨೫.	ಚೂಂಚೂರು ಮುಂದಿರುವ ಕೆಂಚ್ಚ
ಮಾಪುರ ತಾಯಿ ಸಂತೋಷ ಕೊಡು
ನನ್ನ ತವರಿಗೆ ಸಂತೋಷ ಕೊಡು
ತವರಿಗೆ ಕಂಚಿನ ಆರುತಿ ಬೆಳಗುವೆ

೨೬.	ಎಲ್ಲವರ ಗುರುವಿಗೆ, ಬೆಲ್ಲ ಪತ್ರಿ
ಹೂವು, ಒಳ್ಳೆಯ ತವರವ
ಮಲ್ಲಿಗೆ ಹೂವಿಲಿ ಶಿವಪೂಜೆ

೨೭.	ಕರಿಯ ಕಂಬಳಿ ನನ್ನ ಗುರುವಿನ
ಗದ್ದಿಗೆ ಶಿರವಾಳ ಹೂವ ಶಿವಪೂಜೆ
ಶಿರವಾಳ ಹೂವ ಶಿವಪೂಜೆ ಮಾಡಿ
ಕೊಂಬೋ ಶರಮೂರ್ತಿ
ನಮ್ಮ ಗುರುಸ್ವಾಮಿ

೨೮.	ಅಳ ಬೇಡ ಅಂದರ ಚಲಮಾಡಿ
ಅಳತಾನೆ ಹವಳಾದ ಜ್ವಲ
ಸುರಿದಾವೆ ನಮ್ಮ ವಾಸುದೇವಗ
ಹಗಲೆಲಿ ತರಲೆವ್ವ ನರಿಹಾಲ

೨೯.	ಕೂಸಿನ ಗೆಜ್ಜೆ ಸಪ್ಪಳವ ಕೇಳಿ
ದಿಂಬಣದ ಎತ್ತ ಬೆದರ್ಯಾವೆ
ದಿಂಬಣದ ಎತ್ತ ಬೆದರ್ಯಾವೆ
ನಮ್ಮ ಮನಿಯ ಮದ್ಯಾನದ ಮೆವ ಮರತಾವೆ

ತೊಟ್ಟಿಲದಾಗ ಹಾಕುವ ಹಾಡು

ನೀರಾಗ ನೆಳ್ಳ ನೋಡಿ ಸೂರ್ಯ ಚಂದ್ರನ ಬೇಡಿ
ಅದರಂತೆ ತಾ ಬೇಡಿ ಹೋರಾಡಿ ಅಳತಾನ ಜೊ... ಜೊ...

ಹಸಿರಂಗಿ ಉಡಿಸಿದ ಹಲಗಡಗ ಹಾಕಿ
ಆಡು ಮಕ್ಕಳಗೂಡ ಜೊತೆಮಾಡಿ ಕಳವಿದೆ ಜೊ... ಜೊ....

ಬಿಳಿ ಅಂಗಿ ಉಡಿಸಿದ ಬಿಂದೂಲಿ ಹಾಕಿ
ಸಾಲಿ ಮಕ್ಕಳಗೂಡ ಜೊತೆಮಾಡಿ ಕಳವಿದ ಜೊ.... ಜೊ....

ಬಂಗಾರದ ಸಿಂಪ್ಯಾಗ ಸಿಗರ ಕಾಡಿಗಿ ಮಾಡಿ
ತಿಡಿ ತಿಡಿ ಹಚ್ಚಿದ ಚಿರಿ ಚಿರಿ ಅಳತಾನ ಜೋ... ಜೋ...

ಕುಂಚಿಗಿ ಕುಲಾಯಿ ಗೊಂಚಲಚ್ಚಿದ ಮುತ್ತು
ಬಿಗಿ ಬಿಗಿದು ಕಟ್ಟಿದರ ಜಿಗಿ ಜಿಗಿದು ಅಳತಾನ ಜೋ... ಜೋ...

ಪರಡಿ ಪಾಯಸ ಮಾಡಿ ಬಿಳಿದು ಬಟ್ಟಲಿ ತುಂಬಿ
ತೂತ್ತು ಮಾಡಿ ಉಣಿಸಿದರೆ ಹಠಮಾಡಿ ಅಳತಾನ ಜೋ... ಜೋ...

ಮಲಗಿಸುವಾಗ ಹಾಡುವ ಹಾಡು

ಆಯಿ ಅಂಗಳದಾಗ ಜೀರಿಗಿ ಗಿಡ ಹುಟ್ಟಿ
ಜೀರಿಗಿ ಸಣ್ಣ ಎಲ್ಲಿ ಸಣ್ಣ ನಮ್ಮ ಸಮರ್ಥನ
ಓದು ಸಲ್ಯಾಗ ದನಿ ಸಣ್ಣ

ಹಾಲ ಕುಡಿದ ಬೆಕ್ಕ ಹಾಯಾಗಿ ಮಲಗ್ಯಾದ ಬ್ಯಾಳಂತ
ಕಣ ಬಿಡಪಾದ
ನಮ್ಮ ಸಮರ್ಥ್ಯನ ಯಾಳಿವ್ವ ನಿದ್ದಿ ಕೆಡಿಸ್ಯದ

ರೋಣಿಯ ಮಳಿ ಬಂದು ಓಣಿಲ್ಲ ಕೆಸರಾಗಿ
ಸಮರ್ಥನ ಗೆಳದಿ
ಕೈಜಾರಿ ಬಿದ್ದರ ಕುಸಲದ ಗೆಜ್ಜೆ ಕೆಸರಾಗ

ಅತ್ತಾನ ಅಳಬುರುಕ ಉಚ್ಚಿಯ ಹೊಯಿದಾನ ಬಚ್ಚಲ ತುಂಬಿ
ಕೇರಿ ತುಂಬ ಸಮರ್ಥನ ಮಾವ ಗಚ್ಚನ ಬಾಯಂತ ಜಗಿದಾನ

ಪರಾಮರ್ಶನ ಗ್ರಂಥಗಳು

ಅಶೋಕ ಕುಮಾರ ರಂಜೇರೆ, ಭಾಷೆ ಮತ್ತು ಶಿಕ್ಷಣ, ೨೦೦೫, ನಿಧಿ ಪ್ರಕಾಶನ, ಹೊಸಪೇಟೆ

ಅಂಗಡಿ ಎಸ್.ಎಸ್., ಕನ್ನಡ ಕ್ರಿಯಾರೂಪಗಳು, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಅಂಗಡಿ ಎಸ್.ಎಸ್., ಭಾಷಾ ಕ್ಷೇತ್ರಕಾರ್ಯ, ೧೯೯೬, ಸಮಾಜ ಪುಸ್ತಕಾಲಯ, ಧಾರವಾಡ

ಎಚ್ಚಸ್ಕೆ, ಬಳಕೆಯ ಭಾಷೆ, ೨೦೦೪, ಚೇತನ ಬುಕ್‌ಹೌಸ್, ಮೈಸೂರು

ಕಾಡದೇವರ ಮಠ ಎಲ್.ಎಸ್., ಕನ್ನಡ ಭಾಷಾ ಅಧ್ಯಯನ, ೧೯೯೬, ವಿಧ್ಯಾನಿಧಿ ಪ್ರಕಾಶನ, ಗದಗ

ಕಲಬುರ್ಗಿ ಎಂ.ಎಂ., ಕನ್ನಡ ನಾಮವಿಜ್ಞಾನ, ೧೯೮೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಕೀರ್ತಿನಾಥ ಕುರ್ತಕೋಟಿ, ಭಾಷೆ ಮತ್ತು ಸಂಸ್ಕೃತಿ, ೨೦೦೬, ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ.

ಕೃಷ್ಣಯ್ಯ ಎಂ.ಎಚ್., ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ, ೧೯೯೯, ಅಂಕಿತ ಪುಸ್ತಕ, ಬೆಂಗಳೂರು

ಕೆಂಪೆಗೌಡ ಕೆ., ಸಾಮಾನ್ಯರ ಭಾಷಾ ವಿಜ್ಞಾನ, ೧೯೯೩, ಭಾರತೀಯ ಪ್ರಕಾಶನ, ಮೈಸೂರು

ಕೆಂಪೆಗೌಡ ಕೆ., ಕನ್ನಡ ಉಪಭಾಷೆಗಳ ಅಧ್ಯಯನ, ೨೦೦೩, ಭಾರತೀಯ ಪ್ರಕಾಶನ, ಮೈಸೂರು

ಗೊರವರ ಬ.ಸೊ., ಕನ್ನಡ ರಚನಾತ್ಮಕ ಮತ್ತು ಸಮಾಜೋ ಭಾಷಿಕ ಅಧ್ಯಯನ, ೨೦೦೮, ಲಡಾಯಿ ಪ್ರಕಾಶನ, ಗದಗ

ಗಿರಿಜಾಪತಿ ಎನ್.ಎಂ., ಕನ್ನಡ ಭಾಷಾಲೋಕ, ೨೦೦೭, ಸುಮುಖ ಪ್ರಕಾಶನ, ಮೈಸೂರು

ಚಿದಾನಂದಮೂರ್ತಿ ಎಂ., ಭಾಷಾ ವಿಜ್ಞಾನ ಮೂಲತತ್ವಗಳು, ೧೯೮೬, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು

ತರಿಕೇರಿ ರಹಮತ್, ಬಹುಭಾಷಾ ಸಂಸ್ಕೃತಿ, ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ತಿರುಮಲೇಶ ಕೆ.ವಿ., ನಮ್ಮ ಕನ್ನಡ, ೨೦೦೬, ಅಭಿನವ ಪ್ರಕಾಶನ, ಬೆಂಗಳೂರು

ತಿರುಮಲೇಶ ಕೆ.ವಿ., ಇನ್ನಷ್ಟು ಕನ್ನಡ, ೨೦೧೧, ಅಭಿನವ ಪ್ರಕಾಶನ, ಬೆಂಗಳೂರು

ನಾರಾಯಣ ಕೆ.ವಿ., ಭಾಷೆ ವಿಶ್ವಕೋಶ, ೨೦೦೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ನಾರಾಯಣ ಕೆ.ವಿ., ಧ್ವನ್ಯಾಲೋಕ ಒಂದು ಅಧ್ಯಯನ, ೧೯೮೮, ಧರಣಿ ಪ್ರಿಂಟರ್ಸ್, ಬೆಂಗಳೂರು

ನಾರಾಯಣ ಕೆ.ವಿ., ಕನ್ನಡ ಜಗತ್ತು ಅರ್ಧಶತಮಾನ, ೨೦೦೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ನಾರಾಯಣ ಕೆ.ವಿ., ಮತ್ತೆ ಭಾಷೆಯ ಸುತ್ತಮುತ್ತ, ೨೦೦೧, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ನಾರಾಯಣ ಕೆ.ವಿ., ನಮ್ಮೊಡನೆ, ನಮ್ಮನುಡಿ, ೨೦೦೫, ಲೋಹಿಯಾ ಪ್ರಕಾಶನ, ಬಳ್ಳಾರಿ

ನಾರಾಯಣ ಕೆ.ವಿ., ದ್ವಿಭಾಷಿಕತೆ, ೧೯೯೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪಾಂಡುರಂಗಬಾಬು ಡಿ., ನುಡಿನೋಟ, ೨೦೦೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಪೂಜಾರ ವ್ಹಿ.ಜಿ., ಕನ್ನಡ ವ್ಯಾಕರಣ ಮತ್ತು ಭಾಷೆ, ೨೦೦೮, ಚೇತನ ಪ್ರಕಾಶನ, ಗುಲಬರ್ಗಾ

ಬಸವರಾಜ ಕೋಡಗುಂಟಿ, ಮಕ್ಕಳ ಭಾಷಾ ವಿಜ್ಞಾನ ಮತ್ತು ಇತರ ಲೇಖನಗಳು, ೨೦೦೭, ಭಂಡಾರ ಪ್ರಕಾಶನ,

ಬಸವರಾಜ ಕೋಡಗುಂಟಿ, ಭಾಷಾ ವಿಶ್ಲೇ,ಣೆ, ೨೦೧೦, ಭಂಡಾರ ಪ್ರಕಾಶನ, ಮಸ್ಕಿ

ಬಸವರಾಜ ಕೋಡಗುಂಟಿ, ಕನ್ನಡ ವಿಭಕ್ತಿ ರೂಪಗಳು, ೨೦೧೧, ಭಂಡಾರ ಪ್ರಕಾಶನ, ಮಸ್ಕಿ

ಬಸವರಾಜ ಕೋಡಗುಂಟಿ, ಮಸ್ಕಿ ಕನ್ನಡದಾಗ ವಿಬಕ್ತಿ ರೂಪಗಳು, ೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಬಿಳಿಗಿರಿ ಎಚ್.ಎಸ್., ವರ್ಣಾತ್ಮಕ ವ್ಯಾಕರಣ, ೧೯೭೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಮಹಾದೇವಯ್ಯ ಪಿ., ಸಾಮಾಜಿಕ ಉಪಭಾಷೆ, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಮಹಾದೇವಯ್ಯ ಪಿ., ದಲಿತರು ಭಾಷೆ ಮತ್ತು ಸಮಾಜ, ೨೦೦೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಮಹಾದೇವಯ್ಯ ಪಿ., ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು, ೨೦೦೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಮಹಾದೇವಯ್ಯ ಪಿ., ಕನ್ನಡ ಮತ್ತು ಜನತೆ, ೨೦೦೪, ಸಾರಾ ಎಂಟರ್ ಪ್ರೈಸಸ್ ಮೈಸೂರು

ಮಹಾದೇವಯ್ಯ ಪಿ., ಕನ್ನಡ ಬಳಕೆಯ ಸಾಮಾಜಿಕ ವಿನ್ಯಾಸ, ೨೦೦೬, ವಿಯಲಕ್ಷ್ಮೀ ಪ್ರಕಾಶನ, ಮೈಸೂರು

ಮರಳಯ್ಯ ಸಾ.ಶಿ., ಕನ್ನಡ ಭಾಷೆಯ ಚರಿತ್ರೆ, ೧೯೯೯, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

ಮುರಿಗೆಪ್ಪ ಎ., ಭಾಷೆಯ ಸ್ವರೂಪ ಮತ್ತು ಐತಿಹಾಸಿಕತೆ, ೨೦೦೦, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ರಾಮಕೃಷ್ಣ ಆರ್., ಭಾಷಾ ವಿಜ್ಞಾನ ವಿಹಾರ, ೧೯೯೯, ತೇಜಸ್ವಿ ಪ್ರಕಾಶನ, ಮೈಸೂರು

ರಾಜೇಶ್ವರಿ ಮಹೇಶ್ವರಯ್ಯ ಆಧುನಿಕ ವರ್ಣಾತ್ಮಕ ಭಾಷಾ ವಿಜ್ಞಾನ, ೨೦೦೩, ಸಮಾಜಪುಸ್ತಕಾಲಯ, ಧಾರವಾಡ

ರಾಜೇಶ್ವರಿ ಮಹೇಶ್ವರಯ್ಯ, ಕನ್ನಡ ಭಾಷಾ ಸ್ವರೂಪ, ೧೯೮೭, ಸಮಾಜ ಪುಸ್ತಕಾಲಯ, ಧಾರವಾಡ

ರಾಮಚಂದ್ರರಾವ್ ಬಿ., ಕನ್ನಡ ಭಾಷೆ ಪ್ರಾದೇಶಿಕ ವೈವಿಧ್ಯ, ೧೯೮೩, ಐಬಿಎಮ್ ಪ್ರಕಾಶನ, ಬೆಂಗಳೂರು

ರಾಮಚಂದ್ರರಾವ್ ಬಿ., ಕನ್ನಡ ಭಾಷೆ ಇತಿಹಾಸ, ೧೯೯೮, ದ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು

ರಾಮಚಂದ್ರ ಸಿ.ಎಸ್., ಕನ್ನಡ ಭಾಷಾಲೋಚನ, ೧೯೯೯, ಮಾಂಗೀರ ಪ್ರಕಾಶನ, ಮೈಸೂರು

ರಾಮಚಂದ್ರ ಸಿ.ಎಸ್., ಚಾರಿತ್ರಿಕ ಭಾಷಾವಿಜ್ಞಾನ ಮೂಲತತ್ವ ಹಾಗೂ ವಿಧಾನಗಳು, ೨೦೦೪, ಶ್ರೀವೆಂಕಟೇಶ ಪ್ರಿಂಟರ್ಸ್, ಬೆಂಗಳೂರು

ರಾಜಪುರೋಹಿತ ಬಿ.ಬಿ., ಭಾಷಾ ವಿಜ್ಞಾನ, ೨೦೧೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ರಾಜಪುರೋಹಿತ ಬಿ.ಬಿ., ಧ್ವನಿಯ ಶ್ರಾವಣ ಮತ್ತು ಚಾಕ್ಷುಷ ರೂಪ, ೨೦೦೯, ಭಂಡಾರ ಪ್ರಕಾಶನ, ಮಸ್ಕಿ

ವೆಂಕಟೇಶ ಜಿ. ಮಲ್ಲೇಪುರಂ, ಕನ್ನಡ ಭಾಷಾಧ್ಯಯನ, ೨೦೦೯, ಸ್ವಾನ್ ಪ್ರಿಂಟರ್ಸ್, ಬೆಂಗಳೂರು

ವಿಲ್ಯಂ ಮಾಡ್ತ, ಕನ್ನಡ ಭಾಷೆಯ ರೂಪರೇಷಗಳು, ೧೯೯೫, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶಂಕರಭಟ್ ಡಿ.ಎನ್., ಕನ್ನಡ ಪದಗಳ ಒಳರಚನೆ, ೧೯೯೯, ಭಾಷಾ ಪ್ರಕಾಶನ, ಮೈಸೂರು

ಶಂಕರಭಟ್ ಡಿ.ಎನ್., ಕನ್ನಡ ವಾಕ್ಯಗಳ ಒಳರಚನೆ, ೨೦೦೪, ಭಾಷಾ ಪ್ರಕಾಶನ, ಮೈಸೂರು

ಶಂಕರಭಟ್ ಡಿ.ಎನ್., ಕನ್ನಡ ಭಾಷೆ ಕಲ್ಪಿತ ಚರಿತ್ರೆ, ೧೯೯೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಶಂಕರಭಟ್ ಡಿ.ಎನ್., ಕನ್ನಡ ನುಡಿ ನಡೆದುಬಂದ ದಾರಿ, ೨೦೦೨, ಭಾಷಾ ಪ್ರಕಾಶನ, ಹೆಗ್ಗೋಡು

ಶಂಕರಭಟ್ ಡಿ.ಎನ್., ಕನ್ನಡ ಶಬ್ದ ರಚನೆ, ೧೯೯೯, ಇಳಾ ಪ್ರಿಂಟರ್ಸ್, ಬೆಂಗಳೂರು

ಶ್ರೀಧರ್ ಎನ್.ಎಸ್., ಇಂದಿನ ಕನ್ನಡ ರಚನೆ ಮತ್ತು ಬಳಕೆ, ೨೦೧೧, ಅಭಿನವ ಮಾರೆನಹಳ್ಳಿ, ವಿಜಯನಗರ ಬೆಂಗಳೂರು

ಶ್ರೀನಿವಾಸ ಮೂರ್ತಿ, ಭಾರತೀಯ ಭಾಷಾದ್ಯಯನ ಪರಂಪರೆ, ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಶಿವಾನಂದ ಸಿ., ಕನ್ನಡ ಆಕೃತಿಮಾ, ೧೯೮೭, ಧವಾನಿ ಪ್ರತಿಮಾ ಪ್ರಕಾಶನ, ಗುಲಬರ್ಗಾ

ಶಿವಾನಂದ ಸಿ., ಪದಗಳ ಚರಿತ್ರೆ, ೧೯೮೧, ಧ್ವನಿ ಪ್ರತಿಮಾ ಪ್ರಕಾಶನ, ಕಲಬುರ್ಗಿ

ಶಿರೂರು ಬಿ.ವ್ಹಿ., ಸಂಶೋಧನೆ ಸ್ವರೂಪ, ೨೦೦೦, ಅನ್ನಪೂರ್ಣ ಪ್ರಕಾಶನ, ಹುಬ್ಬಳಿ

ಸಂಗಮೇಶ ಸವದತ್ತಿಮಠ, ಕಲಬುರ್ಗಿ ಕನ್ನಡ, ೧೯೮೯, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾನಿಲಯ, ಗುಲಬರ್ಗಾ

ಸಂಗಮೇಶ ಸವದತ್ತಿಮಠ, ದ್ರಾವಿಡ ಭಾಷಾ ವ್ಯಾಂಸಗ, ೧೯೯೦, ರೂಪರಶ್ಮಿ ಪ್ರಕಾಶನ, ಕಲಬುರ್ಗಿ

ಸಂಗಮೇಶ ಸವದತ್ತಿಮಠ, ಕನ್ನಡ ಭಾಷಾ ಪ್ರಬೇಧಗಳು, ೧೯೯೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಸಂಗಮೇಶ ಸವದತ್ತಿಮಠ, ಕನ್ನಡ ಭಾಷಾ ಕೈಪಿಡಿ, ೧೯೯೫, ರೂಪರಶ್ಮಿ ಪ್ರಕಾಶನ, ಕಲಬುರ್ಗಿ

ಸಂಗಮೇಶ ಸವದತ್ತಿಮಠ, ಭಾಷಾಲೋಕ, ೧೯೯೯, ರೂಪರಶ್ಮಿ ಪ್ರಕಾಶನ, ಕಲಬುರ್ಗಿ

ಸಂಗಮೇಶ ಸವದತ್ತಿಮಠ, ಕನ್ನಡ ಭಾಷಾ ಸ್ವರೂಪ, ೨೦೦೭, ರೂಪರಶ್ಮಿ ಪ್ರಕಾಶನ, ಕಲಬುರ್ಗಿ

ಸಂಗಮೇಶ ಸವದತ್ತಿಮಠ, ತೌಲನಿಕ ದ್ರಾವಿಡ ಭಾಷಾ ವಿಜ್ಞಾನ, ೨೦೧೦, ರೂಪರಶ್ಮಿ ಪ್ರಕಾಶನ, ಕಲಬುರ್ಗಿ

ಸಾಂಬಮೂರ್ತಿ, ನುಡಿನಡಿ, ೨೦೧೨ ಪಲ್ಲವಿ ಪ್ರಕಾಶನ, ಚನ್ನಪಟ್ಟಣ

ಸಾಂಬಮೂರ್ತಿ, ದಿನದಿನ ೨, ೨೦೦೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಸಾಂಬಮೂರ್ತಿ, ಕನ್ನಡ ಕ್ರಿಯಾರಚನೆ ಬಗೆಗಳು, ೨೦೧೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಸಾಂಬಮೂರ್ತಿ, ಭಾಷೆ ಮತ್ತು ಅಶಾಬ್ಧಿಕ ಸಂವಹನ, ೨೦೦೪, ಸಿ.ವಿ.ಜೆ. ಪಬ್ಲಿಕೇಷನ್ಸ್, ಬೆಂಗಳೂರು

ಸಾಂಬಮೂರ್ತಿ, ಕನ್ನಡ ಪ್ರತ್ಯಯಗಳು, ೨೦೦೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಸೋಮಶೇಖರಗೌಡ, ಆಡುಮಾತಿನ ಕನ್ನಡ, ೧೯೮೦, ಕನ್ನಡ ಸಾಹಿತ್ಯ ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ಸೋಮಶೇಖರಗೌಡ, ಇಂದಿನ ಕನ್ನಡ ಭಾಷಾ ಬಳಕೆ, ೧೯೮೧, ವೆಂಕಣ್ಣಯ್ಯ ಪ್ರತಿಷ್ಠಾನ, ಮೈಸೂರು

ಸೋಮಶೇಖರಗೌಡ, ಭಾಷೆ ರಚನೆ, ಬಳಕೆ, ೨೦೧೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಹಂಪನಾ, ದ್ರಾವಿಡ ಭಾಷಾ ವಿಜ್ಞಾನ, ೧೯೬೬, ಡಿ.ವಿ.ಕೆ.ಮೂರ್ತಿ, ಮೈಸೂರು

ಮಾಹಿತಿದಾರರ ವಿವರ

(ತಂದೆ ತಾಯಿ ಹೆಸರು, ವಯಸ್ಸು, ಜಾತಿ, ವೃತ್ತಿ / ಮಗುವಿನ ಹೆಸರು, ಲಿಂಗ, ವಯಸ್ಸು)

೧. ಅನುಸೂಯ ಗಂಡ ಅರವಿಂದ ರೆಡ್ಡಿ, ಲಿಂಗಾಯಿತ ರೆಡ್ಡಿ, ವ್ಯವಹಾರ, ೨೯, ಚಿಂತಾಮಣಿ (ಹೆಣ್ಣು), ೮ ತಿಂಗಳ

೨. ವಿಜಯಲಕ್ಷ್ಮಿ ಗಂಡ ರಾಜೀವ್ ಕುಲಕರ್ಣಿ, ೨೮, ಬ್ರಾಹ್ಮಣ, ವ್ಯವಹಾರ, ಅನಿರುದ್ (ಗಂಡು), ೩ ವರ್ಷ, ಅನಿಕೇತ (ಗಂಡು), ೨ ವರ್ಷ

೩. ಮಹಾಂತಮ್ಮ ಗಂಡ ಮಲ್ಲಣ್ಣಗೌಡ ಮಾಲಿಪಾಟೀಲ, ೨೬, ವೀರಶೈವ ಲಿಂಗಾಯಿತ, ವ್ಯವಹಾರ, ಅಪ್ಪುಗೌಡ (ಗಂಡು), ೫ ವರ್ಷ

೪. ವಿಜಯಲಕ್ಷ್ಮಿ ಗಂಡ ಭೀಮಣ್ಣಗೌಡ, ೨೭, ಲಿಂಗಾಯಿತ ರೆಡ್ಡಿ, ಕೃಷಿ, ಆಕಾಶರೆಡ್ಡಿ (ಗಂಡು), ೪ ವರ್ಷ

೫. ಬಸಮ್ಮ ಗಂಡ ರಾಮನಾಥರೆಡ್ಡಿ, ೩೦, ಲಿಂಗಾಯಿತ ರೆಡ್ಡಿ, ವ್ಯವಹಾರ, ಶಿವುರೆಡ್ಡಿ (ಗಂಡು), ೪ ವರ್ಷ

೬. ರೇಣುಕಾ ಗಂಡ ರುದ್ರಪ್ಪ ಕುಂಬಾರ, ೨೬, ವೀರಶೈವ ಲಿಂಗಾಯಿತ, ಕೃಷಿ, ಸಹನಾ (ಹೆಣ್ಣು), ೧೮ ತಿಂಗಳ,

೭. ಸುಕನ್ಯಾ ಗಂಡ ಗುರುರಾಜ ಕುಲಕರ್ಣಿ, ೩೨, ಬ್ರಾಹ್ಮಣ, ವ್ಯವಹಾರ, ವಿಷ್ಣು (ಗಂಡು), ೪ ವರ್ಷ

೮. ಪ್ರತಿಕ್ಷಾ ಗಂಡ ಚಂದಣ್ಣ ಕುಲಕರ್ಣಿ, ೨೮, ಬ್ರಾಹ್ಮಣ, ವ್ಯವಹಾರ, ಓಂಕಾರ (ಗಂಡು), ೨ ವರ್ಷ

೯. ಸರಸ್ವತಿ ಗಂಡ ಚಿದಾನಂದ ಕಂಬಾರ, ೩೨, ಕಂಬಾರ, ವ್ಯವಸಾಯ, ಜಯಶ್ರೀ (ಹೆಣ್ಣು), ೩ವರ್ಷ,

೧೦. ಅನುಸೂಬಾಯಿ ಗಂಡ ಪ್ರವೀಣ ಕುಲಕರ್ಣಿ, ೩೫, ಬ್ರಾಹ್ಮಣ, ವ್ಯವಸಾಯ, ಸಂದೀಪ (ಗಂಡು), ೪ ವರ್ಷ

೧೧. ಅಂಬಿಕಾ ಗಂಡ ಅಮೃತ, ೨೦, ಲಿಂಗಾಯಿತ, ವ್ಯವಸಾಯ, ಮಲ್ಲಿಕಾರ್ಜುನ (ಗಂಡು), ೩ ವರ್ಷ

೧೨. ಬಸಮ್ಮ ಗಂಡ ಬಸವರಾಜ, ೩೫, ವೀರಶೈವ ಲಿಂಗಾಯಿತ, ವ್ಯವಹಾರ, ಸಚ್ಚಿನ್ (ಗಂಡು), ೪ ವರ್ಷ

೧೩. ಲಕ್ಷ್ಮೀ ಗಂಡ ಬಸವರಾಜ ಸಿಂಪಿಗೆರೆ, ೨೮, ಲಿಂಗಾಯಿತ, ವ್ಯವಹಾರ, ವಿಕಾಶ (ಗಂಡು), ೩ ವರ್ಷ

೧೪. ದೇವಕಿ ಗಂಡ ಹಣಮಂತ್ರಾಯ, ೩೬, ಹೊಲೆಯ, ಕೂಲಿ, ಜೈಭೀಮ (ಗಂಡು), ೩ ವರ್ಷ

೧೫. ಮಾಳಮ್ಮ ಗಂಡ ಮಲ್ಲಪ್ಪ ಪೂಜಾರಿ, ೨೭, ಕುರುಬ, ವ್ಯವಸಾಯ, ನಿಂಗಪ್ಪ (ಗಂಡು), ೨೨ ತಿಂಗಳು

೧೬. ಸಂಕ್ರಮ್ಮ ಗಂಡು ಭೀಮರಾಯ ಕುಂಬಾರ, ೩೨, ಕುಂಬಾರ, ಕೃಷಿ, ಮಹೇಶ (ಗಂಡು), ೫ ವರ್ಷ

೧೭. ಭಾಗಮ್ಮ ಗಂಡ ಅಂಬ್ಲಪ್ಪ ದಾಸಪೂರ, ೨೪, ಬೇಡರು, ಕೂಲಿ, ಅಂಬಿಕಾ (ಹೆಣ್ಣು), ೨೮ ತಿಂಗಳು

೧೮. ರೇಖಾ ಗಂಡ ಸಂಗಬಸಪ್ಪ ದೊರಿ, ೨೮, ಲಿಂಗಾಯಿತ, ವ್ಯವಹಾರ, ಸಂಪತ್ (ಗಂಡು), ೩ ವರ್ಷ

೧೯. ಸಂಗೀತ ಗಂಡ ಸಂಗಣ್ಣ ಕುಂಬಾರ, ೨೬, ಲಿಂಗಾಯಿತ, ಕೃಷಿ, ಮುತ್ತಣ್ಣ (ಗಂಡು), ೩ ವರ್ಷ

೨೦. ಸಂಗಮ್ಮ ಗಂಡ ಕಿಟ್ನಪ್ಪ ಕೊಡಚಿ, ೩೦, ಹೊಲೆಯ, ಕೂಲಿ, ಭೀಮವ್ವ (ಹೆಣ್ಣು), ೪ ವರ್ಷ

೨೧. ಕಾಂತಮ್ಮ ಗಂಡ ಶಿವರಾಜ ಮಡಗಣಿ, ೨೬, ಕುರುಬ, ಕೂಲಿ, ಭೀಮರತಿ (ಹೆಣ್ಣು), ೩ವರ್ಷ

೨೨. ಸಂಗಮ್ಮ ಗಂಡ ಬಾಲಪ್ಪ, ೩೩, ಮಾದಿಗ, ಕೂಲಿ, ಶರಣಮ್ಮ (ಹೆಣ್ಣು), ೨೨ ತಿಂಗಳು

೨೩. ಸವಿತಾ ಗಂಡ ಶಿವಪ್ಪ, ೨೫, ಲಿಂಗಾಯಿತ, ಕೃಷಿ, ಪ್ರದೀಪ (ಗಂಡು), ೩ ವರ್ಷ

೨೪. ರಶ್ಮಿ ಗಂಡ ಸಿದ್ಧಣ್ಣ, ೨೦, ಲಿಂಗಾಯಿತ, ವ್ಯವಸಾಯ, ಕಿರಣ (ಗಂಡು), ೧ ವರ್ಷ

೨೫. ಲಕ್ಷ್ಮೀ ಗಂಡ ಹಣಮಂತ್ರಾಯ, ೩೦, ಬೇಡರು, ಕೃಷಿ, ರಂಗಮ್ಮ (ಹೆಣ್ಣು), ೪ ವರ್ಷ

೨೬. ಕಾಳಮ್ಮ ಗಂಡ ಮಾರೆಪ್ಪ ಸಜ್ಜನ್, ೨೪, ಹೊಲೆಯ, ಕೂಲಿ, ಈಶಪ್ಪ (ಗಂಡು), ೩ ವರ್ಷ

೨೭. ಶಶಿಕಲಾ ಗಂಡು ಗೋಪಣ್ಣ, ೨೨, ಬೇಡರು, ಕೂಲಿ, ಅಶ್ವಿನಿ (ಹೆಣ್ಣು), ೨೮ ತಿಂಗಳು

೨೮. ಜಯಶ್ರೀ ಗಂಡ ಸಂಗಣ್ಣ, ೨೮, ಲಿಂಗಾಯಿತ, ವ್ಯವಹಾರ, ಲಕ್ಷ್ಮೀ (ಹೆಣ್ಣು), ೨೬ ತಿಂಗಳ

೨೯. ಲಕ್ಷ್ಮಿ ಗಂಡ ರಾಘವೇಂದ್ರ, ೧೮, ಬೇಡರು,ಕೂಲಿ, ದಯಾನಂದ (ಗಂಡು), ೧೮ ತಿಂಗಳು

೩೦. ಮಾನಮ್ಮ ಗಂಡ ಈಶಪ್ಪ ನಾಯ್ಕೋಡಿ, ೨೦, ಕಬ್ಬಲಿಗ, ಕೂಲಿ, ಪಲ್ಲವಿ (ಹೆಣ್ಣು), ೮ ತಿಂಗಳು

೩೧. ಜಗದೇವಿ ಗಂಡ ಚಂದ್ರಕಾಂತ ದಾವರೆ, ೨೮, ವೀರಶೈವ ಲಿಂಗಾಯಿತ, ವ್ಯವಸಾಯ, ತನುಶ್ರೀ (ಹೆಣ್ಣು), ೨೪ ತಿಂಗಳು

೩೨. ಬಸಮ್ಮ ಗಂಡ ಭೀಮೇಶ ಹವಲ್ದಾರ, ೨೫, ಬೇಡರ ವ್ಯವಸಾಯ, ಬೀಮಣ್ಣ (ಗಂಡು), ೩೫ ತಿಂಗಳು

೩೩. ಕೃಷ್ಣಮ್ಮ ಗಂಡ ಹಣಮಂತ್ರಾಯ ಕೂಡಿಗಿ, ೨೭, ಬೆಡರ, ಕೃಷಿ, ಬಾಬು (ಗಂಡು), ೩೦ ತಿಂಗಳು

೩೪. ಸಾಬಮ್ಮ ಗಂಡ ಮಾನಯ್ಯ ಗೌಡಗೇರಿ, ೨೮, ಬೇಡರ, ಕೃಷಿ, ಕಾವ್ಯ (ಹೆಣ್ಣು), ೩೮ ತಿಂಗಳು

೩೫. ಮಾಲಾಶ್ರೀ ಗಂಡ ಮಲ್ಲಪ್ಪ ಕುಂಬಾರ, ೨೮, ಲಿಂಗಾಯಿತ, ಕೃಷಿ, ಸಚ್ಚಿನ್ (ಗಂಡು), ೫ ವರ್ಷ

೩೬. ಅಂಬಮ್ಮ ಗಂಡ ಮಹಾದೇವಪ್ಪ ದಿಗ್ಗಿ, ೩೫, ಮಾದಿಗ, ಕೂಲಿ, ಮರೆಪ್ಪ (ಗಂಡು), ೪ ವರ್ಷ

೩೭. ಪಿಲ್ಲವ್ವ ಗಂಡ ಜಟ್ಟೆಪ್ಪ, ೩೦, ಹೊಲೆಯ, ಕೂಲಿ, ಮಲ್ಲಪ್ಪ (ಗಂಡು), ೩ ವರ್ಷ ೫ ತಿಂಗಳು

೩೮. ಸಾವಿತ್ರಮ್ಮ ಗಂಡ ಭೀರಪ್ಪ ಪೂಜಾರಿ, ೩೨, ಕುರುಬ, ಕೃಷಿ, ಮಾಳಪ್ಪ (ಗಂಡು), ೪ ವರ್ಷ

೩೯. ಶರಣಮ್ಮ ಗಂಡ ಸಂಜೀವಪ್ಪ ಗಡಗೂರು, ೨೯, ಗೊಲ್ಲರು, ವ್ಯವಸಾಯ, ಶಾಂತಪ್ಪ (ಗಂಡು), ೨ ವರ್ಷ ೮ ತಿಂಗಳು

೪೦. ಪಲ್ಲವಿ ಗಂಡ ಸಂಗಣ್ಣ, ೨೮, ವೀರಶೈವ ಲಿಂಗಾಯಿತ, ವ್ಯವಸಾಯ, ಸಹನಾ (ಹೆಣ್ಣು), ೨ ವರ್ಷ

೪೧. ನಿಂಗಮ್ಮ ಗಂಡ ಸಾಯಿಬಣ್ಣ, ೩೨, ಬೇಡರು, ಕೂಲಿ, ಅಭಿಷೇಕ (ಗಂಡು), ೨ ವರ್ಷ

೪೨. ಶಾರಿಖಾ ಗಂಡ ಅರವಿಂದ ಕುಲಕರ್ಣಿ, ೩೦, ಬ್ರಾಹ್ಮಣ, ವ್ಯವಹಾರ, ಮುಕುಂದ (ಗಂಡು), ೫ ವರ್ಷ

೪೩. ನಿರ್ಮಲ ಗಂಡ ಶರಣಪ್ಪ, ೨೮, ಲಿಂಗಾಯಿತ, ಕೃಷಿ, ಅನ್ನಪೂರ್ಣ (ಹೆಣ್ಣು), ೨ ವರ್ಷ

೪೪. ಸೌಭಾಗ್ಯಮ್ಮ ಗಂಡ ಮಲ್ಲಯ್ಯ ಪೂಜಾರಿ, ೩೩, ಕುರುಬ, ಕೂಲಿ, ಮಹಾದೇವಪ್ಪ (ಗಂಡು), ೨೮ ತಿಂಗಳು

೪೫. ದೇವಕಿ ಗಂಡ ಮರೆಪ್ಪ, ೨೨, ಹೊಲೆಯ, ಕೂಲಿ, ಯಲ್ಲಮ್ಮ (ಹೆಣ್ಣು), ೧೮ ತಿಂಗಳು

೪೬. ಶರಮ್ಮ ಗಂಡ ವೀರಭದ್ರಪ್ಪ ಕುಂಬಾರ, ೧೯, ಲಿಂಗಾಯಿತ, ಕೃಷಿ, ಸುಪ್ರಿತಾ (ಹೆಣ್ಣು), ೧೩ ತಿಂಗಳು

೪೭. ಸುವರ್ಣ ಗಂಡ ಶರಣಬಸವ ಸಿಂಪಿಗೇರ, ೨೨, ಲಿಂಗಾಯಿತ, ಕೃಷಿ, ವಿಶಾಖ (ಗಂಡು), ೧೪ ತಿಂಗಳು

೪೮. ಮಾಳಮ್ಮ ಗಂಡ ರಾಯಪ್ಪ, ೨೪, ಹೊಲೆಯ, ಕೂಲಿ, ಪರಶುರಾಮ (ಗಂಡು), ೧೫ ತಿಂಗಳು

೪೯. ಶರಣಮ್ಮ ಗಂಡ ಬಾಬು ಕೂಡಿಗಿ, ೩೦, ಬೇಡರ, ಕೂಲಿ, ಭೀಮಣ್ಣ (ಗಂಡು), ೪ ವರ್ಷ

೫೦. ತಿಮ್ಮವ್ವ ಗಂಡ ಸಂಜೀವಪ್ಪ, ೨೬, ಕುರುಬ, ವ್ಯವಸಾಯ, ಶಾಂತಪ್ಪ (ಗಂಡು), ೨ ವರ್ಷ ೨ ತಿಂಗಳು

ಕನ್ನಡ ಭಾಷಾಧ್ಯಯನ ವಿಭಾಗ